ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ47 । ನವೆಂಬರ್16–22, 2020 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com





ಎಡ ಪಕ್ಷಗಳ ಸಾಧನೆ

ಬಿಹಾರ

ಎನ್‌ಡಿಎ ಅಲ್ಲ ಗೆಲುವು ಗಮನಾರ್ಹ ಹಿನ್ನಡೆ



ರೈತ-ಕೃಷಿಯ ಸರ್ವನಾಶಕ್ಕೆ ವಿದ್ಯುತ್ ಕಾಯ್ದೆ



ಅಬ್ ಕೀ ಬಾರ್ ಟ್ರಂಪ್ ಸರ್ಕಾರ್ ಇಲ್ಲ!



ಮತ್ತೊಂದು ಪ್ಯಾಕೇಜ್ ಮತ್ತೊಂದು ಗಿಮಿಕ್

ಗುಲಾಮಗಿರಿಗೆ ತಳ್ಳುವ ಧೋರಣೆಗಳಿಗೆ ಕಾರ್ಮಿಕ ವರ್ಗದ ಮಹಾ ಸವಾಲು



ಕಾನೂನು ಬೇಕು ಮರ್ಯಾದೆ ಹತ್ಯೆ –ತಡೆಗೆ ‘ಲವ್–ಜಿಹಾದ್’ ಮಿಥ್ಯೆಗಳಲ್ಲ!

ಬಿಹಾರದ ಮತದಾರರಿಗೆ ಎಡಪಕ್ಷಗಳ ಅಭಿನಂದನೆಗಳು

“ಶ್ರಮಜೀವಿಗಳ ಹಿತರಕ್ಷಣೆಯ ಹೋರಾಟಗಳು ಚೈತನ್ಯಪೂರ್ಣವಾಗಿ ಮುಂದುವರೆಯುತ್ತವೆ”



ಬಿಹಾರದ ಮತದಾರರನ್ನು ಅವರು ‘ಮಹಾಗಟ್‌ಬಂಧನ್’ಗೆ ನೀಡಿರುವ ಬೆಂಬಲಕ್ಕಾಗಿ ಅಭಿನಂದಿಸುತ್ತ ಮೂರು ಎಡಪಕ್ಷಗಳು –ಸಿಪಿಐ(ಎಂ), ಸಿಪಿಐ ಮತ್ತು ಸಿಪಿಐ(ಎಂಎಲ್) ಒಂದು ಜಂಟಿ ಹೇಳಿಕೆಯನ್ನು ನೀಡಿವೆ.

ಈ ರಂಗದ ಭಾಗವಾಗಿ ಸ್ಪರ್ಧಿಸಿದ್ದ ಎಡಪಕ್ಷಗಳು ಈ ಚುನಾವಣೆಯಲ್ಲಿ ಆಳುವ ಬಿಜೆಪಿ–ಜೆಡಿ(ಯು) ಮತ್ತು ಅವರ ಸರಕಾರದ ವಿರುದ್ಧ ಒಂದು ಕೆಚ್ಚಿನ ಸ್ಪರ್ಧೆಯನ್ನು ಕೊಟ್ಟು ‘ಮಹಾಗಟ್‌ಬಂಧನ್’ಗೆ ತಮ್ಮ ಕೊಡುಗೆ ನೀಡಿವೆ.

ಜನಗಳ ಜೀವನೋಪಾಯಗಳು ಮತ್ತು ಉದ್ಯೋಗದ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಯುವಜನರ ಮತ್ತು ಜನತೆಯ ಸ್ಪಂಧನ ಚೇತೋಹಾರಿಯಾಗಿತ್ತು ಎಂದು ಎಡಪಕ್ಷಗಳು ಹೇಳಿವೆ.

ಇವು ಒಟ್ಟಾಗಿ ಸ್ಪರ್ಧಿಸಿದ್ದ 29 ಕ್ಷೇತ್ರಗಳಲ್ಲಿ 16ರಲ್ಲಿ ಗೆದ್ದಿವೆ: ಸಿಪಿಐ(ಎಂಎಲ್) –12, ಸಿಪಿಐ(ಎಂ) –2 ಮತ್ತು ಸಿಪಿಐ–2.

ಎರಡು ಮೈತ್ರಿಕೂಟಗಳ ಮತಗಳಿಕೆಯಲ್ಲಿ ಅಂತರ ಬಹಳ ಬಹಳ ಕಡಿಮೆ. ಬಿಜೆಪಿ ನೇತೃತ್ವದ ಮೈತ್ರಿಕೂಟದ 2019ರ ಲೋಕಸಭಾ ಚುನಾವಣೆಗಳ ಮತಗಳಿಕೆಗೆ ಹೋಲಿಸಿದರೆ ಈ ಚುನಾವಣೆಗಳಲ್ಲಿ 12ಶೇ.ದಷ್ಟು ಕಳಕೊಂಡಿದೆ ಎಂಬ ಸಂಗತಿಯತ್ತ ಎಡಪಕ್ಷಗಳು ಗಮನ ಸೆಳೆದಿವೆ.

ಈಗಿರುವ ಮುಖ್ಯಮಂತ್ರಿಗಳ ಪಕ್ಷ, ಜನತಾ ದಳ(ಯು) ಕಳೆದ ವಿಧಾನಸಭಾ ಚುನಾವಣೆಗಳಲ್ಲಿ 71 ಸ್ಥಾನಗಳನ್ನು ಪಡೆದಿದ್ದರೆ, ಈ ಬಾರಿ ಕೇವಲ 43 ಸೀಟುಗಳಲ್ಲಿ ಗೆದ್ದಿದೆ. ಮತದಾರರ ಒಂದು ದೊಡ್ಡ ವಿಭಾಗ ಅದನ್ನು ತಿರಸ್ಕರಿಸಲು ಒಂದು ಕಾರಣ ಮುಖ್ಯಮಂತ್ರಿಗಳು ಆಗಿನ ಮಹಾಗಟ್‌ಬಂಧನ್‌ನಿಂದ ಬಿಜೆಪಿಗೆ ಪಕ್ಷಾಂತರ ಮಾಡಿದ್ದು.

ಬಿಜೆಪಿ ಮತ್ತು ಪ್ರಧಾನ ಮಂತ್ರಿಗಳು ಕೋಮುವಾದಿ ಅಜೆಂಡಾದ ರಾಗವನ್ನು ತಾರಕಕ್ಕೆ ಏರಿಸಿದರು, ಮತದಾರರ ನಡುವೆ ಕೋಮುಧ್ರುವೀಕರಣ ತರಲು ಪ್ರಯತ್ನಿಸಿದರು. ಇದನ್ನು, ಮಹಾಗಟ್‌ಬಂಧನ್, ಲಾಕ್‌ಡೌನ್ ಉಂಟುಮಾಡಿರುವ ಆರ್ಥಿಕ ಹತಾಶೆ ಮತ್ತು ಕೊವಿಡ್ ಮಹಾಸೋಂಕನ್ನು ಮತ್ತು ನಾಗಾಲೋಟ ಹೂಡಿರುವ ನಿರುದ್ಯೋಗವನ್ನು ತಡೆಯುವಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ವಿಫಲತೆಗಳ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ ಸಾಕಷ್ಟು ಪರಿಣಾಮಕಾರಿಯಾಗಿ ಎದುರಿಸಿತು.

ಮತಗಳಿಕೆಯ ಕೊನೆಯ ಹಂತಗಳಲ್ಲಿ ಕೆಲವು ಸ್ಪಷ್ಟ ಅನಿಯಮಿತತೆಗಳು ನಡೆದಿವೆ, ಇವನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಶೀಲಿಸುವ ಅಗತ್ಯವಿದೆ ಎಂದು ಅಭಿಪ್ರಾಯ ಪಟ್ಟಿರುವ ಎಡಪಕ್ಷಗಳು ಮಹಾಗಟ್‌ಬಂಧನ್‌ನ ಇತರ ಭಾಗೀದಾರರೊಂದಿಗೆ ಎಡಪಕ್ಷಗಳು ಈ ವಿಷಯಗಳನ್ನು ಬಾರತದ ಚುನಾವಣಾ ಆಯೋಗದ ಸಮ್ಮುಖ ಕೈಗೆತ್ತಿಕೊಳ್ಳುತ್ತವೆ ಎಂದು ಹೇಳಿವೆ.

ವಿಧಾನಸಭೆಯಲ್ಲಿ ಎಡಪಕ್ಷಗಳ ಉಪಸ್ಥಿತಿಯನ್ನು ಶ್ರಮಜೀವಿ ಜನಗಳ ಹಿತರಕ್ಷಣೆಗೆ, ಉದ್ಯೋಗಗಳು ಮತ್ತು ಸಾಮಾಜಿಕ/ ಆರ್ಥಿಕ ಅನ್ಯಾಯಗಳನ್ನು ಕುರಿತಾದ ಪ್ರಧಾನ ಪ್ರಶ್ನೆಗಳನ್ನು ಎತ್ತಲು ಬಳಸಿಕೊಳ್ಳಲಾಗುವುದು. ಈ ಗುರಿಸಾದನೆಯ ಹೋರಾಟಗಳು ಹುರುಪಿನಿಂದ ಮುಂದುವರೆಯುತ್ತವೆ ಎಂದು ಈ ಮೂರು ಎಡಪಕ್ಷಗಳು ಭರವಸೆ ನೀಡಿವೆ.

ಡಿಜಿಟಲ್ ಮಾಧ್ಯಮಗಳ ಮೇಲೆ ನೇರ ಸರಕಾರೀ ಹತೋಟಿ ಸಲ್ಲದು

ಕೇಂದ್ರ ಸರಕಾರ ಒಂದು ಆಧಿಸೂಚನೆಯ ಮೂಲಕ ಎಲ್ಲ ಡಿಜಿಟಲ್ ಮಾಧ್ಯಮ ವೇದಿಕೆಗಳನ್ನು ಮತ್ತು ಆನ್‌ಲೈನ್ ವಿಷಯ ಒದಗಿಸುವ ತಾಣಗಳನ್ನು ಸೂಚನಾ ಮತ್ತು ಪ್ರಸಾರಣ ಮಂತ್ರಾಲಯದ ವ್ಯಾಪ್ತಿಯೊಳಕ್ಕೆ ತಂದಿದೆ. ಇವು ಈ ಮೊದಲು ಮಾಹಿತಿ ಮತ್ತು ಇಲೆಕ್ಟ್ರಾನಿಕ್ ತಂತ್ರಜ್ಞಾನ ಮಂತ್ರಾಲಯದ ಅಡಿಯಲ್ಲಿದ್ದವು, ಮತ್ತು ಡಿಜಿಟಲ್ ವೇದಿಕೆಗಳು ಮತ್ತು ಮಧ್ಯಂತರ ವ್ಯವಸ್ಥೆಗಳನ್ನು ನಿರ್ವಹಿಸುವ ಮಾಹಿತಿ ತಂತ್ರಜ್ಞಾನ(ಐಟಿ) ಕಾಯ್ದೆಯ ಅಡಿಯಲ್ಲಿ ಇದ್ದವು.

ಈ ಅಧಿಸೂಚನೆ ಕೇಂದ್ರ ಸರಕಾರ ಈ ಡಿಜಿಟಲ್ ಮಾಧ್ಯಮಗಳಲ್ಲಿ ಏನು ಪ್ರಕಟವಾಗಬೇಕು ಎಂಬುದನ್ನು “ನಿಯಂತ್ರಿಸು’ವತ್ತ ಸಾಗುತ್ತಿದೆ ಎಂಬುದರ ಒಂದು ಸ್ಪಷ್ಟ ಅಭಿವ್ಯಕ್ತಿಯಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಗಮನಾರ್ಹ ಮಟ್ಟದ ವರೆಗೆ ಪ್ರಿಂಟ್ ಮತ್ತು ಇಲೆಕ್ಟ್ರಾನಿಕ್ಸ್/ದೃಶ್ಯ ಮಾಧ್ಯಮಗಳ ಬಾಯಿ ಮುಚ್ಚಿಸಿದ ನಂತರ ಸರಕಾರ ಈಗ ಡಿಜಿಟಲ್ ಮಾಧ್ಯಮವನ್ನು ಹತೋಟಿಯಲ್ಲಿಡುವತ್ತ ಸಾಗಿದೆ ಎಂದಿದೆ.

ಒಂದು ಸರಕಾರೀ ಇಲಾಖೆ ಡಿಜಿಟಲ್ ಮಾಧ್ಯಮದ ಮೇಲೆ ಹತೋಟಿಯಿಡುವುದನ್ನು ಸಿಪಿಐ(ಎಂ) ವಿರೋಧಿಸುತ್ತದೆ, ಈಗಿರುವ ಕಾಯ್ದೆಗಳು ಮತ್ತು ಐಟಿ ಕಾಯ್ದೆ ಒಂದು ಆರೋಗ್ಯಕರ ಡಿಜಿಟಲ್ ಮಾಧ್ಯಮವನ್ನು ಹೊಂದಲು ಸಾಕಷ್ಟಾಗುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಅರ್ಥವ್ಯವಸ್ಥೆ ಮಬ್ಬಾಗಿದೆ–ಇದೀಗ ಅಧಿಕೃತ ಸಂಗತಿ

ಈಗ ಇದು ಜೀವನೋಪಾಯದ ಬಿಕ್ಕಟ್ಟು ಅಲ್ಲ, ಬದುಕುಳಿಯುವ ಬಿಕ್ಕಟ್ಟು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭಾರತೀಯ ಅರ್ಥವ್ಯವಸ್ಥೆ ತೀವ್ರ ನಿಧಾನಗತಿಗೆ ಇಳಿದಿದೆ ಎಂಬುದನ್ನು ಈಗ ರಿಝರ್ವ್ ಬ್ಯಾಂಕ್ ಅಧಿಕೃತವಾಗಿ ದೃಢಪಡಿಸಿದೆ., “ಭಾರತ 2020–21ರ ಮೊದಲ ಅರ್ಧವರ್ಷದಲ್ಲಿ ತನ್ನ ಇತಿಹಾಸದಲ್ಲಿ ಮೊದಲ ಬಾರಿಗೆ ಒಂದು ತಾಂತ್ರಿಕ ಹಿಂಜರಿತವನ್ನು ಪ್ರವೇಶಿಸಿದೆ’ ಎಂದು ಹೇಳಿದೆ.

ಜಿಡಿಪಿ ಎಪ್ರಿಲ್–ಜೂನ್ ತ್ರೈಮಾಸಿಕದಲ್ಲಿ 23.9ಶೇ. ದಷ್ಟು ಆಳಕ್ಕೆ ಕುಸಿದ ನಂತರ, ಈಗ ಸಪ್ಟಂಬರ್ 2020ರಂದು ಕೊನೆಗೊಂಡ ಈ ತ್ರೈಮಾಸಿಕದಲ್ಲಿ ಮತ್ತೆ 8.6ಶೇ.ದಷ್ಟು ಇಳಿದಿದೆ.

ಜಿಡಿಪಿ ಈ ರೀತಿಯಲ್ಲಿ ಸತತವಾಗಿ ಸಂಕುಚನಗೊಳ್ಳುತ್ತಿರುವುದು ಜೀವಗಳನ್ನು, ಜೀವನೋಪಾಯಗಳನ್ನು ಧ್ವಂಸ ಮಾಡುತ್ತಿದೆ, ಈ ಮೂಲಕ ನಮ್ಮ ಕೋಟ್ಯಂತರ ಜನಗಳನ್ನು ಬಡತನ, ಹಸಿವು, ಕಷ್ಟಕೋಟಲೆಗಳತ್ತ ತಳ್ಳುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ. ಇದೀಗ ಜೀವನೋಪಾಯದ ಬಿಕ್ಕಟ್ಟು ಅಲ್ಲ, ಬದುಕುಳಿಯುವ ಬಿಕ್ಕಟ್ಟು ಎಂದು ಮುಂದುವರೆದು ಅದು ವರ್ಣಿಸಿದೆ.

ಮೋದಿ ಸರಕಾರದ ಧೋರಣೆಗಳಿಂದ ಹೀಗೆ ಭಾರತೀಯ ಅರ್ಥವ್ಯವಸ್ಥೆಯ ಬೃಹತ್‌ನಾಶವನ್ನು ತಡೆಯುವುದು ನಮ್ಮ ಬಹು ಅಗತ್ಯವಾದ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸುವ ಮೂಲಕ ಮಾತ್ರವೇ ಸಾಧ್ಯ. ಇದು ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸಿ, ಆಂತರಿಕ ಬೇಡಿಕೆಯನ್ನು ಮೇಲೆತ್ತುತ್ತದೆ ಎಂದು ಪುನರುಚ್ಚರಿಸಿರುವ ಪೊಲಿಟ್‌ಬ್ಯುರೊ ಇದು ಯಾವುದೇ ಆರ್ಥಿಕ ಪುನಶ್ಚೇತನವನ್ನು ಆರಂಭಿಸಲು ಇರುವ ಏಕೈಕ ದಾರಿ ಎಂದು ಹೇಳಿದೆ.

ರಾಷ್ಟ್ರೀಯ ಆಸ್ತಿಗಳ ಲೂಟಿ ನಿಲ್ಲಬೇಕು, ಚುನಾವಣಾ ಬಾಂಡುಗಳು ಮತ್ತು ಪ್ರಧಾನ ಮಂತ್ರಿಗಳ ಖಾಸಗಿ ನಿಧಿಯ ಮೂಲಕ ಅಪಾರ ಐಶ್ವರ್ಯ ರಾಶಿ ಹಾಕುವುದು ಕೊನೆಗೊಳ್ಳಬೇಕು. ಇವುಗಳ ಬದಲು ಈ ಮೊತ್ತಗಳನ್ನು, ಯಾವ ಭಾರತೀಯನೂ ಹಸಿದಿರದಂತೆ ಖಾತ್ರಿ ಪಡಿಸಲು ಸಾಧ್ಯವಾಗುವಂತೆ ಸಾರ್ವಜನಿಕ ಹೂಡಿಕೆಗಳ ಹೆಚ್ಚಳಕ್ಕೆ ಬಳಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ದಿಲ್ಲಿ ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ: ವಿದ್ಯಾರ್ಥಿಗಳು, ಮಹಿಳೆಯರ ಪ್ರತಿಭಟನೆ

ದಿಲ್ಲಿಯ ಲೇಡಿ ಶ್ರೀರಾಮ್ (ಎಲ್‌ಎಸ್‌ಆರ್) ಮಹಿಳಾ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿನಿ ಐಶ್ವರ್ಯಾ ರೆಡ್ಡಿ ನವಂಬರ್ 3 ರಂದು ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿರುವ ತನ್ನ ಮನೆಯಲ್ಲಿ ನವಂಬರ್ 2 ರಂದು ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ದೇಶವನ್ನು ಮತ್ತೊಮ್ಮೆ ತಲ್ಲಣಗೊಳಿಸಿದೆ.

ಇದರ ವಿರುದ್ಧ ದಿಲ್ಲಿಯಲ್ಲಿ ನವಂಬರ್ 9ರಂದು ವಿದ್ಯಾರ್ಥಿಗಳ, ಮಹಿಳೆಯರ ಸಂಘಟನೆಗಳು ಪ್ರತಿಭಟನೆ ನಡೆಸಿ ಆಕೆಗೆ ನ್ಯಾಯ ಸಲ್ಲುವಂತಾಗಬೇಕು ಎಂದು ಆಗ್ರಹಿಸಿವೆ.

ಐಶ್ವರ್ಯಾ ಒಬ್ಬ ಪ್ರತಿಭಾವಂತ ವಿದ್ಯಾರ್ಥಿನಿ. ರಾಜ್ಯದ ಬೋರ್ಡ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದರಿಂದ ದಿಲ್ಲಿಯ ಪ್ರತಿಷ್ಠಿತ ಲೇಡಿ ಶ್ರೀರಾಮ ಕಾಲೇಜಿನಲ್ಲಿ ಗಣಿತಶಾಸ್ತ್ರ–ಬಿ.ಎ. ಯಲ್ಲಿ ಪ್ರವೇಶ ಪಡೆದಿದ್ದಳು. ಅಲ್ಲಿ ತನ್ನ ಪ್ರತಿಭೆಯಿಂದಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದ ಪ್ರತಿಷ್ಠಿತ ಇನ್‌ಸ್ಪಾಯರ್ ಸ್ಕಾಲರ್‌ಶಿಪ್‌ಗೆ ಆಯ್ಕೆಯಾಗಿದ್ದಳು. ಆದರೆ ಒಂದು ವರ್ಷಕ್ಕೂ ಹೆಚ್ಚು ಅವಧಿಯ ಸ್ಕಾಲರ್‌ಶಿಪ್ ಮೊತ್ತ ಆಕೆಗೆ ಸಿಕ್ಕಿಲ್ಲ. ಅಯೋಜಿತ ಲಾಕ್‌ಡೌನ್ ಉಂಟು ಮಾಡಿದ ಬಿಕ್ಕಟ್ಟು ಆಕೆಯ ಬಲಿ ತೆಗೆದುಕೊಂಡಿದೆ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಲಾಕ್‌ಡೌನ್ ಹಿನ್ನೆಲೆಯಲ್ಲಿ ಆಕೆಗೆ ಮಾರ್ಚ್ ತಿಂಗಳ ನಂತರ ಮಂತ್ರಾಲಯ ಸ್ಕಾಲರ್‌ಶಿಪ್ ಹಣವನ್ನು ಬಿಡುಗಡೆ ಮಾಡುವುದನ್ನು ನಿಲ್ಲಿಸಿದ್ದರಿಂದ ವಿದ್ಯಾರ್ಥಿಗಳು ಮತ್ತು ಅವರ ಪಾಲಕರು ಎಂತಹ ಭೀಕರ ಆರ್ಥಿಕ ಸಂಕಟಗಳನ್ನು ಎದುರಿಸಬೇಕಾಗಿ ಬಂದಿದೆ ಎಂಬುದಕ್ಕೆ ಇದೊಂದು ಉದಾಹರಣೆ.



“ನನ್ನಿಂದಾಗಿ ನನ್ನ ಕುಟುಂಬ ಆನೇಕ ಆರ್ಥಿಕ ಕಷ್ಟಗಳನ್ನು ಅನುಭವಿಸುತ್ತಿದೆ. ನಾನು ನನ್ನ ಕುಟುಂಬಕ್ಕೊಂದು ಹೊರೆಯಾಗಿದ್ದೇನೆ. ನನ್ನ ಶಿಕ್ಷಣವೂ ಹೊರೆಯಾಗಿದೆ. ನನಗೆ ಕಲಿಯಲು ಸಾಧ್ಯವಿಲ್ಲದಿದ್ದರೆ, ಬದುಕಲು ಸಾಧ್ಯವಿಲ್ಲ’ ಎಂದು ಚೀಟಿ ಬರೆದಿಟ್ಟು ಐಶ್ವರ್ಯಾ ಆತ್ಮಹತ್ಯೆ ಮಾಡಿಕೊಂಡಳು ಎಂದು ವರದಿಯಾಗಿದೆ.

ಐಶ್ವರ್ಯಾಳ ಆತ್ಮಹತ್ಯೆ ಬಡ ಹಿನ್ನೆಲೆಯಿಂದ ಬಂದಿರುವ ಇನ್ನೊಬ್ಬ ಪ್ರತಿಭಾವಂತ ವಿದ್ಯಾರ್ಥಿಯ ಸಾಂಸ್ಥಿಕ ಕೊಲೆ ಎಂದು ಎಸ್ ಎಫ್‌ಎಫ್‌ಐ ತನ್ನ ಹೇಳಿಕೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದೆ.

ಎಲ್‌ಎಸ್‌ಆರ್ ಕಾಲೇಜು ಸಂಘದ ಕರೆಗೆ ಓಗೊಟ್ಟ ವಿದ್ಯಾರ್ಥಿ ಸಂಘಟನೆಗಳು ಮತ್ತು ಮಹಿಳಾ ಸಂಘಟನೆಗಳು ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದ ಕಚೇರಿ ಎದುರು ಪ್ರತಿಭಟನೆ ನಡೆಸಿ ಈ ಇಲಾಖೆಯ ಮಂತ್ರಿ ಡಾ.ಹರ್ಷವರ್ಧನ್ ಅವರು ಈ ಆತ್ಮಹತ್ಯೆಗೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹ ಪಡಿಸಿದ್ದಾರೆ.

“ಕಾಲೇಜು ಆಡಳಿತದ ಗಮನಕ್ಕೆ ವಿದ್ಯಾರ್ಥಿಗಳ ಆರ್ಥಿಕ ಮತ್ತು ಮಾನಸಿಕ ಆರೋಗ್ಯ ಹದಗೆಡುತ್ತಿದೆ ಎಂಬುದನ್ನು ಸತತವಾಗಿ ತಂದರೂ ಸಕಾರಾತ್ಮಕ ಕ್ರಮವನ್ನೇನೂ ಕೈಗೊಳ್ಳಲಿಲ್ಲ” ಎಂದು ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡುತ್ತ ಎಲ್‌ಎಸ್‌ಆರ್ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಉನ್ನಿಮಯ ಹೇಳಿದರು.

ಸರಕಾರ ಲಾಕ್‌ಡೌನ್ ಆದಂದಿನಿಂದ

ಪುಟ 5 ನೋಡಿ

ಸಂಪಾದಕೀಯ

ಬಿಹಾರ್ ಜನಾದೇಶ ಮೋದಿ ನೀತಿಗಳ ಅನುಮೋದನೆಯೆ?

ಬಿಹಾರ ಚುನಾವಣಾ ಆದೇಶ ಮತ್ತು ಕೆಲವು ರಾಜ್ಯಗಳಲ್ಲಿ ನಡೆದ ಉಪ ಚುನಾವಣೆಗಳ ಫಲಿತಾಂಶವು ಎನ್‌ಡಿಎ ಸರ್ಕಾರದ ಅಭಿವೃದ್ಧಿ ಪರ ನೀತಿಗಳಿಗೆ ಜನತೆಯಿಂದ ದೊರೆತ ಅನುಮೋದನೆಯಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಇದು ಮೇಲ್ನೋಟಕ್ಕೆ ಸರಿಯಾಗಿಯೇ ಕಾಣುತ್ತದೆ. ಬಹುತೇಕ ಎಲ್ಲಾ ಲೆಕ್ಕಾಚಾರಗಳನ್ನು ಸಮೀಕ್ಷೆಗಳನ್ನು ಸುಳ್ಳು ಮಾಡಿ ಮೋದಿ ನೇತೃತ್ವದ ಎನ್‌ಡಿಎ ಕೂಟಕ್ಕೆ ಅದ್ಭುತವಾದ ಚುನಾವಣಾ ಜಯ ಪ್ರಾಪ್ತವಾಗಿದೆ. ಇದು ಜನಮನ್ನಣೆಯ ದ್ಯೋತಕವಾಗಿದೆ ಎಂದು ಅವರು ಪ್ರತಿಪಾದಿಸುತ್ತಿರುವುದು ಆಶ್ಚರ್ಯಕರವಲ್ಲ. ಆದರೆ ಈ ನೆಲದ ಗರ್ಭದೊಳಗೆ ಹುದುಗಿರುವ ಸತ್ಯ ಬೇರೆಯೇ ಇದೆ.

ದೇಶಕ್ಕೆ ಅನ್ನವನ್ನು ಬೆಳೆದು ಕೊಡುವ ರೈತರು ಇದೇ ನವೆಂಬರ್ 26 ರಂದು ಪೊಲೀಸ್ ಅನುಮತಿ ಇಲ್ಲದೆ ಸಂಸತ್ತಿಗೆ ಮುತ್ತಿಗೆ ಹಾಕುವ ಹೋರಾಟವನ್ನು ಯಶಸ್ವಿಗೊಳಿಸಲು ಸಜ್ಜಾಗುತ್ತಿದ್ದಾರೆ. ತಮ್ಮ ನಿರ್ಧಾರದಿಂದ ಹಿಂದೆ ಸರಿಯಲು ತಾವು ಸಿದ್ದರಿಲ್ಲ ಎಂದು ಅವರ ಸಂಘಟನೆಗಳು ಈಗಾಗಲೇ ಸ್ಪಷ್ಟಪಡಿಸಿವೆ. ದೇಶಕ್ಕೆ ಬೇಕಾಗುವ ಕೈಗಾರಿಕಾ ಸರಕುಗಳನ್ನು ಉತ್ಪಾದಿಸುವುದರಲ್ಲಿ ನಿರತರಾಗಿರುವ ಕಾರ್ಮಿಕರು ಅಂದು ತಮ್ಮ ವೇತನವನ್ನು ಕಳೆದುಕೊಂಡು ಮುಷ್ಕರ ಮಾಡಲು ಅವರ ಆಡಳಿತ ವರ್ಗಗಳ ಪ್ರತಿನಿಧಿಗಳಿಗೆ ನೋಟಿಸ್ ನೀಡಿದ್ದಾರೆ. ಈ ಐತಿಹಾಸಿಕ ಮುಷ್ಕರದಲ್ಲಿ ಆಡಳಿತ ಪಕ್ಷ ಬಿಜೆಪಿಯ ಭಾಗವಾಗಿರುವ ಬಿಎಂಎಸ್ ಸಹ ಸೇರ್ಪಡೆಯಾಗಲು ಮುಂದೆ ಬಂದರೆ ಆಶ್ಚರ್ಯಪಡಬೇಕಾಗಿಲ್ಲ.

ಅಂದು ಗ್ರಾಮೀಣ ಭಾರತವು ಸ್ತಬ್ಧಗೊಳ್ಳಲಿದೆ. ಗ್ರಾಮೀಣ ಸಾರಿಗೆ ಬಂದ್ ಆಗಲಿದೆ. ವ್ಯಾಪಾರ ವಹಿವಾಟು ಸ್ಥಗಿತಗೊಳ್ಳಲಿದೆ. ಗಣ್ಯರು ನಿಧನರಾದಾಗ ಆಚರಿಸುವ ರೀತಿಯಲ್ಲಿ ಎಲ್ಲೆಲ್ಲೂ ಹರತಾಳ ಆಚರಿಸಲಾಗುವುದು. ಎಲ್ಲಾ ರಾಜ್ಯಗಳಿಂದ ರೈತರು, ಕಾರ್ಮಿಕರು, ಇತರ ದುಡಿಯುವ ವರ್ಗದ ಜನಗಳು ರೈಲುಗಳಲ್ಲಿ, ಬಸ್ಸುಗಳಲ್ಲಿ ಪ್ರಯಾಣ ಮಾಡಿ ದೇಶದ ರಾಜಧಾನಿಯನ್ನು ತಲುಪಿ ಜಂತರ್ ಮಂತರ್‌ನಲ್ಲಿ ಪ್ರತಿಭಟಿಸುವರು. ಬಿಹಾರದಲ್ಲಿ ಎನ್‌ಡಿಎ ಕೂಟಕ್ಕೆ ದೊರೆತ ಚುನಾವಣಾ ಗೆಲುವಿನಿಂದ ಮೋದಿಯವರ ಜನವಿರೋಧಿ ನೀತಿಗಳ ವಿರುದ್ಧ ಈಗಾಗಲೇ ತೀರ್ಮಾನವಾಗಿರುವ ನವೆಂಬರ್ 26 ರ ಮುಷ್ಕರ ಮತ್ತು 27, 2020 ರಂದು ನಡೆಯಲಿರುವ ಗ್ರಾಮೀಣ ಹರ್ತಾಳ ಯಾವ ಬದಲಾವಣೆ ಇಲ್ಲದೆ ನಡೆಯಲಿದೆ.

ಬಿಹಾರದಲ್ಲಿ ಮೋದಿ–ನಿತೀಶ್ ನೇತೃತ್ವದಲ್ಲಿ ಎನ್‌ಡಿಎ ಕೂಟಕ್ಕೆ ಬಹುಮತ ದೊರಕಿದ್ದರು ದೊಡ್ಡ ಪ್ರಮಾಣದಲ್ಲಿ ಎನ್‌ಡಿಎ ಕೂಟಕ್ಕೆ ವಿರುದ್ಧವಾಗಿ ಮತ ಚಲಾಯಿಸಿದವರೂ ಅಲ್ಲಿ ಇದ್ದಾರೆ. ಎನ್‌ಡಿಎ ಕೂಟವನ್ನು ಸೋಲಿಸಲು ಅವರು ಹಗಲು–ರಾತ್ರಿ ಶ್ರಮಿಸಿದ್ದಾರೆ. ಆದರೆ ಈ ದುಷ್ಟಕೂಟದ ತಂತ್ರ ಕುತಂತ್ರಗಳಿಂದಾಗಿ ಮಹಾ ಮೈತ್ರಿಗೆ ಗೆಲ್ಲಲಾಗಲಿಲ್ಲ. ಭಾರೀ ಪ್ರಮಾಣದ ಕಪ್ಪು ಹಣ, ಜಾತಿ ಬಲ, ತೋಳ್ಬಲ ಬಳಸಿಕೊಂಡು ಇಲ್ಲಿ ಚುನಾವಣೆಯನ್ನು ಗೆಲ್ಲಲಾಗಿದೆ. ಮತಯಂತ್ರಗಳ ಬಳಕೆ, ಮತ ಎಣಿಕೆಯಲ್ಲಿ ಸಾಕಷ್ಟು ಮೋಸಮಾಡಿ ಮುಕ್ತವಾದ ಮತದಾನ ಹಾಗೂ ಮತಎಣಿಕೆ ಆಗದಂತೆ ತಡೆಯಲಾಗಿದೆ ಎಂದು ಹೇಳಲಾಗುತ್ತದೆ.

ಮತದಾರರಿಗೆ ಮಾಡಲಾದ ಎಲ್ಲಾ ವಾಗ್ದಾನಗಳನ್ನು ಬಿಹಾರದಲ್ಲಿ ನಿತೀಶ್ ಕುಮಾರ್ ನೇತೃತ್ವದ ಸರ್ಕಾರ ಜಾರಿಮಾಡಲಿದೆ ಎಂದು ಹೇಳಲು ಮೋದಿಜಿ ಮರೆಯಲಿಲ್ಲ. ಜಾರಿಯಾಗದಿದ್ದರೆ ನಿತೀಶ್ ಕುಮಾರ್ ಜವಾಬ್ದಾರರೇ ಹೊರತು ಮೋದಿಯವರಲ್ಲ! ಮೋದಿಯವರು ಜಾರಿಮಾಡುವುದಾದರೂ ಏನನ್ನು? ಅದು ಕೇವಲ ನವ ಉದಾರೀಕರಣ ನೀತಿಗಳು, ದೇಶದ ಅಭಿವೃದ್ಧಿಯ ಹೊಣೆಯನ್ನು ಲಾಭಕೋರ ಕಾರ್ಪೊರೇಟ್ ಕಂಪನಿಗಳಿಗೆ ವಹಿಸಿಕೊಡುವುದು! ಇಂತಹ ವಿನಾಶಕಾರಿ ನೀತಿಗಳನ್ನು ಇಂದಲ್ಲ ನಾಳೆ ದೇಶದ ಜನತೆ ತಿರಸ್ಕರಿಸದೆ ಇರಲಾರದು.

ಕೇಂದ್ರ ಸರ್ಕಾರದ ನಾಲ್ಕು ಹೊಸ ಕಾನೂನುಗಳು, ರಾಜ್ಯ ಸರ್ಕಾರದ ಎರಡು ಸುಗ್ರೀವಾಜ್ಞೆಗಳನ್ನು ವಿರೋಧಿಸಿ ಬೆಂಬಲ ಬೆಲೆ ಕಾನೂನು, ಋಣ ಮುಕ್ತ ಕಾಯ್ದೆ ಜಾರಿಗಾಗಿ ಹಾಗು ನೆರೆ ಪರಿಹಾರ, ಖರೀದಿ ಕೇಂದ್ರಗಳ ಆರಂಭ, ಕಬ್ಬು ಬೆಳೆಗಾರರ ಬೇಡಿಕೆಗಳು, ಕೃಷಿ ಭೂಮಿಯ ಸಕ್ರಮಕ್ಕಾಗಿ ಆಗ್ರಹಿಸಿ

ನವೆಂಬರ್ 27, 2020 ರಂದು ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಸರ್ಕಾರ ಕಛೇರಿಗಳ ಘೇರಾವ್ ಗೆ AIKSCC ನಿರ್ಧಾರ

ಕೇಂದ್ರ ಸರ್ಕಾರದ "ಕೃಷಿ ಉತ್ಪನ್ನ ವಾಣಿಜ್ಯ ಮತ್ತು ಮಾರಾಟ (ಉತ್ತೇಜನ ಹಾಗು ಬೆಂಬಲ) ಕಾಯ್ದೆ – 2020, ಬೆಲೆಭರವಸೆ (ಸಶಕ್ತೀಕರಣ ಹಾಗು ಸುರಕ್ಷೆ) ಮತ್ತು ಕೃಷಿ ಸೇವೆಗಳ ಕಾಯ್ದೆ – 2020, ಅಗತ್ಯ ವಸ್ತುಗಳ ಕಾಯ್ದೆ (ತಿದ್ದುಪಡಿ)– 2020, ವಿದ್ಯುತ್ ಕಾಯ್ದೆ (ತಿದ್ದುಪಡಿ)–2020 ಹಾಗೂ ರಾಜ್ಯ ಸರ್ಕಾರದ ಭೂ ಸುಧಾರಣೆ ಕಾಯ್ದೆ (ತಿದ್ದುಪಡಿ) ಸುಗ್ರೀವಾಜ್ಞೆ, ಎಪಿಎಂಸಿ ಕಾಯ್ದೆ (ತಿದ್ದುಪಡಿ) ಸುಗ್ರೀವಾಜ್ಞೆಗಳನ್ನು ಕೂಡಲೇ ವಾಪಸ್ಸು ಪಡೆಯಬೇಕೆಂದು ಆಗ್ರಹಿಸಿ ಹಾಗು ಡಾ॥ ಎಂ.ಎಸ್. ಸ್ವಾಮಿನಾಥ್ನ ವರದಿಯನ್ವಯ ಉತ್ಪಾದನಾ ವೆಚ್ಚದ ಮೇಲೆ ಶೇ. 50 ರಷ್ಟು ಲಾಭವನ್ನು ಸೇರಿಸಿ. ಎಲ್ಲಾ "ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾಯ್ದೆ", ಎಲ್ಲಾ ರೈತರು, ಕೃಷಿ ಕೂಲಿಕಾರರು ಸಾಲ ಮನ್ನಾ, ಸಾಲ ನೀಡಿಕೆಗೆ ಸಂಬಂಧಿಸಿದ 'ಋಣ ಮುಕ್ತ ಕಾಯ್ದೆ"ಗಳನ್ನು ಕೇಂದ್ರ ಸರ್ಕಾರ ಜಾರಿ ಮಾಡಬೇಕು

ಅಲ್ಲದೆ ನೆರೆ ಹಾವಳಿಯ ನಷ್ಟದ ಕುರಿತು ಸಮಗ್ರವಾಗಿ ಸಮೀಕ್ಷೆ ಮಾಡಿ ವೈಜ್ಞಾನಿಕ ನಷ್ಟ ಪರಿಹಾರ, ಬೆಂಬಲ ಬೆಲೆಯಲ್ಲಿ ಭತ್ತ, ರಾಗಿ, ಜೋಳ ಇತ್ಯಾದಿ ಕೃಷಿ ಉತ್ಪನ್ನ ಖರೀದಿಗಾಗಿ 'ಖರೀದಿ ಕೇಂದ್ರಗಳ ಆರಂಭ, ಹಳೇ ಬಾಕಿಗಳ ಪಾವತಿ, ಬೆಂಬಲ ಬೆಲೆಯಲ್ಲಿ ಕಬ್ಬು ಖರೀದಿ, ಬಗರ್ ಹುಕ್ಕುಂ ಸಾಗುವಳಿ, ಅರಣ್ಯ ಭೂಮಿ ಸಕ್ರಮಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ, ನವೆಂಬರ್ 27, 2020 ರಂದು ರಾಜ್ಯಾದ್ಯಂತ ಎಲ್ಲಾ 'ಜಿಲ್ಲಾ ಕೇಂದ್ರ'ಗಳಲ್ಲಿ ಕೇಂದ್ರ ಸರ್ಕಾರದ ಕಛೇರಿಗಳ ಘೇರಾವ್ ಸಂಘಟಿಸಬೇಕೆಂದು AIKSCC ರಾಜ್ಯ ಸಮಿತಿ ನಿರ್ಧರಿಸಿದೆ.

ನವೆಂಬರ್ 26, 27– 2020 ರಂದು ದಿಲ್ಲಿಯ ಪಾರ್ಲಿಮೆಂಟ್ ಎದುರು ನಡೆಯುತ್ತಿರುವ ಬೃಹತ್ ಪ್ರತಿಭಟನೆಗೆ ಬೆಂಬಲವನ್ನು ವ್ಯಕ್ತಪಡಿಸಲು ಹಾಗು ರಾಜ್ಯದ ರೈತರು ಮತ್ತು ಕೃಷಿ ಕೂಲಿಕಾರರ ತುರ್ತು ಬೇಡಿಕೆಗಳ ಈಡೇರಿಕೆಗಾಗಿ ಸಂಘಟಿಸಲ್ಪಡುತ್ತಿರುವ ನವೆಂಬರ್ 27, 2020 ರ ಹೋರಾಟದಲ್ಲಿ ರೈತರು ಮತ್ತು ಕೃಷಿ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು AIKSCC ವಿನಂತಿಸುತ್ತದೆ.

ಕಾರ್ಷಿಕ ಬಿಕ್ಕಟ್ಟಿನ ಫಲವಾಗಿ ಲಕ್ಷಾಂತರ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ, ಕರೋನಾ ಮತ್ತು ಲಾಕ್ಡೌನ್ ನಿಂದ ಈ ಬಿಕ್ಕಟ್ಟು ಮತ್ತಷ್ಟು ಬಿಗಾಡಾಯಿಸಿದೆ. ಸಂಕಷ್ಟದಲ್ಲಿರುವ ರೈತರು, ಕೃಷಿ ಕೂಲಿಕಾರರು ಮತ್ತಿತರ ದುಡಿಯುವ ವರ್ಗದ ಜನತೆಯ ನೆರವಿಗೆ ಧಾವಿಸುವುದರ ಬದಲು ಸನ್ನಿವೇಶದ ದುಲಾರ್ಭವನ್ನು ಪಡೆದು 'ಕೃಷಿ ಭೂಮಿ, 'ಕೃಷಿ ಉತ್ಪಾದನೆ, 'ಕೃಷಿ ಮಾರುಕಟ್ಟೆ, 'ಚಿಲ್ಲರೆ ವ್ಯಾಪಾರ'ಹಾಗು 'ವಿದ್ಯುತ್'ಕ್ಷೇತ್ರವನ್ನು ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸಲು ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸರ್ಕಾರ ಪರಸ್ಪರ ಪೈಪೋಟಿಯಲ್ಲಿ ಹೊಸ ಹೊಸ ಕಾಯ್ದೆಗಳನ್ನು ರೂಪಿಸುತ್ತಿವೆ. ಸಂಸದೀಯ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ, ಸಂಸತ್ತ್, ವಿಧಾನ ಮಂಡಳಗಳ ನಿಯಮಗಳನ್ನು ಉಲ್ಲಂಘನೆ ಮಾಡುತ್ತಾ ಯಾವುದೇ ಚರ್ಚೆಗಳಿಲ್ಲದೆ ಈ ಕಾನೂನುಗಳನ್ನು ಜಾರಿ ಮಾಡುತ್ತಿದೆ. ಕಾರ್ಪೊರೇಟ್ ಕಂಪನಿಗಳನ್ನು ತೃಪ್ತಿ ಪಡಿಸುವ ಭರದಲ್ಲಿ ಸಂವಿಧಾನದ ಮೂಲ ತತ್ವಗಳನ್ನೂ, ರಾಜ್ಯ ಸರ್ಕಾರಗಳ ಅಧಿಕಾರವನ್ನು ಬಿಜೆಪಿ ಕೇಂದ್ರ ಸರ್ಕಾರ ಮೊಟಕು ಮಾಡುತ್ತಿದೆ.

ಸುಮಾರು 70 ಕೋಟಿ ಗ್ರಾಮೀಣಾ ಜನರ ಜೀವನ ಆಧಾರವಾಗಿರುವ 'ರೈತಾಪಿ ಕೃಷಿ'ಯನ್ನು ಸರ್ವನಾಶ ಮಾಡಿ, ಪಶ್ಚಿಮಾತ್ಯ ದೇಶಗಳ ಮಾದರಿಯ 'ಕಂಪನಿ ಕೃಷಿ' ಯನ್ನು ಜಾರಿಗೆ ತರಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊರಟಿವೆ. ಇದರ ಫಲವಾಗಿ ಗ್ರಾಮೀಣ ಬಡತನ, ನಿರುದ್ಯೋಗ, ಅಸಮಾನತೆಗಳು ಹೆಚ್ಚುತ್ತದೆ ಮಾತ್ರವಲ್ಲ ರೈತರು, ಕೃಷಿ ಕೂಲಿಕಾರರನ್ನು ಕಾರ್ಪೊರೇಟ್ ಕಂಪನಿಗಳ ಗುಲಾಮರನ್ನಾಗಿಸಲಿದೆ.

ಕೇಂದ್ರ ಸರ್ಕಾರದ ಇದೇ ಹಾದಿಯಲ್ಲಿ ಸಾಗುತ್ತಿರುವ ರಾಜ್ಯ ಸರ್ಕಾರವೂ, ಜನರ ಪ್ರತಿರೋದವನ್ನು ಲೆಕ್ಕಿಸದೇ ಮತ್ತೆ ಭೂಸುಧಾರನಾ ಕಾಯ್ದೆ(ತಿದ್ದುಪಡಿ) ಸುಗ್ರೀವಾಜ್ಞೆಯನ್ನು ಹೊರಡಿಸಿದೆ ಮಾತ್ರವಲ್ಲ ರಾಜ್ಯದಲ್ಲಿ ಉಂಟಾದ ನೆರೆಯ ಹಾವಳಿಯಿಂದ ಬೀದಿ ಪಾಲಾಗಿರುವವರ ಬಗ್ಗೆ ಕನಿಷ್ಠ ಕಾಳಜಿ ಇಲ್ಲ. ತಿಂಗಳಾನುಗಟ್ಟಲೆಯಾದರೂ ಪರಿಹಾರ ನೀಡುತ್ತಿಲ್ಲ. ಬಾಕಿ ಹಣ ಬಾರದೇ ಕಂಗೆಟ್ಟಿರುವ ಕಬ್ಬು ಬೆಳೆಗಾರರಿಗೆ ನ್ಯಾಯಯುತ್ತ ಬೆಲೆ ಖಾತರಿ ಮಾಡಲು ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಲಕ್ಷಾಂತರ ಅರ್ಜಿಗಳನ್ನು ಹಾಕಿಕೊಂಡು ಕಾಯುತ್ತಿರುವ ದಲಿತರು, ಭೂಹೀನರಿಗೆ, ಬಡ ರೈತರಿಗೆ ಬಗರ್ ಹುಕ್ಕುಂ ಸಾಗುವಳಿ, ಅರಣ್ಯ ಭೂಮಿಗಳನ್ನು ಸಕ್ರಮ ಮಾಡಲು ಸರ್ಕಾರ ಮುಂದಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಸ ಕಾನೂನುಗಳನ್ನು ವಾಪಸ್ಸು ಪಡೆಯಬೇಕೆಂದು ಆಗ್ರಹಿಸುತ್ತಲೇ, ರಾಜ್ಯದ ನೆರೆ ಹಾವಳಿಯ ಬಗ್ಗೆ ಸಮಗ್ರ ಸಮೀಕ್ಷೆ, ವೈಜ್ಞಾನಿಕ ಪರಿಹಾರಕ್ಕಾಗಿ "ರಾಷ್ಟ್ರೀಯ ವಿಪತ್ ಪರಿಹಾರ ನಿಧಿ"ಯ ಮಾನ ದಂಡಗಳ ಪರಿಷ್ಕರಣೆ, ಪರಿಹಾರ ನೀಡಿಕೆ, ಕಬ್ಬು ಬೆಳೆಗಾರರ ಬಾಕಿ ಹಣ ಪಾವತಿಯ ಜೊತೆಗೆ ಟನ್ಗೆ 5000.00 ರೂ. ಬೆಂಬಲ ಬೆಲೆ ನೀಡಬೇಕು, ರಾಗಿ, ಮೆಕ್ಕೆ ಜೋಳ ಇತ್ಯಾದಿ ಕೃಷಿ ಉತ್ಪನ್ನಗಳನ್ನು ಘೋಷಿತ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲು ಖರೀದಿ ಕೇಂದ್ರಗಳನ್ನು ತಕ್ಷಣ ತೆರೆಯಬೇಕು ಹಾಗು ಬಗರ್ ಹುಕ್ಕುಂ ಸಾಗುವಳಿ, ಅರಣ್ಯ ಒತ್ತುವರಿದಾರರಿಗೆ ಭೂಮಿಗಳನ್ನು ಸಕ್ರಮ ಮಾಡಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನವೆಂಬರ್ 27, 2020 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಸರ್ಕಾರದ ಕಛೇರಿಗಳ ಘೇರಾವ್ ನಡೆಸಲಾಗುತ್ತಿದೆ. ಈ ಹೋರಾಟದಲ್ಲಿ ರಾಜ್ಯದ ರೈತರು ಮತ್ತು ಕೃಷಿ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು AIKSCC ಕೋರಿದೆ.

●

ವರದಿ:
ವಾ.ಉ.

ಸುಸಜ್ಜಿತ ಜಾನುವಾರು ವಧಾಗೃಹ ಆಗ್ರಹಿಸಿ ಪ್ರತಿಭಟನಾ ಪ್ರದರ್ಶನ



ಜನತೆಯ ಆಹಾರದ ಹಕ್ಕನ್ನು ಸಂರಕ್ಷಿಸಲು, ಸ್ವಚ್ಛ ಆಹಾರಕ್ಕಾಗಿ ಹಾಗೂ ಸುಸಜ್ಜಿತವಾದ ವಧಾಗೃಹದ ನಿರ್ಮಾಣಕ್ಕಾಗಿ ಆಗ್ರಹಿಸಿ, ಆಹಾರದ ಹಕ್ಕು ಸಂರಕ್ಷಣಾ ಹೋರಾಟ ಸಮಿತಿಯ ನೇತೃತ್ವದಲ್ಲಿ ನವಂಬರ್ 6 ರಂದು ಮಿನಿ ವಿಧಾನಸೌಧದ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಜಾನುವಾರು ಸಾಗಾಟಗಾರರು ಹಾಗೂ ಮಾಂಸ ಮಾರಾಟಗಾರರ ಮೇಲೆ ಕೋಮುವಾದಿ ಸಂಘಟನೆಗಳ ಕಾರ್ಯಕರ್ತರ ಸೂಚನೆ ಮೇರೆಗೆ ಸುಳ್ಳು ದೂರು ದಾಖಲಿಸಿ ಪೊಲೀಸ್ ದಾಳಿ ಹಾಗೂ ಪ್ರಕರಣ ದಾಖಲಿಸುತ್ತಿರುವುದನ್ನು ವಿರೋಧಿಸಿ ಸೆಕ್ಯುಲಾರ್ ಪಕ್ಷಗಳು ಹಾಗೂ ಸಂಘಟನೆಗಳು ಆಹಾರದ ಹಕ್ಕು ಸಂರಕ್ಷಣಾ ಸಮಿತಿಯನ್ನು ರಚಿಸಿಕೊಂಡಿವೆ. ಆಹಾರ ಸೇವನೆಯು ಖಾಸಗಿ ವಿಚಾರವಾಗಿದ್ದು, ಅದನ್ನು ರಾಜಕೀಯಗೊಳಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕೋಮುವಾದಿ ಶಕ್ತಿಗಳ ಹುನ್ನಾರವನ್ನು ಹಾಗೂ ಅವರ ಆಜ್ಞಾವರ್ತಿಗಳಾಗಿ ವರ್ತಿಸುವ ಪೊಲೀಸ್ ಸಿಬ್ಬಂದಿಯ ನಡೆಯನ್ನು ಪ್ರತಿಭಟನಾಕಾರರು ಟೀಕಿಸಿದರು.

ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಮುಖಂಡರಾದ ಸುನಿಲ್ ಕುಮಾರ್ ಬಜಾಲ್ ಪ್ರಾಸ್ತಾವಿಕ ಮಾತನ್ನಾಡಿದರು. ಜೆಡಿಎಸ್ ದ.ಕ.ಜಿಲ್ಲಾ ಮುಖಂಡ ಎಂ.ಬಿ.ಸದಾಶಿವ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದರು. ಮಾಜಿ ಕಾಂಗ್ರೆಸ್ ಶಾಸಕರಾದ ಐವನ್ ಡಿಸೋಜ, ಮೊಯಿದಿನ್ ಬಾವಾ, ಸಿಪಿಐ(ಎಂ) ಜಿಲ್ಲಾ ಸಮಿತಿ ಮುಖಂಡರಾದ ಯಾದವ ಶೆಟ್ಟಿ, ಸಿಪಿಐ ಮುಖಂಡರಾದ ಸೀತಾರಾಮ್ ಬೇರಿಂಜೆ, ಮಾಜಿ ಮೇಯರ್ ಕೆ.ಅಶ್ರಫ್, ಮಾಂಸ ವ್ಯಾಪಾರಸ್ಥರ ಸಂಘದ ಮುಖಂಡರಾದ ಅಲಿ ಹಸನ್, ಡಿವೈಎಫ್ಐ ಜಿಲ್ಲಾ ಸಮಿತಿ ಮುಖಂಡರಾದ ಅಶ್ರಫ್ ಕೆ.ಸಿ.ರೋಡ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ಮುಖಂಡರಾದ ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ, ಸಿಪಿಐ ಪಕ್ಷದ ವಿ.ಕುಕ್ಯಾನ್, ಕರುಣಾಕರ್, ದಸಂಸ ಜಿಲ್ಲಾ ಮುಖಂಡ ಎಂ.ದೇವದಾಸ್, ಡಿಎಚ್ಎಸ್‌ನ ತಿಮ್ಮಯ್ಯ ಕೊಂಚಾಡಿ, ಕಾಂಗ್ರೆಸ್ಸಿನ ಸದಾಶಿವ ಉಳ್ಳಾಲ, ಬೊಂದಾಲ ಚಿತ್ತರಂಜನ ಶೆಟ್ಟಿ, ಜೆಡಿಎಸ್‌ನ ಸುಮತಿ ಎಸ್.ಹೆಗ್ಡೆ, ನ್ಯಾಯವಾದಿಗಳಾದ ಯಶವಂತ ಮರೋಳಿ, ರಾಮಚಂದ್ರ ಬಬ್ಬುಕಟ್ಟೆ, ಶಾಲಿನಿ, ಜೆಎಂಎಸ್‌ನ ಜಯಂತಿ ಶೆಟ್ಟಿ, ಭಾರತಿ ಬೋಳಾರ, ಡಿವೈಎಫ್ಐನ ನವೀನ್ ಕೊಂಚಾಡಿ, ರಫೀಕ್ ಹರೇಕಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹೋರಾಟ ಸಮಿತಿಯು ಈ ವಿಷಯ ಸಂಬಂಧ ವಿವಿಧ ಸಂಘಟನೆಗಳ ಸಭೆಯನ್ನು ಜಿಲ್ಲಾಡಳಿತ ಕರೆಯಬೇಕೆಂದು ಕೋರಿ ಒಂದು ಮನವಿಯನ್ನು ಸಿದ್ದಪಡಿಸಿದ್ದು, ನವಂಬರ್ 9 ರಂದು ಈ ಮನವಿಯನ್ನು ನಿಯೋಗ ಹೋಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿತು. ಈ ನಿಯೋಗದಲ್ಲಿ ಸುನಿಲ್ ಕುಮಾರ್ ಬಜಾಲ್, ವಾಸುದೇವ ಉಚ್ಚಿಲ, ಸಿಪಿಐನ ವಿ.ಕುಕ್ಯಾನ್, ಕರುಣಾಕರ, ಜೆಡಿಎಸ್ ಸುಮತಿ ಎಸ್.ಹೆಗ್ಡೆ, ಡಿಎಚ್ಎಸ್‌ನ ತಿಮ್ಮಯ್ಯ ಕೊಂಚಾಡಿ, ವ್ಯಾಪಾರಸ್ಥರ ಸಂಘದ ಆಲಿ ಹಸನ್, ಮಾನವ ಹಕ್ಕು ಹೋರಾಟಗಾರ ಕಬೀರ್ ಉಳ್ಳಾಲ ಉಪಸ್ಥಿತರಿದ್ದರು.

ಗಾಲ್ಫ್ ಕೋರ್ಸ್ ವಿರೋಧಿಸಿ ಮಂಗಳೂರು ಬೆಂಗ್ರೆಯಲ್ಲಿ ಡಿವೈಎಫ್ಐ ಪ್ರತಿಭಟನೆ



ಮಂಗಳೂರು ನಗರದ ಬೆಂಗ್ರೆಯ ವಿಶಾಲ ಸಮುದ್ರ ತೀರದಲ್ಲಿ ರಾಜ್ಯ ಸರಕಾರ ಪ್ರವಾಸೋದ್ಯಮದ ಹೆಸರಿನಲ್ಲಿ ಗಾಲ್ಫ್ ಕೋರ್ಸ್ ಆರಂಭಿಸಲು ಯೋಜನೆಯನ್ನು ಹಮ್ಮಿಕೊಂಡಿದ್ದು, ಅದು ಅಲ್ಲಿನ ಗ್ರಾಮಸ್ಥರ ತೀವ್ರ ವಿರೋಧಕ್ಕೆ ಕಾರಣವಾಗಿದೆ. ಅಲ್ಲದೆ ಅಲ್ಲಿನ ಜನವಸತಿ ಪ್ರದೇಶ ಹಾಗೂ ಗಾಲ್ಫ್ ಗ್ರೌಂಡ್ ಮಧ್ಯೆ ಗೋಡೆ ಅಳವಡಿಸುವುದರಿಂದ ಗ್ರಾಮಸ್ಥರ ಸಮುದ್ರ ವಿಹಾರ ಕ್ಷೇತ್ರಕ್ಕೆ ಅಡಚಣೆಯಾಗಲಿದೆ ಅಲ್ಲದೆ ಗಾಲ್ಫ್ ಗ್ರೌಂಡ್ ಶ್ರೀಮಂತರ ವಿಹಾರಸ್ಥಾನವಾಗಲಿದೆ. ಮೀನು ವ್ಯವಹಾರಸ್ಥರೇ ಪ್ರಧಾನವಾಗಿರುವ ಬೆಂಗ್ರೆಯ ಬಡಜನರನ್ನು ಗಾಲ್ಫ್ ಪ್ರವಾಸೋದ್ಯಮ ಶ್ರೀಮಂತರ ಕಾರಣಕ್ಕಾಗಿ ಬೇರ್ಪಡಿಸುವ ಹಾಗೂ ಮೋಜಿನಾಟಕ್ಕೆ ಬೆಲೆಬಾಳುವ ನಗರ ಭೂಮಿಯನ್ನು ಶ್ರೀಮಂತರಿಗೆ ಮೀಸಲಿಡುವ ಯೋಜನೆ ನಿರ್ಮಾಣವಾಗಲೇ ಬಾರದು ಎಂಬುದಾಗಿ ಡಿವೈಎಫ್ಐ ಬೆಂಗ್ರೆ ಘಟಕದ ನೇತೃತ್ವದಲ್ಲಿ ನವಂಬರ್ 6 ರಂದು ಬೆಂಗ್ರೆ ಕಡಲ ಕಿನಾರೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು. ಕಾರ್ಮಿಕ ಮುಖಂಡ ವಿಲ್ಲಿ ವಿಲ್ಸನ್, ಮೋನಾಕ, ಡಿವೈಎಫ್ಐನ ಎ.ಬಿ.ನೌಶಾದ್, ಹನೀಫ್ ಬೆಂಗ್ರೆ, ರಿಜ್ವಾನ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಂಗಳೂರು ಉಡುಪಿಯಲ್ಲಿ ಬಿಸಿಯೂಟ ನೌಕರರಿಂದ ಧರಣಿ:

ಕೇಂದ್ರ ಮತ್ತು ರಾಜ್ಯ ಸರಕಾರಗಳ ಕಾರ್ಮಿಕ, ರೈತ ವಿರೋಧಿ ಮತ್ತು ಜನವಿರೋಧಿ ನೀತಿಗಳ ವಿರುದ್ಧ ನವಂಬರ್ 26ರ ಅಖಿಲ ಭಾರತ ಮುಷ್ಕರಕ್ಕೆ ಬೆಂಬಲ ಸೂಚಿಸಿ ಹಾಗೂ ಬಿಸಿಯೂಟ ನೌಕರರ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ನವಂಬರ್ 9 ರಂದು ಮಂಗಳೂರಿನಲ್ಲಿ ಹಾಗೂ ಉಡುಪಿಯಲ್ಲಿ ಜಿಲ್ಲಾ ಮಟ್ಟದ ಪ್ರತಿಭಟನಾ ಧರಣಿಗಳನ್ನು ನಡೆಸಲಾಯಿತು.

ಮಂಗಳೂರು ಮಿನಿವಿಧಾನಸೌಧದ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿ, ಬಿಸಿಯೂಟ ನೌಕರರ ಸಂಘಟನೆಯ ದ.ಕ.ಜಿಲ್ಲಾಧ್ಯಕ್ಷೆ ಪದ್ಮಾವತಿ ಶೆಟ್ಟಿ, ಜೆಎಂಎಸ್ ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರ ಮಾತನಾಡಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಮುಂದಾಳುಗಳಾದ ಗಿರಿಜಾ, ಭವ್ಯ ಭಾಗವಹಿಸಿದ್ದರು.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆದ ಪ್ರತಿಭಟನೆಯನ್ನು ಉಡುಪಿ ಜಿಲ್ಲಾ ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಸುಶೀಲಾ ನಾಡ, ಅಕ್ಷರ ದಾಸೋಹ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಜಯಶ್ರೀ ಮಾತನಾಡಿದರು. ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಕರಾವಳಿ ಜಿಲ್ಲೆಗಳಲ್ಲಿ ಅಸಂಘಟಿತ ಕಾರ್ಮಿಕರ ಪ್ರತಿಭಟನೆಗಳು:

ಅಸಂಘಟಿತ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಹಾಗೂ ನವಂಬರ್ 26ರ ಅಖಿಲ ಭಾರತ ಕಾರ್ಮಿಕ ಮುಷ್ಕರವನ್ನು ಬೆಂಬಲಿಸಿ ಕರಾವಳಿ ಜಿಲ್ಲೆಗಳ ವಿವಿಧ ಪಟ್ಟಣಗಳಲ್ಲಿ ಅಸಂಘಟಿತ ಕಾರ್ಮಿಕರು ನವಂಬರ್ 10 ರಂದು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರು.

ಮೂಡಬಿದರೆ ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ, ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ಸಿಐಟಿಯು ಮುಖಂಡರಾದ ರಮಣಿ ಮೂಡಬಿದರೆ, ಗಿರಿಜಾ, ರಾಧಾ, ಶಂಕರ ವಾಲ್ಪಾಡಿ, ಸುಂದರ ಶೆಟ್ಟಿ, ಕೃಷ್ಣಪ್ಪ ಉಪಸ್ಥಿತರಿದ್ದರು.

ಗುರುಪುರ ವಲಯದ ಅಸಂಘಟಿತ ಕಾರ್ಮಿಕರು ಕೈಕಂಭ ನಾಡ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯನ್ನುದ್ದೇಶಿಸಿ ದ.ಕ.ಜಿಲ್ಲೆಯ ಹಿರಿಯ ಸಿಐಟಿಯು ಮುಖಂಡ ಯು.ಬಿ.ಲೋಕಯ್ಯ, ಸದಾಶಿವ ದಾಸ್ ಮಾತನಾಡಿದರು. ಮುಖಂಡರಾದ ನೋಣಯ್ಯ ಗೌಡ, ವಸಂತಿ ಕುಪ್ಪೆಪದವು, ಗಂಗಯ್ಯ ಅಮೀನ್ ಉಪಸ್ಥಿತರಿದ್ದರು.

ಬಂಟ್ವಾಳ ತಾಲೂಕು ಮಿನಿವಿಧಾನ ಸೌಧದ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ಬಂಟ್ವಾಳ ತಾಲೂಕು ಅಧ್ಯಕ್ಷ ರಾಮಣ್ಣ ವಿಟ್ಲ ಮಾತನಾಡಿದರು. ಸಿಐಟಿಯು ಮುಖಂಡರಾದ ಉದಯ ಕುಮಾರ್, ಲೋಲಾಕ್ಷಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಳ್ಳಾಲ ವಲಯ ಸಿಐಟಿಯು ಕಾರ್ಯಕರ್ತರು ತೊಕ್ಕೊಟ್ಟು ಬಸ್ ನಿಲ್ದಾಣದ ಬಳಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್ ಮಾತನಾಡಿದರು. ಸಿಐಟಿಯು ಮುಖಂಡರಾದ ವಿಲಾಸಿನಿ, ನಾರಾಯಣ ತಲಪಾಡಿ, ಸುಂದರ ಕುಂಪಲ ಭಾಗವಹಿಸಿದರು.

ಮಂಗಳೂರು ನಗರದ ಅಸಂಘಟಿತ ಕಾರ್ಮಿಕರು ಮಿನಿ ವಿಧಾನಸೌಧದ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಸಿಐಟಿಯು ಜಿಲ್ಲಾಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಸಿಐಟಿಯು ಮುಖಂಡರಾದ ಜಯಂತಿ ಬಿ. ಶೆಟ್ಟಿ, ಭಾರತಿ ಬೋಳಾರ ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಸರಕಾರೀ ಆಸ್ಪತ್ರೆ ಉಳಿಸಲು ಪುತ್ತೂರಿನಲ್ಲಿ ಪ್ರತಿಭಟನೆ:

ಖಾಸಗೀ ಆಸ್ಪತ್ರೆಗಳನ್ನು ನಿಯಂತ್ರಿಸಬೇಕು, ಸರಕಾರೀ ಆಸ್ಪತ್ರೆಗಳನ್ನು ಬಲಪಡಿಸಬೇಕು, ಮಂಗಳೂರಿನಲ್ಲಿ ಸರಕಾರೀ ಮೆಡಿಕಲ್ ಕಾಲೇಜು ಆರಂಭಿಸಬೇಕು ಎಂದು ಆಗ್ರಹಿಸಿ ಮಾಡುವ ಹೋರಾಟಕ್ಕೆ ಡಿವೈಎಫ್ಐ ನೇತೃತ್ವದಲ್ಲಿ ಸರಕಾರಿ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಗಳನ್ನು ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ರೂಪಿಸಿದ್ದು, ಅವರ ಕಾರ್ಯಯೋಜನೆಯಂತೆ ನವಂಬರ 9 ರಂದು ಪುತ್ತೂರಿನಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಧರಣಿಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಕಾಂಗ್ರೆಸ್ ಮುಖಂಡ ಕಾವು ಹೇಮನಾಥ ಶೆಟ್ಟಿ, ಜೆಡಿಎಸ್ ಮುಖಂಡ ಅಶ್ರಫ್ ಕಲ್ಲೇಗ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಶ್ರೀಧರ ಶೆಟ್ಟಿ, ಸಿಪಿಐ(ಎಂ) ಮುಖಂಡ ಪಿ.ಕೆ.ಸತೀಶನ್ ಮಾತನಾಡಿದರು.

ಕುಣಿಗಲ್ ತಾಲೂಕಿನಲ್ಲಿ ದಲಿತರನ್ನು ರಕ್ಷಣೆ ಮಾಡುವುದರಲ್ಲಿ ಪೋಲೀಸ್ ವೈಫಲ್ಯ ಖಂಡಿಸಿ

ದಲಿತ ಹಕ್ಕುಗಳ ಸಮಿತಿಯಿಂದ ಕುಣಿಗಲ್‌ನಲ್ಲಿ ಪ್ರತಿಭಟನೆ



ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿವೈಎಸ್‌ಪಿ) ರವರ ಮೇಲೆ ಕ್ರಮ ಜರುಗಿಸಬೇಕು, ದಲಿತರಿಗೆ ರಕ್ಷಣೆ ನೀಡಬೇಕು, ಕುಣಿಗಲ್ ತಾಲ್ಲೂಕಿನಲ್ಲಿ ದಲಿತರ ಹಕ್ಕುಗಳನ್ನು ರಕ್ಷಣೆ ಮಾಡುವುದರಲ್ಲಿ ಪೊಲೀಸ್ ವೈಫಲ್ಯ ಎದ್ದು ಕಾಣುತ್ತಿದೆ. ಸಾಮಾಜದ ಸ್ವಾಸ್ಥ್ಯ ಕಾಪಾಡಬೇಕಿದ ಪೊಲೀಸ್ ಇಲಾಖೆಯ ಅಧಿಕಾರಿಗಳು, ಪಟ್ಟಭದ್ರ ಹಿತ್ತಾಶಕ್ತಿಗಳ ಹಿತ ಕಾಯುತ್ತಿರುವುದು ಪದೇ ಪದೇ ಸಾಬೀತಾಗುತ್ತಿದೆ. ಅದರಲ್ಲೂ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನಲ್ಲಿ ಪೊಲೀಸ್ ವ್ಯವಸ್ಥೆ ಸಂಪೂರ್ಣ ಏಕಪಕ್ಷೀಯವಾಗಿದ್ದು ಪೊಲೀಸರ್ ಮಧ್ಯ ಪ್ರವೇಶ ದಲಿತರ ವಿರೋಧಿಯಾಗಿದೆ. ದಲಿತರ ಮುಖಂಡರುಗಳ ಮೇಲೆ ಕೌಂಟರ್ ಕೇಸ್ (ಪ್ರತಿ ದೂರು) ಹಾಕುವ ಮೂಲಕ ಹೋರಾಟಗಾರರನ್ನು ಹತ್ತಿಕ್ಕಲಾಗುತ್ತಿದೆ. ದಲಿತ ಹಕ್ಕುಗಳ ಸಮಿತಿ (ಡಿಹೆಚ್‌ಎಸ್) ಯ ಮುಖಂಡ ರಾಜು ವೆಂಕಟ್ಟಪ್ಪ ಅವರ ತಂದೆ ಚಿಕ್ಕವೆಂಕಟ್ಟಯ್ಯ ಮತ್ತು ಸುಮಂತ ಎಂಬುವವರ ಮೇಲೆ ಸುಳ್ಳು ಮೊಕ್ಕದಮ್ಮೆ ಹಾಕಿ ಕಿರುಕುಳ ನೀಡುತ್ತಿರುವುದು ಸಾಮಾಜಿಕ, ದಲಿತ ಪರ ಹಾಗೂ ಪ್ರಗತಿ ಪರ ಹೋರಾಟಗಾರರನ್ನು ಹತ್ತಿಕ್ಕುವ ಹುನ್ನಾರವಾಗಿದೆ.

ಈ ಮುಂಚೆ ಇದೆ ಸುಮಂತ ಎಂಬ ಹುಡುಗನನ್ನು ಕಂಬಕ್ಕೆ ಕಟ್ಟಿ ಹೊಡೆದಿದ್ದು ರಕ್ತಸ್ರಾವವಾಗಿ ಆಸ್ಪತ್ರೆಗೆ ದಾಖಲಾಗಿದ್ದರು ದೂರು ತೆಗೆದುಕೊಂಡಿರಲಿಲ್ಲ. ಹೊಳಗುಂದ ಗ್ರಾಮದ ರವಿ ಎಂಬ ದಲಿತ ಯುವ ಮುಖಂಡನ ವಿರುದ್ಧ ಒಂದೇ ಕೋಮಿರವರನ್ನು ಪುಸಲಾಯಿಸಿ ಅತ್ಯಾಚಾರದ ಕೇಸು ಹಾಕಿರುವುದು, ಭ್ರಷ್ಟಚಾರದ ವಿಡೀಯೋ ಮಾಡಿದ ದಲಿತ ಯುವಕನೋರ್ವನನ್ನು ರಾತ್ರಿಯೆಲ್ಲಾ ಠಾಣೆಯಲ್ಲೇ ಇರಿಸಿಕೊಂಡು ಅವನಿಗೆ ಮತ್ತು ಅವನ ಕುಟುಂಬಕ್ಕೆ ಕಿರುಕುಳ ನೀಡಿರುತ್ತಾರೆ ಹಾಗೂ ಮುಚ್ಚಳಿಕೆ ಬರೆಸಿಕೊಂಡು ಸಹಿ ಹಾಕಿಸಿಕೊಂಡಿರುತ್ತಾರೆ. ಕಿತ್ನಮಂಗಲ ಗ್ರಾಮದ ದಲಿತರ ಕುಟುಂಬದ ಸುಮಾರು ಎರಡು ಲಕ್ಷ ಬೆಲೆ ಬಾಳುವು ಹಸು ಕಳತನವಾಗಿದರೂ ದೂರು ದಾಖಲಾಗಿರುವುದಿಲ್ಲ. ಅಮೃತೂರು ಹೋಬಳಿ ಹೊಸಕೆರೆ ಗ್ರಾಮದ ವಕೀಲರಾದ ಅಶೋಕರವರು ದೂರು ನೀಡಲು ಹೋದರೆ ಕೌಂಟರ್ ಕೇಸ್ ಹಾಕಿ ಬೆದರಿಕೆ ಒಡುತ್ತಿದ್ದಾರೆ. ತುರಗನೂರು ಗ್ರಾಮದ ರಸ್ತೆ ವಿಚಾರಕ್ಕೆ ಸಂಬಂಧಿಸಿದಂತೆ ದಲಿತರ ಕುಟುಂಬಗಳ ಮಧ್ಯೆ ಕೌಂಟರ್ ಕೇಸ್ ಹಾಕುವುದಾಗಿ ಬೆದರಿಕೆ ಒಡಿದ್ದಾರೆ. ಬಿಳಿ ದೇವಾಲಯದಲ್ಲಿ ಬಿ.ಎಂ. ಪ್ರವೀಣ ಕುಮಾರ್ ರವರ ಮೇಲೆ ಕೇಸ್ ಹಾಕಿ ಜೀವ ಬೆದರಿಕೆ ಹಾಕಿದ್ದಾರೆ.

ಅದೇ ರೀತಿ ಕೊತ್ತಗೇರೆ ಗ್ರಾಮದ ದಲಿತ ಮುಖಂಡರಾದ ಚಲುವನಾರಾಯಣ ರವರ ಮೇಲೆ ಹಾಗೂ ಮಂಗಳ ಗ್ರಾಮದ ಕೃಷ್ಣರಾಜು ರವರ ಮೇಲೆ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಲಾಗಿದೆ.

ಮೇಲ್ಜಾತಿ ಜನ ದೂರು ನೀಡಲು ಠಾಣೆಗೆ ಬಂದಾಗ ತಕ್ಷಣ ಪಡೆಯುವ ಪೊಲೀಸರು, ದಲಿತರು ದೂರು ನೀಡಲು ಬಂದರೆ ಕೌಂಟರ್ ಕೇಸ್ (ಪ್ರತಿದೂರು) ಹಾಕುವ ಮೂಲಕ ದಲಿತರಿಗೆ ಘೋರ ಅನ್ಯಾಯ ಎಸೆಗಲಾಗುತ್ತಿದೆ.



ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ತಾವು ವಿಚಾರಣೆ ನಡೆಸಿ ಸಂಬಂದ್ಧ ಪಟ್ಟ ಪೊಲೀಸ್ ಅಧಿಕಾರಿಗಳ ಮೇಲೆ ತೀವ್ರ ಕಾನೂನಿನ ಕ್ರಮ ಜರುಗಿಸಬೇಕೆಂದು ಕುಣಿಗಲ್ ಠಾಣೆ ಮುಂದೆ ಪ್ರತಿಭಟನೆ ಮಾಡಿ ಮನವಿ ಸಲ್ಲಿಸಿತು.

ಕುಣಿಗಲ್ ತಾಲೂಕಿನಲ್ಲಿ ದಲಿತರ ಸಮಸ್ಯೆಗಳ ಕುರಿತು ಪತ್ರಿಭಟನೆ

ದಲಿತ ಹಕ್ಕುಗಳ ಸಮಿತಿ–ಕರ್ನಾಟಕ ಕುಣಿಗಲ್ ಶಾಖೆ ವತಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಕೊರೋನಾ ಸಂಕಷ್ಟದಿಂದ ತೊಂದರೆಗೆ ಸಿಲುಕ್ಕಿರುವ ದಲಿತ ಜನಾಂಗಕ್ಕೆ ಪರಿಹಾರ ಒದಗಿಸುವಲ್ಲಿ ರಾಜ್ಯ ಯಡಿಯೂರಪ್ಪ ಸರ್ಕಾರ ವಿಫಲವಾಗಿದೆ. ಎಸ್‌ಸಿಪಿ / ಟಿಎಸ್‌ಪಿ ಯೋಜನೆಯ ಪ್ರಸಕ್ತ ಸಾಲಿನ 27,000 ಕೋಟಿ ಬಜೆಟ್ ಹಣವನ್ನು ದಲಿತ ಜನರಿಗೆ ಒದಗಿಸಿದೆ. ಆದರೆ ಹಿಂದಿನ ವರ್ಷ 30,000 ಸಾವಿರ ಕೋಟಿ ಇದ್ದ ಬಜೆಟ್ ಅನ್ನು ಕಡಿತಗೊಳಿಸಿರುವುದನ್ನು ಖಂಡಿಸಿತು.

ಜಿಲ್ಲೆಯಾದ್ಯಂತ ಸಾವಿರಾರು ಸಂಖ್ಯೆಯ ದಲಿತರು ಬಗರ್‌ಹುಕ್ಕು ಸಾಗುವಳಿ ಮಾಡಿದವರಿಗೆ ಹಕ್ಕುಪತ್ರ ನೀಡಬೇಕು. ಕುಣಿಗಲ್‌ನಲ್ಲಿ ಕೊಳವೆ ಬಾವಿಗಾಗಿ ಅರ್ಜಿ ಸಲ್ಲಿಸಿದ 392 ಅರ್ಜಿದಾರರಲ್ಲಿ ಕೇವಲ 21 ಜನರಿಗೆ ಮಂಜೂರು ಮಾಡಿದೆ. ಎರಡು ಸಾವಿರ ಕೋಟಿ ಹಣ ಮಂಜೂರು ಮಾಡಿ ಎಲ್ಲಾ ಅರ್ಜಿದಾರರಿಗೂ ಕೊಳವೆ ಬಾವಿ ನೀಡಬೇಕೆಂದು, ಅದೇ ರೀತಿ ಭೂಮಿಯಿಲ್ಲದ ಕಡು ಬಡ ದಲಿತರಿಗೆ ಭೂ ಒಡೆತನ ಯೋಜನೆ ಅಡಿಯಲ್ಲಿ ಹೆಚ್ಚಿನ ಹಣ ಒದಗಿಸಬೇಕೆಂದು ಒತ್ತಾಯಿಸಿತು. ಮನೆ ಇಲ್ಲದ ದಲಿತ ಕುಟುಂಬಕ್ಕೆ ಹಿತ್ತಲು ಸಹಿತ ನಿವೇಶನ ಮನೆ ಮಂಜೂರು ಮಾಡಬೇಕು, ಕುಣಿಗಲ್ ಟೌನ್‌ನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನದ ನಿರ್ಮಾಣ ಕಾರ್ಯವನ್ನು ಶೀಘ್ರದಲ್ಲೇ ಆರಂಭಿಸಬೇಕು ಹಾಗೂ ತಾಲ್ಲೂಕಿನಲ್ಲಿ ಮಂಜೂರಾಗಿರುವ ಸಮುದಾಯ ಭವನ ಹಾಗೂ ಪ್ರತಿ ಹಳ್ಳಿಗೊಂದು ಸ್ಮಶಾಣ ಮಂಜೂರು ಮಾಡಬೇಕು ಎಂದು ಕುಣಿಗಲ್ ತಾಲೂಕು ಕಛೇರಿ ಎದಿರು ಸ್ಥಳೀಯ ಜನರ ಬೇಡಿಕೆಗಳಿಗಾಗಿ ಮತ್ತು ಪೊಲೀಸ್‌ರು ದಲಿತ ಮುಖಂಡರ ಮೇಲೆ ಸುಳ್ಳು ಕೇಸು ಹಾಕುತ್ತಿರುವ ಪೊಲೀಸ್ ದೌರ್ಜನ್ಯ ಖಂಡಿಸಿ ಪ್ರತಿಭಟನೆ ನಡೆಸಿತು. ■

ದಿಲ್ಲಿ ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ: ಇನ್ನೊಂದು ಸಾಂಸ್ಥಿಕ ಕೊಲೆ

ಪುಟ 2 ರಿಂದ



ವಿದ್ಯಾರ್ಥಿವೇತನಗಳನ್ನು ಬಿಡುಗಡೆ ಮಾಡಿಲ್ಲ. ಇದರಿಂದಾದ ಹಣಕಾಸು ಒತ್ತಡಗಳಿಂದಾಗಿಯೇ ಐಶ್ವರ್ಯಾ ಆತ್ಮಹತ್ಯೆ ಮಾಡಿಕೊಂಡಳು ಎಂದು ಜೆಎನ್‌ಯುಎಸ್‌ಯು ಪ್ರಧಾನ ಕಾರ್ಯದರ್ಶಿ ಆಯಿಷೆ ಘೋಷ್ ಹೇಳಿದರು.

ಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಎಸ್‌ಎಫ್‌ಐ ದಿಲ್ಲಿ ರಾಜ್ಯ ಜಂಟಿ ಕಾರ್ಯದರ್ಶಿ ಮೋನಿಕಾ ಶ್ರೀಸಾಯಿ ಆಗ್ರಹಿಸಿದರು.

ಉನ್ನಿಮಯ ಮತ್ತು ಮೋನಿಕಾ ಅವರು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಒಂದು ಮನವಿ ಪತ್ರ ಸಲ್ಲಿಸಿ ಈ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟರು:

* ಮಂತ್ರಿ ಹರ್ಷವರ್ಧನ್ ಈ ಘಟನೆಯ ಹೊಣೆ ಹೊತ್ತು ನೈತಿಕ ಆಧಾರದಲ್ಲಿ ಕೂಡಲೇ ರಾಜೀನಾಮೆ ನೀಡಬೇಕು.
* ಮಂತ್ರಾಲಯದ ನಿರ್ಲಕ್ಷ್ಯಕ್ಕೆ, ಸ್ಕಾಲರ್‌ಶಿಪ್ ಮೊತ್ತದ ಬಾಕಿಗೆ ಪ್ರತಿಯಾಗಿ ಐಶ್ವರ್ಯಾಳ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ಒದಗಿಸಬೇಕು.
* ಎಲ್ಲ ಸ್ಕಾಲರ್‌ಶಿಪ್ ಮೊತ್ತಗಳನ್ನು ತಕ್ಷಣವೇ ಬಿಡುಗಡೆ ಮಾಡಬೆಕು.
* ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳಿಂದ ಬರುತ್ತಿರುವ ವಿದ್ಯಾರ್ಥಿಗಳಲ್ಲಿ ಆತ್ಮಹತ್ಯೆಯ ಪ್ರಮಾಣ ಹೆಚ್ಚುತ್ತಿದೆ. ಸರಕಾರ ಕೂಡಲೇ ವಿದ್ಯಾರ್ಥಿ ಸಮುದಾಯವನ್ನು ಕಾಪಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

“ಶಾಲೆ, ಕಾಲೇಜ್ ಮತ್ತು ವಿ.ವಿ. ಶುಲ್ಕಗಳು ಹೆಚ್ಚಿರುವುದು ಒಂದು ಪ್ರಮುಖ ಸಮಸ್ಯೆ. ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳ ಅಗತ್ಯ ಎಷ್ಟಿದೆ ಎಂಬುದಕ್ಕೆ ಇದು ಇತ್ತೀಚಿನ ಉದಾಹರಣೆಯಷ್ಟೆ. ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ನಿಧಿಗಳನ್ನು ಕೊಡುವಲ್ಲಿ ಸರಕಾರದ ವಿಳಂಬ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳ ಮೇಲೆ ಅಪಾರ ಒತ್ತಡಗಳನ್ನು ಹೇರುತ್ತಿವೆ” ಎಂದು ಎನ್‌ಎಸ್‌ಯುಐ ರಾಷ್ಟ್ರೀಯ ಕಾರ್ಯದರ್ಶಿ ಲೋಕೇಶ್ ಚುಗ್ ಟಿಪ್ಪಣಿ ಮಾಡಿದ್ದಾರೆ.

ಈ ವಿದ್ಯಾರ್ಥಿನಿಗೆ ನ್ಯಾಯ ಒದಗಿಸಲು ಪ್ರಯತ್ನಿಸುತ್ತಿರುವ ಎಲ್ಲ ಶಕ್ತಿಗಳೊಂದಿಗೆ ತಾನೂ ನಿಲ್ಲುವುದಾಗಿ ಹೇಳಿರುವ ಎಐಎಸ್‌ಎ, ನಿಲ್ಲಿಸಿರುವ ಎಲ್ಲ ಸ್ಕಾಲರ್‌ಶಿಪ್‌ಗಳನ್ನು ತಕ್ಷಣವೇ ಪಾವತಿ ಮಾಡಬೇಕು ಎಂದು ಆಗ್ರಹಿಸಿದೆ.

ಯುವ ವಿದ್ಯಾರ್ಥಿನಿಯೊಬ್ಬಳ ಕೊಲೆಯಿದು– ಎಐಡಿಡಬ್ಲ್ಯುಎ ಖಂಡನೆ

ಈ ಸಂದರ್ಭದಲ್ಲಿ ರೋಹಿತ್ ವೆಮುಲಾ ನೆನಪಾಗುತ್ತಿದೆಯೇ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ತನ್ನ ಹೇಳಿಕೆಯಲ್ಲಿ ಖೇದದಿಂದ ಕೇಳಿದೆ.

ತೆಲಂಗಾಣದ ಸಾಮಾನ್ಯ ಹಿನ್ನೆಲೆಯ ಕುಟಂಬವೊಂದಕ್ಕೆ ತಮ್ಮ ಮಗಳನ್ನು ದಿಲ್ಲಿಯಲ್ಲಿ ಉನ್ನತ ಶಿಕ್ಷಣಕ್ಕೆ ಕಳುಹಿಸುವುದೇ ಒಂದು ಸವಾಲು. ಅದು ಅವರ ಕಟುಂಬದ ಮೇಲೆ ಎಂತಹ ಹಣಕಾಸು ಹೊರೆ ಹಾಕಿತೆಂದರೆ, ಅವರು ತಮ್ಮ ಮನೆಯನ್ನೇ ಒತ್ತೆಯಿಡಬೇಕಾಗಿ ಬಂತು. ಲಾಕ್‌ಡೌನ್ ನೆಪ ಮಾಡಿ ವಿದ್ಯಾರ್ಥಿವೇತನಗಳನ್ನು ನಿಲ್ಲಿಸಿದ ಸರಕಾರ ಅವರ ಶುಲ್ಕಗಳ ಪಾವತಿಗೆ ವಿನಾಯ್ತಿ–ರಿಯಾಯ್ತಿಗಳನ್ನೇನೂ ಕೊಡಲಿಲ್ಲ.

ದೇಶದಲ್ಲಿ ಉನ್ನತ ಶಿಕ್ಷಣದಲ್ಲಿ ಸಾವಿರಾರು ವಿದ್ಯಾರ್ಥಿಗಳು ಹೋರಾಟ ನಡೆಸಬೇಕಾಗಿ ಬಂದಿದೆ. ಅವರು ಕನಸು ಕಾಣುತ್ತಾರೆ, ಪರೀಕ್ಷೆಗಳಲ್ಲಿ ಒಳ್ಳೆಯ ಫಲಿತಾಂಶ ಪಡೆಯುತ್ತಾರೆ, ಆದರೆ ಸರಕಾರ ಮತ್ತು ಆಡಳಿತದಿಂದ ಅವರಿಗೆ ಸಿಗುವುದು ಉಪೇಕ್ಷೆಯಷ್ಟೇ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಅನುಪಾತ ಅತ್ಯಂತ ಕೆಳಮಟ್ಟದಲ್ಲಿರುವ ಈ ದೇಶದಲ್ಲಿ ಶಿಕ್ಷಣ ಪಡೆಯುವ ಕನಸಿನೊಂದಿಗೆ ಶ್ರಮಪಟ್ಟು ದಿಲ್ಲಿಗೆ ಬಂದ ಐಶ್ವರ್ಯಾಳನ್ನು ಸಾಯಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020, ಈ ಕಂದರವನ್ನು ಮತ್ತಷ್ಟು ಹೆಚ್ಚಿಸಲಿದೆ, ಹಣ ಇಲ್ಲದವರಿಗೆ ಶಿಕ್ಷಣ ಪಡೆಯುವ ಅರ್ಹತೆಯೇ ಇಲ್ಲದಂತೆ ಮಾಡುತ್ತಿದೆ.

ಪ್ರಸಕ್ತ ಬಿಜೆಪಿ ಕೇಂದ್ರ ಸರಕಾರ ಭಾರತೀಯ ವಿದ್ಯಾರ್ಥಿಗಳು ಮತ್ತು ನಾಗರಿಕರನ್ನು ಕುರಿತ ತನ್ನ ಎಲ್ಲ ನಡೆಗಳಲ್ಲೂ ಇಂತಹ ಕ್ರಿಮಿನಲ್ ವರ್ತನೆಯನ್ನು ತೋರುತ್ತಿದೆಯಷ್ಟೇ ಅಲ್ಲ, ನ್ಯಾಯ ಮತ್ತು ಸಮಾನತೆಯ ಎಲ್ಲ ನೀತಿಗಳನ್ನೂ ಕ್ಷಯಗೊಳಿಸಿದೆ.

ಇದು ಒಬ್ಬ ಯುವ ವಿದ್ಯಾರ್ಥಿನಿಯ ಕೊಲೆ ಎಂದು ಖಂಡಿಸಿರುವ ಎಐಡಿಡಬ್ಲ್ಯುಎ, ಬಾಕಿಯಿರುವ ಎಲ್ಲ ವಿದ್ಯಾರ್ಥಿವೇತನ ಮೊತ್ತವನ್ನೂ ಆಕೆಯ ಪಾಲಕರಿಗೆ ಕೊಡಬೇಕು ,ಜತೆಗೆ ಸೂಕ್ತ ಹೆಚ್ಚುವರಿ ಪರಿಹಾರವನ್ನೂ ಕೊಡಬೇಕು ಎಂದು ಆಗ್ರಹಿಸಿದೆ. ಎಲ್ಲ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ಗಳನ್ನು ತಕ್ಷಣವೇ ಪಾವತಿ ಮಾಡಬೆಕು, ಆಮೂಲಕ, ವಿಶೇಷವಾಗಿ ಈ ಕೊವಿಡ್ ದುರಿತ ಸಮಯದಲ್ಲಿ ಯಾವ ವಿದ್ಯಾರ್ಥಿಯೂ ಸಂಕಟಗಳನ್ನು ಅನುಭವಿಸದಂತೆ ಖಾತ್ರಿಪಡಿಸಬೇಕು ಎಂದು ಅದು ಆಗ್ರಹಿಸಿದೆ.

‘ವಿಜ್ಞಾನ ಎಂದರೆ ಏನು?’

ನಾಗೇಶ್ ಹೆಗಡೆಯವರ “ವೈದ್ಯ ವಿಜ್ಞಾನವೇ ಎತ್ತಿತು ಸುತ್ತಿಗೆ” ಎಂಬ ಲೇಖನ ಪ್ರಜಾವಾಣಿಯಲ್ಲಿ (12/11/2020) ಪ್ರಕಟವಾಗಿದೆ. ಇದರಲ್ಲಿ ಅಮೆರಿಕಾ ಮತ್ತು ಇಂಗ್ಲೆಂಡುಗಳ ಪ್ರತಿಷ್ಠಿತ ವಿಜ್ಞಾನ ಪತ್ರಿಕೆಗಳು ಅಮೆರಿಕಾದ ಅಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ಟ್ರಂಪ್ ಅವರ ರಾಜಕಾರಣವನ್ನು ತೀಕ್ಷ್ಣವಾಗಿ ಟೀಕಿಸಿ ಗಟ್ಟಿ ರಾಜಕೀಯ ನಿಲುವನ್ನು ಪ್ರದರ್ಶಿಸಿದ ಅಪೂರ್ವ ಸಂಗತಿಯನ್ನು ನಾಗೇಶ್ ಹೆಗಡೆ ನಮೂದಿಸುತ್ತಾರೆ. ಲೇಖನದ ಶೀರ್ಷಿಕೆಯಲ್ಲಿನ ದ್ವಂದ್ವಾರ್ಥದ ‘ಸುತ್ತಿಗೆ’ ‘ಚುನಾವಣಾ ಕಾಲದ ರಾಜಕೀಯ’ (ರಾಜಕಾರಣ?) ದ ಬಗ್ಗೆ ವಿಜ್ಞಾನ ಪತ್ರಿಕೆಗಳು ‘ತಲೆಹಾಕು’ವುದು, ವಿಜ್ಞಾನಿ–ಸಾಹಿತಿ ಗಣೇಶಯ್ಯ ಅವರ “ತಲೆ ಹಾಕಲೂ ಬಾರದು” ಎಂಬ ಮಾತುಗಳಲ್ಲಿ ಪ್ರತಿಫಲಿತವಾಗುವ ಗೊಂದಲ ‘ವಿಜ್ಞಾನ ಎಂದರೆ ಏನು?’ ಎಂಬ ಬಗ್ಗೆ ಜನಸಾಮಾನ್ಯರಿಗೆ ಮಾತ್ರವಲ್ಲ, ವಿಜ್ಞಾನಿಗಳಿಗೂ ವೈಜ್ಞಾನಿಕ ಶಿಕ್ಷಣದ ಅಗತ್ಯವಿದೆ ಎಂಬುದನ್ನು ಹೇಳುತ್ತವೆ. 75 ವರ್ಷಗಳ ಹಿಂದೆ ಆರ್ವೆಲ್ ಈ ಕುರಿತು ಬರೆದ ಲೇಖನವನ್ನು ಮತ್ತೆ ಮುನ್ನೆಲೆಗೆ ತರುತ್ತವೆ.



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಈಗ್ಗೆ 75 ವರ್ಷಗಳ ಹಿಂದೆ ಅಂದರೆ 1945 ರಲ್ಲಿ ಇಂಗ್ಲೆಂಡಿನ ಟ್ರಿಬ್ಯೂನ್ ಪತ್ರಿಕೆಯಲ್ಲಿ ಜಾರ್ಜ್ ಆರ್ವೆಲ್ ‘ವಿಜ್ಞಾನ ಎಂದರೇನು?’ ಎಂಬ ಒಂದು ಲೇಖನವನ್ನು ಪ್ರಕಟಿಸಿದ್ದರು. ಅದೇ ಪತ್ರಿಕೆಯ ಹಿಂದಿನ ವಾರದ ಸಂಚಿಕೆಯಲ್ಲಿ ಜೆ. ಸ್ಟ್ಯೂಅರ್ಟ್ ಕುಕ್ ಎಂಬುವರು ಬರೆದಿದ್ದ ಕಾಗದಕ್ಕೆ ಪ್ರತಿಕ್ರಿಯೆಯಾಗಿ ಆರ್ವೆಲ್ ಬರೆದ ಲೇಖನ ಇದು.

ಆರ್ವೆಲ್ ಸಂಗ್ರಹಿಸಿ ಕೊಡುವಂತೆ, ಕುಕ್ ತಮ್ಮ ಕಾಗದದಲ್ಲಿ ಎರಡು ಸಂಗತಿಗಳನ್ನು ಹೇಳುತ್ತಾರೆ: 1. ‘ವೈಜ್ಞಾನಿಕ ಶ್ರೇಣೀಕರಣ’ದ ಅಪಾಯವನ್ನು ತಡೆಯುವ ಉತ್ತಮೋತ್ತಮ ಉಪಾಯವೆಂದರೆ ಎಲ್ಲಾ ಸಾರ್ವಜನಿಕರಿಗೂ ಸಾಧ್ಯವಾದ ಮಟ್ಟಿಗೆ ವೈಜ್ಞಾನಿಕ ಶಿಕ್ಷಣವನ್ನು ಕೊಡುವುದು. 2. ಜೊತೆಗೆ ವಿಜ್ಞಾನಿಗಳನ್ನು ಅವರ ಗೂಡುಗಳಿಂದ ಹೊರತಂದು ರಾಜಕೀಯ ಮತ್ತು ಆಡಳಿತದಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಮಾಡುವುದು.

ಕುಕ್ ಹೇಳಿಕೆಯನ್ನು ಅದರ ಸಾಮಾನ್ಯ ಅರ್ಥದಲ್ಲಿ ಒಪ್ಪಬಹುದೆಂದು ಆರ್ವೆಲ್ ಹೇಳುತ್ತಾರೆ. ಆದರೆ ಮಾಮೂಲಾಗಿ ಎಲ್ಲರೂ ಮಾಡುವಂತೆ ‘ವಿಜ್ಞಾನದ ನಿರ್ವಚನ’ವನ್ನು ಕುಕ್ ಕೊಡುವುದಿಲ್ಲವೆಂದು ಆಕ್ಷೇಪಿಸುತ್ತಾರೆ. ಮುಂದುವರೆದು ಆರ್ವೆಲ್ ಹೇಳುವುದನ್ನು ಸಂಗ್ರಹವಾಗಿ ಹೀಗೆ ಹೇಳಬಹುದು: ವಿಜ್ಞಾನಕ್ಕೆ ಎರಡು ಬಗೆಯ ಪರಿಚಿತ ನಿರ್ವಚನಗಳಿವೆ:

1. ವಿಜ್ಞಾನವೆಂದರೆ ಪ್ರಯೋಗಶಾಲೆಯ ಗೊತ್ತುಪಾಡಿನಲ್ಲಿ ಪ್ರಯೋಗಗಳನ್ನು ನಡೆಸಬಹುದಾದ ನಿಖರ ವಿಜ್ಞಾನಶಾಖೆಗಳು. ಇದರ ಪ್ರಕಾರ ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳು ವಿಜ್ಞಾನಶಾಖೆಗಳಲ್ಲವಾದ್ದರಿಂದ ಸಾಹಿತ್ಯಕ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸುವುದು ಸಾಧ್ಯವಿಲ್ಲವೆಂದು ಜನರಿಗೆ ಹೇಳಿದಂತಾಗುತ್ತದೆ.
2. ವಿಜ್ಞಾನವೆಂದರೆ ಗಮನಿಸಿದ ವಾಸ್ತವಾಂಶಗಳನ್ನು ತರ್ಕಬದ್ಧವಾದ ವಿಚಾರದ ಮೂಲಕ, ಪರೀಕ್ಷಿಸಿ ನೋಡಬಹುದಾದ ತೀರ್ಮಾನಗಳಿಗೆ ಬರುವ ಆಲೋಚನಾ ಪದ್ಧತಿ.

ಯಾವುದೇ ವಿಜ್ಞಾನಿಯನ್ನು ಅಥವಾ ಸುಶಿಕ್ಷಿತ ವ್ಯಕ್ತಿಯನ್ನು ‘ವಿಜ್ಞಾನವೆಂದರೆ ಏನು?’ ಎಂದು ಕೇಳಿದರೆ ಎರಡನೆಯ ನಿರ್ವಚನದ ಅರ್ಥಕ್ಕೆ ಸಮೀಪದ ಉತ್ತರವನ್ನೇ ಕೊಟ್ಟಾರು. ಆದರೆ ದಿನನಿತ್ಯದ ವ್ಯವಹಾರದಲ್ಲಿ ಜನರಿಗೆ ವಿಜ್ಞಾನವೆಂದರೆ ಪ್ರಯೋಗಶಾಲೆಯಲ್ಲಿ ಏನು ನಡೆಯುತ್ತದೆಯೋ ಅದು. ವಿಜ್ಞಾನವೆಂದ ತಕ್ಷಣ ಜನಸಾಮಾನ್ಯರ ಕಣ್ಮುಂದೆ ಬುನ್ಸೆನ್ ಬರ್ನರ್, ಗಾಜಿನ ಪ್ರನಾಳಗಳು, ಥಾರ್ಟುಗಳು, ಅಳತೆಯ ಸಾಧನಗಳು ಮತ್ತು ಸೂಕ್ಷ್ಮದರ್ಶಕ ಯಂತ್ರಗಳು ಬಂದು ನಿಲ್ಲುತ್ತವೆ. ಜೀವಶಾಸ್ತ್ರಜ್ಞ, ಖಗೋಳಶಾಸ್ತ್ರಜ್ಞ, ಗಣಿತಶಾಸ್ತ್ರಜ್ಞ, ಬಹುಶಃ ಮನಶ್ಶಾಸ್ತ್ರಜ್ಞನನ್ನೂ ವಿಜ್ಞಾನಿಯೆಂದು ಕರೆಯಬಹುದು. ಆದರೆ, ‘ವಿಜ್ಞಾನಿ’ಯೆಂಬ ಪದವನ್ನು ರಾಜನೀತಜ್ಞ, ಕವಿ, ಪತ್ರಕರ್ತ, ಅಥವಾ ತತ್ವಶಾಸ್ತ್ರಜ್ಞನಿಗೂ ಸಂಬಂಧಿಸಿದಂತೆ ಬಳಸಬಹುದೆಂದು ಯಾರೂ ಯೋಚಿಸುವುದಿಲ್ಲ. ನಮ್ಮ ಯುವಜನರಿಗೆ ವೈಜ್ಞಾನಿಕ ಶಿಕ್ಷಣ ಸಿಗಬೇಕೆಂದು ಹೇಳುವವರ ಗ್ರಹಿಕೆಯಲ್ಲಿ ವಿಜ್ಞಾನವೆಂದರೆ, ಅವರಿಗೆ ನಿಖರವಾಗಿ ಆಲೋಚಿಸಲು ಕಲಿಸಬೇಕೆಂಬ ಅರ್ಥದ ಬದಲು ರೇಡಿಯೋ ಆಕ್ಟಿವಿಟಿಯ ಬಗ್ಗೆ, ನಕ್ಷತ್ರಗಳ ಬಗ್ಗೆ, ಶರೀರರಚನಾಶಾಸ್ತ್ರದ ಬಗ್ಗೆ ಅವರದೇ ಶರೀರಗಳ ಬಗ್ಗೆ ಕಲಿಸಬೇಕೆಂಬ ಅರ್ಥವಿರುತ್ತದೆ.

ಆರ್ವೆಲ್ ಹೇಳುವಂತೆ, ವಿಜ್ಞಾನದ ಅರ್ಥದ ಬಗ್ಗೆ ಕೆಲಮಟ್ಟಿಗೆ ಉದ್ದೇಶಪೂರ್ವಕವಾದ ಈ ಗೊಂದಲದಲ್ಲಿ ಒಂದು ದೊಡ್ಡ ಅಪಾಯವಿದೆ. ಜನರು ‘ವೈಜ್ಞಾನಿಕ’ ಶಿಕ್ಷಣ ಪಡೆದುಬಿಟ್ಟರೆ ಅವರು ಉಳಿದೆಲ್ಲಾ ವಿಷಯಗಳನ್ನು ಗ್ರಹಿಸುವಷ್ಟು ಬುದ್ಧಿವಂತರಾಗಿಬಿಡುತ್ತಾರೆ ಎಂಬ ನಂಬಿಕೆಗೆ ಅದು ದಾರಿಮಾಡಿಕೊಡುತ್ತದೆ. ರಾಜಕೀಯ,



ಸಮಾಜಶಾಸ್ತ್ರೀಯ, ನೈತಿಕ, ತತ್ವಶಾಸ್ತ್ರೀಯ, ಅಷ್ಟೇ ಅಲ್ಲ, ಸಾಹಿತ್ಯಕ ಪ್ರಶ್ನೆಗಳನ್ನು ಕುರಿತಂತೆ ಒಬ್ಬ ವಿಜ್ಞಾನಿಯ ಅಭಿಪ್ರಾಯಕ್ಕೆ ಸಾಮಾನ್ಯ ಜನರ ಅಭಿಪ್ರಾಯಕ್ಕಿಂತ ಹೆಚ್ಚು ಬೆಲೆ ಇದೆ. ಒಟ್ಟಿನಲ್ಲಿ ವಿಜ್ಞಾನಿಗಳ ನಿಯಂತ್ರಣದಲ್ಲಿರುವ ಪ್ರಪಂಚವು ಉತ್ತಮ ಪ್ರಪಂಚ ಎಂದಾಗುತ್ತದೆ. ಆದರೆ ಈಗ ರೂಢಿಗತವಾಗಿರುವ ವಿಜ್ಞಾನದ ನಿರ್ವಚನೆಯ ಪ್ರಕಾರ ವಿಜ್ಞಾನಿಗಳು ಕೇವಲ ಅವರವರ ಅಧ್ಯಯನ ಶಾಖೆಗಳಲ್ಲಿ ವಿಶೇಷ ಪರಿಣಿತರು. ಅಂದರೆ ಒಬ್ಬ ಭೌತಶಾಸ್ತ್ರಜ್ಞ, ಅಥವಾ ರಸಾಯನಶಾಸ್ತ್ರಜ್ಞ ಆಗಿರುವುದರಿಂದಲೇ ಅವನು ಒಬ್ಬ ಕವಿ ಅಥವಾ ಲಾಯರ್ ಆಗಿರುವುದಕ್ಕಿಂತಾ ಹೆಚ್ಚು ಬುದ್ಧಿವಂತ ಎಂದಾಗುತ್ತದೆ. ಈಗಾಗಲೇ ಹಾಗೆಂದು ನಂಬುವ ಲಕ್ಷಾಂತರ ಜನರಿದ್ದಾರೆ.

ಸಂಕುಚಿತ ಅರ್ಥದಲ್ಲಿ ‘ವಿಜ್ಞಾನಿ’ ಎನಿಸಿಕೊಂಡವರು ‘ವಿಜ್ಞಾನೇತರ’ ವಿಷಯಗಳಲ್ಲಿ ಉಳಿದವರಿಗಿಂತಲೂ ಹೆಚ್ಚು ವಸ್ತುನಿಷ್ಠವಾಗಿ ಯೋಚಿಸಬಲ್ಲರೆ? ಇದಕ್ಕೊಂದು ಸರಳ ಪರೀಕ್ಷೆ ಸಾಕು. ಸ್ಥೂಲ ಅರ್ಥದಲ್ಲಿ ವಿಜ್ಞಾನವು ಅಂತಾರಾಷ್ಟ್ರೀಯ ಎಂದು ಹೇಳಲಾಗುತ್ತದೆ. ಆದರೆ ರಾಷ್ಟ್ರೀಯತೆಯ ಪ್ರಶ್ನೆ ಬಂದಾಗ ಹೆಚ್ಚುಕಡಿಮೆ ಎಲ್ಲಾ ವೈಜ್ಞಾನಿಕ ಜನರೂ ಅವರವರ ಸರ್ಕಾರಗಳ ಬೆನ್ನಿಗೆ ಸಾಲುಗಟ್ಟಿ ನಿಲ್ಲುತ್ತಾರೆ. ಫ್ಯಾಸಿಸ್ಟ್ ಜರ್ಮನಿಯ ಉದಾಹರಣೆ ಸಾಕು. ವಿಜ್ಞಾನಿಗಳ ಸಕ್ರಿಯ ಪಾಲ್ಗೊಳ್ಳುವಿಕೆ ಇಲ್ಲದೆ ಯುದ್ಧಗಳು ನಡೆಯುವುದು ಅಸಾಧ್ಯ. ಅಣ್ವಸ್ತ್ರಗಳನ್ನು ಯಾತಕ್ಕಾಗಿ ಬಳಸುತ್ತಾರೆ ಎಂಬುದು ವಿಜ್ಞಾನಿಗಳಿಗೆ ಗೊತ್ತಿದ್ದೂ ತಮ್ಮ ಮಹಾನ್ ಸರ್ಕಾರಗಳ ರಹಸ್ಯಯೋಜನೆಗಳಿಗೆ ಕೈಜೋಡಿಸಿ ಕೀರ್ತಿ–ಪ್ರಶಸ್ತಿ–ಬಹುಮಾನಗಳನ್ನು ಪಡೆಯುವವರಲ್ಲಿ ಇಂಥ ವಿಜ್ಞಾನಿಗಳ ಸಂಖ್ಯೆಯೇ ದೊಡ್ಡದು. ನಿಜವಾಗಿಯೂ ವೈಜ್ಞಾನಿಕವಾಗಿ ಯೋಚಿಸಿ, ಸರ್ಕಾರಗಳನ್ನು ಎದುರುಹಾಕಿಕೊಂಡು ತೊಂದರೆ ತಂದುಕೊಂಡವರ ಪೈಕಿ ವಿಜ್ಞಾನಿಗಳಿಗಿಂತಾ ಲೇಖಕರು ಮತ್ತು ಪತ್ರಕರ್ತರ ಸಂಖ್ಯೆಯೇ ಹೆಚ್ಚು.

ಬಂಡವಾಳವಾದೀ ಸಮಾಜದ ಸಂರಚನೆಯನ್ನು ಪ್ರಶ್ನಿಸದೆ, ಆಳುವವರ ಬಿರುದು–ಬಾವಲಿಗಳನ್ನು ಪಡೆಯುವ ವಿಜ್ಞಾನಿಗಳು ಎಲ್ಲ ದೇಶಗಳಲ್ಲೂ ಇದ್ದರು–ಇದ್ದಾರೆ.

ಇಂಗ್ಲೆಂಡಿನಲ್ಲಿ ವ್ಯವಸ್ಥೆಯ ಯಥಾಸ್ಥಿತಿಯನ್ನು ಒಪ್ಪಿಕೊಂಡು ಸರ್ಕಾರೀ ಗೌರವಗಳಿಗೆ ಪಾತ್ರರಾದ ವಿಜ್ಞಾನಿಗಳೇ ಹೆಚ್ಚು. ವಿರೋಧಿಸಿದ ಬೆರಳೆಣಿಕೆಯ ವಿಜ್ಞಾನಿಗಳು ಕಮ್ಯುನಿಸ್ಟರಾಗಿದ್ದರು.

ಆರ್ವೆಲ್ರ ಈ ಲೇಖನ ಪ್ರಕಟವಾಗಿ 75 ವರ್ಷಗಳೇ ಕಳೆದಿವೆ. ಈಗ ಕನ್ನಡದ ವಿಜ್ಞಾನ ಪತ್ರಕರ್ತ ನಾಗೇಶ್ ಹೆಗಡೆಯವರ “ವೈದ್ಯ ವಿಜ್ಞಾನವೇ ಎತ್ತಿತು ಸುತ್ತಿಗೆ” ಎಂಬ ಲೇಖನ ಪ್ರಜಾವಾಣಿಯಲ್ಲಿ (12/11/2020) ಪ್ರಕಟವಾಗಿದೆ. ಇದರಲ್ಲಿ ಅಮೆರಿಕಾ ಮತ್ತು ಇಂಗ್ಲೆಂಡುಗಳ ಪ್ರತಿಷ್ಠಿತ ವಿಜ್ಞಾನ ಪತ್ರಿಕೆಗಳಾದ “ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸನ್”, “ಸೈಂಟಿಫಿಕ್ ಅಮೆರಿಕನ್”, ಮತ್ತು “ನೇಚರ್”, ಅಮೆರಿಕಾದ ಅಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ಟ್ರಂಪ್ ಅವರ ರಾಜಕಾರಣವನ್ನು ತೀಕ್ಷ್ಣವಾಗಿ ಟೀಕಿಸಿ ಗಟ್ಟಿ ರಾಜಕೀಯ ನಿಲುವನ್ನು ಪ್ರದರ್ಶಿಸಿದ ಅಪೂರ್ವ ಸಂಗತಿಯನ್ನು ನಾಗೇಶ್ ಹೆಗಡೆ ನಮೂದಿಸುತ್ತಾರೆ. ಭಾರತದಲ್ಲಿ “ಅಧಿಕಾರದಲ್ಲಿದ್ದವರನ್ನು ಟೀಕಿಸುವ ಧೈರ್ಯವನ್ನು ನಮ್ಮ ವಿಜ್ಞಾನ ಪತ್ರಿಕೆಗಳೂ ಅಪರೂಪಕ್ಕೆ ತೋರಿಸುತ್ತಿವೆ” ಎಂದು ಶ್ಲಾಘಿಸುವ ಹೆಗಡೆ, ಇದಕ್ಕೆ ದೃಷ್ಟಾಂತವಾಗಿ “ಪುರಾಣಕಾಲದ ವಿಜ್ಞಾನವನ್ನು ಅತಿಯಾಗಿ ಶ್ಲಾಘಿಸಿದ್ದಕ್ಕೆ ನರೇಂದ್ರ ಮೋದಿಯವರನ್ನು ಮತ್ತು ಹಿಂದುತ್ವವಾದಿಗಳನ್ನು, ಬೆಂಗಳೂರಿನಿಂದ ಪ್ರಕಟವಾಗುವ ಪ್ರತಿಷ್ಠಿತ ‘ಕರೆಂಟ್ ಸೈನ್ಸ್’ ಪತ್ರಿಕೆ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿ’ದ್ದನ್ನು ಪ್ರಸ್ತಾಪಿಸುತ್ತಾರೆ. “ಹಾಗೆಂದು ಚುನಾವಣಾ ಕಾಲದ ರಾಜಕೀಯದ ಬಗ್ಗೆ” ವಿಜ್ಞಾನ ಪತ್ರಿಕೆಗಳು “ಎಂದೂ ಇವು ತಲೆ ಹಾಕಲಿಲ್ಲ” ಎನ್ನುತ್ತಾರೆ. ಜೊತೆಗೆ, ತಲೆ “ಹಾಕಲೂಬಾರದು” ಎಂಬ ‘ಹೆಸರಾಂತ ಸಸ್ಯವಿಜ್ಞಾನಿ ಮತ್ತು ಕನ್ನಡದ ಜನಪ್ರಿಯ ಸಾಹಿತಿ” ಪ್ರೊ.ಕೆ.ಎನ್.ಗಣೇಶಯ್ಯ” ನವರ ಅಭಿಪ್ರಾಯವನ್ನು ಪ್ರಸ್ತಾಪಿಸುತ್ತಾರೆ.

ಕರೋನಾ ಕಾಲದಲ್ಲಿ ”ನಮ್ಮಲ್ಲೂ ವಿಜ್ಞಾನ ರಂಗದಲ್ಲಿ ರಾಜಕೀಯ ದೃಢವಾಗಿ ತೂರಿಕೊಂಡಿದೆ. ಸುರಕ್ಷತೆಯ ದೃಷ್ಟಿಯಿಂದಲೋ ಏನೊ, ವಿಜ್ಞಾನದ ವಕ್ತಾರರು ಮುಖಕ್ಕೆ ಕವಚ ಧರಿಸಿ, ಸಾಮಾಜಿಕ ಅಂತರವನ್ನು ಶಿಸ್ತಾಗಿ ಕಾಯ್ದುಕೊಂಡಿದ್ದಾರೆ!” ಎಂದು ನಾಗೇಶ್ ಹೆಗಡೆ ಲೇಖನವನ್ನು ಮುಗಿಸುತ್ತಾರೆ.

ಲೇಖನದ ಶೀರ್ಷಿಕೆಯಲ್ಲಿನ ದ್ವಂದ್ವಾರ್ಥದ ‘ಸುತ್ತಿಗೆ’ ‘ಚುನಾವಣಾ ಕಾಲದ ರಾಜಕೀಯ’ (ರಾಜಕಾರಣ?) ದ ಬಗ್ಗೆ ವಿಜ್ಞಾನ ಪತ್ರಿಕೆಗಳು ‘ತಲೆಹಾಕು’ವುದು, ವಿಜ್ಞಾನಿ–ಸಾಹಿತಿ ಗಣೇಶಯ್ಯ ಅವರ “ತಲೆ ಹಾಕಲೂ ಬಾರದು” ಎಂಬ ಅಭಿಪ್ರಾಯ, “ಪುರಾಣಕಾಲದ ವಿಜ್ಞಾನದ ಅತಿಯಾದ ಶ್ಲಾಘನೆ”ಗೆ ‘ಕರೆಂಟ್ ಸೈನ್ಸ್’ ನ ‘ತೀವ್ರ ತರಾಟೆ’, “ವಿಜ್ಞಾನರಂಗದಲ್ಲಿ ರಾಜಕೀಯ ದೃಢವಾಗಿ ತೂರಿಕೊಂಡಿದೆ”, ‘ವಿಜ್ಞಾನದ ವಕ್ತಾರರು ಕಾಯ್ದುಕೊಂಡಿರುವ ಸಾಮಾಜಿಕ ಅಂತರ’ ಈ ಮಾತುಗಳು 75 ವರ್ಷಗಳ ಹಿಂದೆ ಆರ್ವೆಲ್ ಬರೆದ ಲೇಖನವನ್ನು ಮತ್ತೆ ಮುನ್ನೆಲೆಗೆ ತರುತ್ತವೆ. ವಿಜ್ಞಾನದ ಬಗ್ಗೆ ನಾಗೇಶ್ ಹೆಗಡೆ ಮತ್ತು ಗಣೇಶಯ್ಯನವರ ಮಾತುಗಳಲ್ಲಿ ಪ್ರತಿಫಲಿತವಾಗುವ ಗೊಂದಲ ‘ವಿಜ್ಞಾನ ಎಂದರೆ ಏನು?’ ಎಂಬ ಬಗ್ಗೆ ಜನಸಾಮಾನ್ಯರಿಗೆ ಮಾತ್ರವಲ್ಲ, ವಿಜ್ಞಾನಿಗಳಿಗೂ ವೈಜ್ಞಾನಿಕ ಶಿಕ್ಷಣದ ಅಗತ್ಯವಿದೆ ಎಂಬುದನ್ನು ಹೇಳುತ್ತವೆ.

ಮನುಷ್ಯ ಚರಿತ್ರೆಯಲ್ಲಿ ವಿಜ್ಞಾನದ ಪಾತ್ರವನ್ನು ಹೇಳುವ ಲೇಖನದಲ್ಲಿ, ದ್ವಂದ್ವಾರ್ಥದ ಪದಗಳ ಮೂಲಕ ಅವರು ಸೂಚಿಸಬಯಸುವ ಸತ್ಯವನ್ನು ಕೊನೆಗೂ ಸಾಹಿತ್ಯಕ ಭಾಷೆಯಲ್ಲಿ ಹೇಳಬೇಕಾಗಿದೆ ಎಂಬುದು ‘ಸಾಹಿತ್ಯದ ವೈಜ್ಞಾನಿಕತೆ’, ‘ವಿಜ್ಞಾನದ ಮನುಷ್ಯತ್ವ’ ಈ ಎರಡರ ಸಾಂಗತ್ಯ ಮತ್ತು ಐಕ್ಯತೆಗಳನ್ನು ಹೇಳುತ್ತವೆ.

ಮಾರ್ಕ್ಸ್ ಮತ್ತು ಎಂಗಲ್ಸ್ ಪ್ರತಿಪಾದಿಸಿದ ಚಾರಿತ್ರಿಕ ಭೌತವಾದವು, ವಿಜ್ಞಾನವೂ ಸೇರಿದಂತೆ ಮನುಷ್ಯನ ಪ್ರಜ್ಞೆ ಮತ್ತು ಶ್ರಮಗಳಿಂದ ಸೃಷ್ಟಿಯಾದ ಎಲ್ಲವನ್ನೂ ಒಳಗೊಳ್ಳುವ ಸಮಗ್ರ ಲೋಕದೃಷ್ಟಿ. ಬರಿ ವಿಜ್ಞಾನ ಎಂಬುದಿಲ್ಲ. ಇರುವುದು ವಿಜ್ಞಾನದ ಚರಿತ್ರೆ ಮಾತ್ರ. ನಿಸರ್ಗ ವಿಜ್ಞಾನದೊಂದಿಗೆ ಮನುಷ್ಯ ವಿಜ್ಞಾನ, ಅಂದರೆ ಮನುಷ್ಯ ಸಂಬಂಧಗಳ ವಿಜ್ಞಾನವನ್ನು ಕೂಡಿಸಿದಾಗ ಮಾತ್ರ ಪೂರ್ಣ ವಿಜ್ಞಾನ ಸಾಧ್ಯವಾಗುತ್ತದೆ. ವಾಸ್ತವವಾಗಿ ಅವು ಎರಡಲ್ಲ. ಒಂದೇ ವಿಜ್ಞಾನದ ಎರಡು ಮುಖಗಳು ಅಷ್ಟೆ ಎಂದು ಹೇಳುವ ಮಾರ್ಕ್ಸ್ ಮಾತುಗಳು ಚಾರಿತ್ರಿಕ ಭೌತವಾದೀ ದೃಷ್ಟಿಕೋನದ ಸಮಗ್ರತೆಯನ್ನು ಹೇಳುತ್ತವೆ. ಇಂಥ ಸಮಗ್ರ ದೃಷ್ಟಿಕೋನವಿಲ್ಲದೆ ಮಾಡುವ ವಸ್ತುಗಳ ವಿಶ್ಲೇಷಣೆ ಮತ್ತು ಅವುಗಳ ನಡುವಿನ ಪರಸ್ಪರ ಸಂಬಂಧಗಳ ಅನ್ವೇಷಣೆಯು ನಿಸರ್ಗ ವಿಜ್ಞಾನದ ಶಾಖೆಗಳಲ್ಲಿ ಗೊಂದಲಮಯವಾದ ಪ್ರಶ್ನೆಗಳನ್ನು ಎತ್ತುತ್ತವೆ.

ಜೆ.ಸ್ಟ್ಯೂಅರ್ಟ್ ಕುಕ್ ಹೇಳುವಂತೆ, ವಿಜ್ಞಾನಿಗಳನ್ನು ಅವರ ಗೂಡುಗಳಿಂದ ಹೊರತಂದು ರಾಜಕೀಯ ಮತ್ತು ಆಡಳಿತದಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಮಾಡುವ ಅಗತ್ಯವಿದೆ.



ಬಿಹಾರ ಚುನಾವಣಾ ಫಲಿತಾಂಶ





ಬಿಹಾರ ಚುನಾವಣೆಯು ಕೆಲವು ಸಕಾರಾತ್ಮಕ ಅಂಶಗಳನ್ನು ಮುನ್ನೆಲೆಗೆ ತಂದಿದೆ: ಒಂದು ಪರಿಣಾಮಕಾರಿ ಚುನಾವಣಾ ಮೈತ್ರಿಕೂಟ ರಚಿಸುವುದು; ಜನರ ನಿಜವಾದ ಸಮಸ್ಯೆಗಳನ್ನು ತೆಗೆದುಕೊಳ್ಳುವುದು, ಜನಪರ ನೀತಿಗಳನ್ನು ಜನರ ಮುಂದಿಡುವುದು, ಮತ್ತು ಯುವಜನರನ್ನು ಹುರಿದುಂಬಿಸಿ ಆಕರ್ಷಿಸುವ ಸಾಮರ್ಥ್ಯ ಪಡೆಯುವುದು. ಇವುಗಳನ್ನು ಮುಂದಿನ ದಿನಗಳಲ್ಲಿ ಇಡೀ ದೇಶಕ್ಕೆ ಕೊಂಡೊಯ್ಯಲು ಸಾಧ್ಯವಾಗಬೇಕು.



ಎನ್‌ಡಿಎ ಗೆ ಅಲ್ಪದರಲ್ಲಿ ಗೆಲುವು, ಗಮನಾರ್ಹ ಹಿನ್ನಡೆ

ಪ್ರಕಾಶ ಕಾರಟ್

ಬಿಹಾರ ವಿಧಾನಸಭೆ ಚುನಾವಣೆಯು ಸ್ವಲ್ಪದರಲ್ಲಿ ಬಿಜೆಪಿ–ಜೆಡಿಯು ಮೈತ್ರಿಕೂಟದ ಪರವಾಗಿ ಬಂದಿದೆ. ಅದು 'ಮಹಾಗಟಬಂಧನ'ದ 110 ಸ್ಥಾನಗಳ ವಿರುದ್ಧ 125 ಸ್ಥಾನಗಳನ್ನು ಗೆದ್ದಿದೆ. ಆದರೆ, ಈ ಎರಡು ಮೈತ್ರಿಕೂಟಗಳ ನಡುವಿನ ಒಟ್ಟು ಮತಗಳ ವ್ಯತ್ಯಾಸವು ಕೇವಲ ಶೇಕಡಾ 0.2 ರಷ್ಟಿದೆ.

ಚುನಾವಣಾ ಫಲಿತಾಂಶದಲ್ಲಿ ಗೆಲುವನ್ನು ಸಾಧಿಸಿದ್ದರೂ, ಎನ್.ಡಿ.ಎ.ಗೆ ಸಾಕಷ್ಟು ಹಿನ್ನಡೆಯಾಗಿದೆ. 2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ, ಬಿಜೆಪಿ–ಜೆಡಿಯು ಮೈತ್ರಿಕೂಟಕ್ಕೆ ಶೇಕಡಾ 12.4 ರಷ್ಟು ಪ್ರಭಾವ ಕಡಿಮೆಯಾಗಿದೆ. ನಿತಿಶ್ ಕುಮಾರ್ ಸರ್ಕಾರದ ವಿರುದ್ಧದ ಜನರ ಅತೃಪ್ತಿಯು ಹಿಂದಿನ ಚುನಾವಣೆಯಲ್ಲಿ ಜೆಡಿಯು ಪಡೆದ 71 ಸ್ಥಾನಗಳ ಬದಲು ಈ ಬಾರಿ ಕೇವಲ 43 ಸ್ಥಾನಗಳನ್ನು ಪಡೆಯುವುದರಲ್ಲಿ ವ್ಯಕ್ತವಾಗಿದೆ. ಹಿಂದಿನ ಚುನಾವಣೆಯಲ್ಲಿ 'ಮಹಾಗಟಬಂಧನ'ದ ಮುಖ್ಯಮಂತ್ರಿಯಾದ ನಂತರ 2017ರಲ್ಲಿ ನಿತೀಶ್ ಕುಮಾರ್ ಅವರು ಬಿಜೆಪಿ ಕಡೆ ಪಕ್ಷಾಂತರ ಮಾಡಿದ್ದನ್ನು ಜನರು ಇಷ್ಟಪಟ್ಟಿಲ್ಲ, ಅವರು ಈ ನಗ್ನ ಸಮಯಸಾಧಕತನಕ್ಕಾಗಿ ಬಹಳ ಅನುಭವಿಸಬೇಕಾಯಿತು.

ತೇಜಸ್ವಿ ಯಾದವ್ ಅವರ ನಾಯಕತ್ವದಲ್ಲಿನ ಮಹಾಗಟಬಂಧನದ ಚುನಾವಣಾ ಪ್ರಚಾರವು ಜನರಿಂದ, ಅದರಲ್ಲೂ ಯುವಜನರಿಂದ ಭಾರಿ ಸ್ಪಂದನೆಯನ್ನು ಪಡೆಯಿತು. ಅವರು ಉದ್ಯೋಗ ಮತ್ತು ಆರ್ಥಿಕ ನ್ಯಾಯ ಕುರಿತು ಗಮನ ಕೇಂದ್ರೀಕರಿಸಿ ಪ್ರಚಾರ ಮಾಡಿದರು. ಎಡಪಕ್ಷಗಳ ಪಾಲ್ಗೊಳ್ಳುವಿಕೆಯಿಂದಾಗಿ ಚುನಾವಣಾ ಪ್ರಚಾರದಲ್ಲಿ ಲಾಕ್ಡೌನಿನಿಂದಾದ ಉದ್ಯೋಗ ನಷ್ಟ, ಆರ್ಥಿಕ ಸಂಕಟ, ಹಿಮ್ಮುಖ ವಲಸೆ, ರೈತರ ಸಮಸ್ಯೆಗಳು ಹಾಗೂ ದುಡಿಯುವ ಜನರ ಹಕ್ಕುಗಳ ಬಗ್ಗೆ ಹೆಚ್ಚು ಒತ್ತುಕೊಡಲು ಸಾಧ್ಯವಾಯಿತು.

16 ಸ್ಥಾನಗಳನ್ನು ಪಡೆದು ಎಡಪಕ್ಷಗಳು ಉತ್ತಮ ಸಾಧನೆಗೈದವು, ಅದರಲ್ಲಿ ಸಿಪಿಐ(ಎಂ.ಎಲ್.) 12, ಸಿಪಿಐ(ಎಂ) 2 ಹಾಗೂ ಸಿಪಿಐ 2 ಸ್ಥಾನಗಳನ್ನು ಪಡೆದಿರುವುದು ಜನರು ಈ ಚುನಾವಣೆಯಲ್ಲಿ ಅವರ ಬದುಕಿನಲ್ಲಿ ಅವರಿಗೆ ಹೆಚ್ಚು ಬಾಧಿಸಿರುವ ಸಮಸ್ಯೆಗಳ ಬಗ್ಗೆ ಸ್ಪಂದಿಸಿರುವುದನ್ನು ಎತ್ತಿತೋರಿಸಿದೆ.

ಎಂದಿನಂತೆ, ಬಿಜೆಪಿಯು ಹಿಂದುತ್ವ ಕಾರ್ಯಸೂಚಿಯನ್ನು ಬಳಸಲು ಪ್ರಯತ್ನ ಮಾಡಿತು – ಸಂವಿಧಾನದ 370ನೇ ವಿಧಿ, ರಾಮ ಮಂದಿರ, ನುಸುಳುಕೋರರನ್ನು ಹಿಂದಕ್ಕೆ ಕಳಿಸುವುದು ಮುಂತಾದ ವಿಷಯಗಳನ್ನು ಪ್ರಸ್ತಾಪ ಮಾಡಿತು. 'ಜೈ ಶ್ರೀರಾಮ್' ಘೋಷಣೆಗೆ ವಿರೋಧ ಮಾಡುವ ಜನರಿದ್ದಾರೆ ಎಂದು ನರೇಂದ್ರ ಮೋದಿ ಘೋಷಿಸಿದರು. ಬಿಜೆಪಿ ತನ್ನ ಸ್ಥಿತಿಯನ್ನು ಉತ್ತಮಗೊಳಿಸಿಕೊಂಡಿರುವುದು ಮತ್ತು 74 ಸ್ಥಾನಗಳನ್ನು ಪಡೆದಿರುವುದು, ಕೋಮುವಾದಿ ರಾಜಕೀಯದ ಜತೆ ಜಾತಿ ಸಮೀಕರಣಗಳ ಅಪಾಯಕಾರಿ ಪ್ರವೃತ್ತಿ ಇನ್ನೂ ಕೂಡ ಶಕ್ತಿಯುತ ಪ್ರಭಾವ ಬೀರುತ್ತಿದೆ ಎಂಬ ಸಂದೇಶ ನೀಡಿದೆ.

ಮುಂದಿನ ದಿನಗಳಿಗೆ ಸರಿಯಾದ ಪಾಠಗಳನ್ನು ಕಲಿಯಲು ಚುನಾವಣಾ ಫಲಿತಾಂಶವನ್ನು ಇನ್ನೂ ಆಳವಾಗಿ ವಿಮರ್ಶಿಸಬೇಕಾದ ಅಗತ್ಯವಿರುವಾಗಲೇ, ಹಿಂದುತ್ವ–ಸರ್ವಾಧಿಕಾರಿ ಅಪಾಯದ ಎದುರು ನಡೆಸಬೇಕಾದ ಹೋರಾಟದಲ್ಲಿ ವಿರೋಧ ಪಕ್ಷಗಳ ವ್ಯಾಪಕ ಐಕ್ಯತೆಯನ್ನು ಸಾಧಿಸಬೇಕಾಗಿರುವುದು ಅತ್ಯಂತ ಮುಖ್ಯವಾದದ್ದು. ಮಹಾಗಟಬಂಧನವು ನಡೆಸಿದ ಹೋರಾಟವು ಇದನ್ನು ಸಾಬೀತುಪಡಿಸಿದೆ.

ಇಂತಹ ಚುನಾವಣಾ ಮೈತ್ರಿಗಳಲ್ಲಿ ಭಾಗೀದಾರರು ತಮ್ಮ ಶಕ್ತಿ ಮತ್ತು ಪ್ರಭಾವಗಳಿಗೆ ಮೀರಿ ಸ್ಥಾನಗಳನ್ನು ಕೇಳಬಾರದು ಮತ್ತು ಅದಕ್ಕಾಗಿ ಕಾದಾಡಬಾರದು ಎಂಬುದು ಕೂಡ ಮುಖ್ಯವಾದ ಸಂಗತಿ. 70 ಸ್ಥಾನಗಳಿಗಾಗಿ ಕಾಂಗ್ರೆಸ್ ಕಾದಾಡಿದ್ದು ಈ ಮೈತ್ರಿಯ ದೌರ್ಬಲ್ಯ ಎಂಬುದು ಸಾಬೀತಾಯಿತು. ಅದು ಕೇವಲ 19 ಸ್ಥಾನಗಳನ್ನು ಮಾತ್ರ ಗಳಿಸಿತು.

ಹೀಗೆ ಬಿಹಾರ ಚುನಾವಣೆಯು ಕೆಲವು ಸಕಾರಾತ್ಮಕ ಅಂಶಗಳನ್ನು ಮುನ್ನೆಲೆಗೆ ತಂದಿತು: ಒಂದು ಪರಿಣಾಮಕಾರಿ ಚುನಾವಣಾ ಮೈತ್ರಿಕೂಟ ರಚಿಸುವುದು; ಜನರ ನಿಜವಾದ ಸಮಸ್ಯೆಗಳನ್ನು ತೆಗೆದುಕೊಳ್ಳುವುದು, ಜನಪರ ನೀತಿಗಳನ್ನು ಜನರ ಮುಂದಿಡುವುದು, ಮತ್ತು ಯುವಜನರನ್ನು ಹುರಿದುಂಬಿಸಿ ಆಕರ್ಷಿಸುವ ಸಾಮರ್ಥ್ಯ ಪಡೆಯುವುದು. ಇವುಗಳನ್ನು ಮುಂದಿನ ದಿನಗಳಲ್ಲಿ ಇಡೀ ದೇಶಕ್ಕೆ ಕೊಂಡೊಯ್ಯಲು ಸಾಧ್ಯವಾಗಬೇಕು.

ಅನು: ಟಿ. ಸುರೇಂದ್ರ ರಾವ್

ಎಲ್‌ಜೆಪಿ ಮತ್ತು ಎಐಎಂಐಎಂ ಹಾಗೂ ಕಾಂಗ್ರೆಸ್

ಜನರ ವಿಶ್ವಾಸ ಕಳಕೊಂಡ ಬಿಜೆಪಿ–ಜೆಡಿ(ಯು) ಮೈತ್ರಿಕೂಟ ಕೊನೆಗೂ ಮತ್ತೆ ಅಧಿಕಾರ ಪಡೆಯುವಲ್ಲಿ ಚಿರಾಗ್ ಪಾಸ್ವಾನ್ ನೇತೃತ್ವದ ಎಲ್‌ಜೆಪಿ ಮತ್ತು ಒವೈಸಿಯವರ ನೇತೃತ್ವದ ಎಐಎಂಐಎಂ ಪಾತ್ರ ಬಗ್ಗೆ ಬಹಳಷ್ಟು ವಿಶ್ಲೇಷಣೆಗಳು ಬಂದಿವೆ.

ಬಿಜೆಪಿಯನ್ನು ಬಲಪಡಿಸುವುದೇ ತನ್ನ ಗುರಿಯಾಗಿತ್ತು, ಅದನ್ನು ಸಾಧಿಸಿದ್ದೇನೆ ಎಂದು ಕೇವಲ 333 ಮತಗಳ ಅಂತರದಿಂದ ಒಂದು ಸೀಟನ್ನು ಗೆದ್ದಿರುವ; ಆದರೂ ಒಟ್ಟಾರೆಯಾಗಿ 5.66ಶೇ. ಮತ ಪಡೆದಿರುವ ಎಲ್‌ಜೆಪಿ ಮುಖಂಡರು ನೇರವಾಗಿಯೇ ಹೇಳಿಕೊಂಡಿದ್ದಾರೆ. ಎಲ್ಲ ಜೆಡಿ(ಯು) ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಿದ್ದರಿಂದ ಈ ಮತಗಳಿಕೆ ಎಂಬುದು ಸ್ಪಷ್ಟ.

ನಿತಿಶ್ ಕುಮಾರ್ ಅವರನ್ನು ಈ ಬಗ್ಗೆ ಪತ್ರಕರ್ತರು ಕೇಳಿದಾಗ "ಬಿಜೆಪಿ ಮಾತ್ರವೇ ಎಲ್‌ಜೆಪಿ ಪಾತ್ರದ ಬಗ್ಗೆ ನೋಡಲು ಸಾಧ್ಯ" ಎಂದು ಉತ್ತರಿಸಿ ತಪ್ಪಿಸಿಕೊಂಡರು.

ತದ್ವಿರುದ್ಧವಾಗಿ ಒವೈಸಿಯವರ ಪಕ್ಷ ಕೇವಲ 1.24 ಶೇ. ಮತ ಪಡೆದು 5 ಸೀಟುಗಳನ್ನು ಗೆದ್ದಿರುವುದು ಎನ್‌ಡಿಎ ಗೆಲುವಿನಲ್ಲಿ ಅದರ ಪಾತ್ರ ಏನು ಎಂಬುದರತ್ತ ಬೊಟ್ಟುಮಾಡುತ್ತದೆ. ಸ್ವತಃ ಪ್ರಧಾನಿಗಳ ನೇತೃತ್ವದಲ್ಲಿ ನಡೆದ ಕೋಮುಧ್ರುವೀಕರಣದ ಪ್ರಯತ್ನಕ್ಕೆ ಈ ಪಕ್ಷದ ಕೊಡುಗೆ ಎಷ್ಟು ಎಂಬುದರ ವಿಶ್ಲೇಷಣೆ ನಡೆಯಬೇಕಾಗಿದೆ.

ಇನ್ನು ಮಹಾಗಟ್ಬಂಧನ್‌ನಲ್ಲಿ 70 ಸ್ಥಾನಗಳನ್ನು ಕಾದಾಡಿ ಪಡೆದ ಕಾಂಗ್ರೆಸ್ ಪಕ್ಷ ಕೇವಲ 19ನ್ನು ಮಾತ್ರ ಗೆಲ್ಲಲು ಸಾಧ್ಯವಾಗಿರುವುದು ಮಹಾಗಟ್ಬಂಧನ್ ಬಹುಮತ ಪಡೆಯದಂತೆ ತಡೆಯಲು ಕಾರಣವಾಗಿದೆ ಎಂದು ಆ ಪಕ್ಷದ ಹಿರಿಯ ಮುಖಂಡ ತಾರೀಕ್ ಅನ್ವರ್ ಅವರೇ ಒಪ್ಪಿಕೊಂಡಿದ್ದಾರೆ ಎಂದು ವರದಿಯಾಗಿದೆ.



ವೋಟ್ ಕಟ್ಟರ್ ಮತ್ತು ಸೀಟ್ ಕಟ್ಟರ್: ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

ಪಕ್ಷಗಳ ಬಲಾಬಲ

ಪಕ್ಷ	ಸೀಟುಗಳು	ಮತ %
ಬಿಜೆಪಿ	74	19.46
ಜೆಡಿ(ಯು)	43	15.90
ಇತರ 2 ಪಕ್ಷಗಳು	8	1.90
ಎನ್ ಡಿ ಎ	**125**	**37.26**
ಆರ್‌ಜೆಡಿ	75	23.11
ಕಾಂಗ್ರೆಸ್	19	9.48
ಎಡಪಕ್ಷಗಳು	16	4.63
ಮಹಾಗಟ್ಬಂಧನ್	**110**	**37.23**
ಎಐಎಂಐಎಂ	5	1.24
ಎಲ್‌ಜೆಪಿ	1	5.66
ಬಿಎಸ್‌ಪಿ	1	1.49
ಪಕ್ಷೇತರ	1	

ಎನ್‌ಡಿಎ ಮೋಸದಿಂದ ಗೆದ್ದಿದೆ –ತೇಜಸ್ವಿ ಯಾದವ್

ನವಂಬರ್ 10 ರಂದು ದಿನವಿಡೀ ಎರಡು ಮೈತ್ರಿಕೂಟಗಳ ನಡುವೆ ಕಾಣ ಬಂದ ಪೈಪೋಟಿ ಕೊನೆಗೂ ಎನ್‌ಡಿಎ ಪರವಾಯಿತು. ಆದರೆ ಇದು ಕೊನೆಯ ಹಂತದ ಮತ ಎಣಿಕೆಯ ಬಗ್ಗೆ ಹಲವು ಪ್ರಶ್ನೆಗಳು ಎತ್ತಿದೆ. ಕನಿಷ್ಟ 10 ಸೀಟುಗಳಲ್ಲಿ ಮತಗಳ ಅಂತರ ತೀರ ಕಡಿಮೆಯಿದ್ದಲ್ಲಿ ಅವನ್ನು ಎನ್‌ಡಿಎ ಪರವಾಗಿ 'ಮ್ಯಾನೇಜ್' ಮಾಡಲಾಯಿತು ಎಂಬ ಆಪಾದನೆಗಳಿವೆ. ಮಹಾಗಟ್‌ಬಂಧನ್ ಪಕ್ಷಗಳು ಈ ಕುರಿತು ಎತ್ತಿರುವ ಆಕ್ಷೇಪಗಳನ್ನು ಚುನಾವಣಾ ಆಯೋಗ ತಳ್ಳಿ ಹಾಕಿದೆ.

ಆರ್‌ಜೆಡಿ ಮತ್ತು ಮಹಾಗಟ್ಬಂಧನ್ ಮುಖ್ಯಸ್ಥರಾದ ತೇಜಸ್ವಿ ಯಾದವ್ ನವಂಬರ್ 12ರಂದು ಪತ್ರಿಕಾಗೋಷ್ಠಿಯಲ್ಲಿ ಮಾತಾಡುತ್ತ ಎನ್‌ಡಿಎ ಮೋಸದಿಂದ ಗೆದ್ದಿದೆ ಎಂದಿದ್ದಾರೆ. ತಮ್ಮ ಮೈತ್ರಿಕೂಟದ ಅಭ್ಯರ್ಥಿಗಳು 200ಕ್ಕಿಂತ ಕಡಿಮೆ ಮತಗಳಲ್ಲಿ ಸೋತಿರುವ 20 ಸೀಟುಗಳ ಅಂಚೆ ಮತಪತ್ರಗಳ ಎಣಿಕೆಯ ವೀಡಿಯೋಗಳನ್ನು ಮತ್ತು ದಸ್ತಾವೇಜುಗಳನ್ನು ಬಿಡುಗಡೆ ಮಾಡಬೇಕು ಎಂದು ತೇಜಸ್ವಿ ಚುನಾವಣಾ ಆಯೋಗವನ್ನು ಕೇಳಿದ್ದಾರೆ.

"ಮತ ಎಣಿಕೆಯಲ್ಲಿ ಅನಿಯಮಿತತೆಗಳಿಂದಾಗಿ ನಾವು 20 ಸೀಟುಗಳನ್ನು ಕಳಕೊಂಡಿದ್ದೇವೆ. ಈ ಬಗ್ಗೆ ನಮ್ಮ ಅಭ್ಯರ್ಥಿಗಳು ಎತ್ತಿದ ಪ್ರಶ್ನೆಗಳನ್ನು ಚುನಾವಣಾ ಆಯೋಗ ಕಿವಿಗೆ ಹಾಕಿಕೊಳ್ಳಲಿಲ್ಲ... ನಾವು 130 ಸ್ಥನಗಳಲ್ಲಿ ಗೆದ್ದು ಜನಾದೇಶ ಪಡೆದಿದ್ದೇವೆ, ಆದರೆ ಚುನಾವಣಾ ಆಯೋಗ ಫಲಿತಾಂಶಗಳನ್ನು ಎನ್‌ಡಿಎ ಪರವಾಗಿ ಘೋಷಿಸಿದೆ" ಎಂದು ತೇಜಸ್ವಿ ಯಾದವ್ ಹೇಳಿದ್ದಾರೆ.

ಅಂಚೆ ಮತಪತ್ರಗಳನ್ನು ರಾತ್ರಿಯಲ್ಲಿ ಎಣಿಸಿದ್ದೇಕೆ, ಈ ಕುರಿತ ನಿಯಮಗಳನ್ನು ಪಾಲಿಸಲಾಗಿದೆಯೇ ಎಂಬ ಸರಳ ಪ್ರಶ್ನೆಗೆ ಆಯೋಗ ಉತ್ತರ ಕೊಡಲಿ ಎಂದು ಅವರು ಸವಾಲು ಹಾಕಿದರು.

ಸಿಪಿಐ(ಎಂ) ಅಭ್ಯರ್ಥಿಗಳು ಪಡೆದ ಮತಗಳು



ಡಾ. ಸತ್ಯೇಂದ್ರ ಯಾದವ್



ಅಜಯ ಕುಮಾರ್

ಚುನಾವಣಾ ಕ್ಷೇತ್ರ	ಅಭ್ಯರ್ಥಿ	ಪಡೆದ ಮತಗಳು	ಒಟ್ಟು ಮತಗಳ %
ಮಾಂಝಿ	ಡಾ. ಸತ್ಯೇಂದ್ರ ಯಾದವ್	59324	37.56
ಬಿಭೂತಿಪುರ	ಅಜಯ ಕುಮಾರ್	73822	45.00
ಮಟಿಹಾನಿ	ರಾಜೇಂದ್ರ ಪ್ರಸಾದ್ ಸಿಂಗ್	60599	29.27
ಪಿಪ್ರ	ರಾಜ್ ಮಂಗಲ್ ಪ್ರಸಾದ್	80410	40.10

ಮಾಂಝಿಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಸಮೀಪದ ಪ್ರತಿಸ್ಪರ್ಧಿಗಿಂತ 25386 ಮತಗಳ ಅಂತರದಿಂದ ಗೆದ್ದಿದ್ದಾರೆ. ಬಿಭೂತಿಪುರದಲ್ಲಿ 40,456 ಮತಗಳ ಅಂತದಿಂದ ಗೆದ್ದಿದ್ದಾರೆ. ಮಟಿಹಾನಿಯಲ್ಲಿ ಗೆದ್ದ ಅಭ್ಯರ್ಥಿ ಸಿಪಿಐ(ಎಂ) ಅಭ್ಯರ್ಥಿಗಿಂತ ಕೇವಲ 765 ಹೆಚ್ಚು ಮತಗಳನ್ನು ಪಡೆದರು. ಪಿಪ್ರದಲ್ಲಿ ಗೆದ್ದ ಅಭ್ಯರ್ಥಿ 8177 ಹೆಚ್ಚು ಮತಗಳನ್ನು ಪಡೆದರು.



ಮತ್ತೆ ಗುಲಾಮಗಿರಿಗೆ ತಳ್ಳುವ ಧೋರಣೆಗಳಿಗೆ ಕಾರ್ಮಿಕ ವರ್ಗದ ಮಹಾ ಸವಾಲು

ನವಂಬರ್ 26, 2020: ಸಾರ್ವತ್ರಿಕ ಮುಷ್ಕರ

ಭಾರತದ ಕಾರ್ಮಿಕ ವರ್ಗ ಇನ್ನೊಂದು ಬೃಹತ್ ಹೋರಾಟಕ್ಕೆ ಸಿದ್ಧತೆ ನಡೆಸಿದೆ. ಇದೇ ನವಂಬರ್ 26 ರಂದು ಇನ್ನೊಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಯಲಿದೆ. ಇದು ನವ-ಉದಾರವಾದಿ ಧೋರಣೆಗಳ ವಿರುದ್ಧ 20ನೇ ಐಕ್ಯ ಮುಷ್ಕರ ಕಾರ್ಯಾಚರಣೆ-ಕೊವಿಡ್ ಕಾಲದ ನಿರ್ಬಂಧಗಳ ಮರೆಯಲ್ಲಿ ನವ-ಉದಾರವಾದಿ ಧೋರಣೆಗಳನ್ನು ಅತ್ಯಂತ ಆಕ್ರಾಮಕವಾಗಿ ಜಾರಿಗೊಳಸಲು ಕಾರ್ಮಿಕರ ಹಕ್ಕುಗಳ ಮೇಲೆ ನೇರ ದಾಳಿ ನಡೆಸಿರುವ ದುಷ್ಟ, ಸಂವಿಧಾನ-ವಿರೋಧಿ ವರ್ತನೆಯ ವಿರುದ್ಧ 'ಸಂವಿಧಾನ ದಿನ'ದಂದು ದೇಶದ ಕೋಟ್ಯಂತರ ಕಾರ್ಮಿಕರು ಈ ಬೃಹತ್ ಕಾರ್ಯಾಚರಣೆಯಲ್ಲಿ ಭಾಗವಹಿಸಲಿದ್ದಾರೆ. ಏಕೆ ಈ ಐಕ್ಯ ಹೋರಾಟ, ಕಾರ್ಮಿಕರು ಮುಂದಿಟ್ಟಿರುವ ಬೇಡಿಕೆಗಳೇನು? ಈ ಬಗ್ಗೆ ಒಂದು ನೋಟವನ್ನು ಕಾರ್ಯಾಚರಣೆಗೆ ಕರೆ ನೀಡಿರುವ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳಲ್ಲಿ ಒಂದು ಪ್ರಮುಖ ಸಂಘಟನೆ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಈ ಲೇಖನದಲ್ಲಿ ಕೊಟ್ಟಿದ್ದಾರೆ.

ಕೊರೋನಾ ಸಾಂಕ್ರಾಮಿಕ ರೋಗದಿಂದ ದೇಶದಲ್ಲಿ ಇದ್ದಕ್ಕಿದ್ದಂತೆ ಲಾಕ್‌ಡೌನ್ ಹೇರಲಾಯಿತು. ಆಗ ಮೊದಲೇ ಸಂಕಷ್ಟದಲ್ಲಿದ್ದ ಕಾರ್ಮಿಕರ ಹಿತವನ್ನು ಕಾಪಾಡುವ ಬದಲಿಗೆ ಭಾರತದ ಕೇಂದ್ರ ಸರಕಾರ ಮತ್ತಷ್ಟು ಸಂಕಷ್ಟಗಳನ್ನೇ ಹೇರಿತು, ಮಾತ್ರವಲ್ಲ ದೇಶದ ಆರ್ಥಿಕ ಸಾರ್ವಭೌಮತೆಗೆ ಧಕ್ಕೆ ತರುವ ಮತ್ತು ಅನ್ನದಾತ ರೈತ, ಸಂಪತ್ತನ್ನು ಸೃಷ್ಟಿಸುವ ಶ್ರಮಿಕನನ್ನು ಪೂರ್ಣ ಗುಲಾಮಗಿರಿಗೆ ತಳ್ಳುವ ಕ್ರಮಗಳನ್ನು ತರುತ್ತಿದೆ. ಪ್ರಭುತ್ವದ ಈ ಸರ್ವಾಧಿಕಾರಿ ವರ್ತನೆಗೆ ಎಲ್ಲ ದೇಶ ಪ್ರೇಮಿ ಕಾರ್ಮಿಕ ಸಂಘಟನೆಗಳು, ಅಂದರೆ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು, ಎಲ್‌ಐಸಿ, ಬ್ಯಾಂಕ್, ರಕ್ಷಣಾ ವಲಯ, ರೈಲ್ವೆ, ಬಿಎಸ್‌ಎನ್‌ಎಲ್, ರಾಜ್ಯ ಮತ್ತು ಕೇಂದ್ರ ಸೇವೆ ಮುಂತಾದ ಎಲ್ಲಾ ರಂಗಗಳಲ್ಲಿನ ಅಖಿಲ ಭಾರತ ಸಂಘಟನೆಗಳು, ಅಸಂಘಟಿತ ಕ್ಷೇತ್ರದ ಕಾರ್ಮಿಕರಾದ ಕಟ್ಟಡ,ಹಮಾಲಿ, ಬೀಡಿ, ತೋಟಗಾರಿಕೆ, ಗುತ್ತಿಗೆ ಕಾರ್ಮಿಕರು, ಪಂಚಾಯ್ತಿ ನೌಕರರು, ಬೀದಿ ಬದಿ ವ್ಯಾಪಾರಸ್ಥರು, ಮನೆಕೆಲಸಗಾರರು, ಆಟೋ, ಟ್ಯಾಕ್ಸಿ, ಸಾರಿಗೆಯಲ್ಲಿ ಕಾರ್ಯನಿರ್ವಹಿಸುವ ನೌಕರರು, ಅಂಗನವಾಡಿ, ಬಿಸಿಯೂಟ, ಆಶಾ, ನೌಕರರ ಸಂಘಟನೆಗಳು ಭಾರತದ ಸಂವಿಧಾನದ ಸಂಸ್ಥಾಪನ ದಿನವಾದ ನವೆಂಬರ್ 26 ರಂದು ಸಂವಿಧಾನಕ ಹಕ್ಕುಗಳಿಗಾಗಿ ಪ್ರತಿರೋಧವನ್ನು ವ್ಯಕ್ತ ಮಾಡುತ್ತಿವೆ. ಇದಕ್ಕೆ ವಿದ್ಯಾರ್ಥಿ, ಯುವಜನ, ಮಹಿಳಾ, ರೈತ ಸಂಘಟನೆಗಳು ಬೆಂಬಲ ನೀಡಿವೆ.

ಈ ಮುಷ್ಕರದ ಬೇಡಿಕೆಗಳೇನು?

*** ಕಾರ್ಮಿಕರನ್ನು ಗುಲಾಮರನ್ನಾಗಿಸುವ ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು**

ವ್ಯಾಪಾರವನ್ನು ಸುಲಭವಾಗಿಸಬೇಕೆಂಬ ವಿಶ್ವ ಬ್ಯಾಂಕ್ ಪ್ರೇರಿತ ಗುರಿಸಾಧನೆಗೆ '73 ವರ್ಷಗಳಲ್ಲಿ ಮೊದಲ ಬಾರಿಗೆ ಕಾರ್ಮಿಕ ಕಾನೂನುಗಳಲ್ಲಿ ಸುಧಾರಣೆ'ಯ ಹೆಸರಿನಲ್ಲಿ ಬಂಡವಾಳಶಾಹಿಗಳ ಪರವಾದ ಬದಲಾವಣೆಗಳನ್ನು ತರಲಾಗಿದೆ. 4 ಕಾನೂನುಗಳನ್ನು ಸೇರಿಸಿ ವೇತನ ಸಂಹಿತೆ, 9 ಕಾನೂನುಗಳನ್ನು ಸೇರಿಸಿ ಸಾಮಾಜಿಕ ಸುರಕ್ಷಾ ಸಂಹಿತೆ, 13 ಕಾನೂನುಗಳನ್ನು ಸೇರಿಸಿ ಉದ್ಯೋಗ, ಸುರಕ್ಷೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಸಂಹಿತೆ, 3 ಕಾನೂನುಗಳನ್ನು ಸೇರಿಸಿ ಔದ್ಯೋಗಿಕ ಸಂಬಂಧ ಸಂಹಿತೆಗಳನ್ನು ಜಾರಿಗೊಳಿಸಿವೆ.

ಔದ್ಯೋಗಿಕ ಸಂಹಿತೆಯ ಪ್ರಕಾರ, 18 ಸಾವಿರಕ್ಕಿಂತ ಹೆಚ್ಚಿನ ವೇತನದಾರರು ಇನ್ನು ಮುಂದೆ ಮೇಲ್ವಿಚಾರಕರು; ಎಲ್ಲಾ ಖಾಯಂ ಕೆಲಸಗಳಿಗೂ ನಿಶ್ಚಿತ ಅವಧಿಯ ಕಾರ್ಮಿಕರ ನೇಮಕ; ತಾಂತ್ರಿಕ ಬೆಳವಣಿಗೆಯಿಂದ ಕೆಲಸಗಾರರ ಉತ್ಪಾದನಾ ಸಾಮರ್ಥ್ಯ ಹೆಚ್ಚಿದ್ದರೂ ಕೂಡಾ ಕಾರ್ಖಾನೆಗಳನ್ನು ಮುಚ್ಚಲು ಇದ್ದ 100ರ ಮಿತಿಯನ್ನು 300ಕ್ಕೇರಿಸಿದೆ. ಅಂದರೆ, 300ರೊಳಗಿನ ಸಂಖ್ಯೆಯಲ್ಲಿ ಕಾರ್ಮಿಕರಿರುವ ಕಾರ್ಖಾನೆಗಳನ್ನು ಮುಚ್ಚಲು ಸರ್ಕಾರದ ಅನುಮತಿ ಈಗ ಅನಗತ್ಯ; ಇನ್ನು ಮುಂದೆ ಸಂಘ ರಚಿಸಲು ಒಟ್ಟು ಸದಸ್ಯರ 10% ಸದಸ್ಯತ್ವ ಕಡ್ಡಾಯ, ಒಂದಕ್ಕಿಂತ ಹೆಚ್ಚು ಇರುವ ಸಂಘಟನೆಗಳಿರುವ ಕಾರ್ಖಾನೆಗಳಲ್ಲಿ 51 % ಸದಸ್ಯತ್ವ ಇರುವ ಸಂಘಟನೆಗೆ ಮಾನ್ಯತೆ ; ಇನ್ನು ಮುಂದೆ ಸಂಧಾನ ವಿಫಲವಾದರೆ ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗೆ ವಹಿಸಲು ಸರ್ಕಾರಕ್ಕೆ ಯಾವುದೇ ಬಾಧ್ಯತೆ ಇಲ್ಲ; ಕಾರ್ಮಿಕ ನ್ಯಾಯಾಲಯಗಳನ್ನು ನಿಷಿದ್ಧಗೊಳಿಸಲಾಗಿದೆ; ಯಾವುದೇ ವಿಚಾರ ಟ್ರಿಬ್ಯುನಲ್‌ನಲ್ಲಿ ಬಾಕಿಯಿದ್ದರೆ ಆ ಅವಧಿ ಮಾತ್ರವಲ್ಲ ಅದು ಮುಕ್ತಾಯಗೊಂಡ 60 ದಿನಗಳವರೆಗೂ ಮುಷ್ಕರ ನಡೆಸುವಂತಿಲ್ಲ; "ಅಕ್ರಮ" ಎಂದು ಕರೆಯುವ ಮುಷ್ಕರಗಳಲ್ಲಿ ಭಾಗವಹಿಸಿದವರಿಗೆ ಮತ್ತು ಅದಕ್ಕೆ ಪ್ರೇರಣೆ ನೀಡಿದವರಿಗೆ ಅತೀ ದೊಡ್ಡ ಮೊತ್ತದ ದಂಡ ಮತ್ತು ಜೈಲುವಾಸ ವಿಧಿಸಬಹುದು; ಕಾರ್ಮಿಕರು ಮುಷ್ಕರದಲ್ಲಿದ್ದರೆ ಯಾವ ಮುನ್ಸೂಚನೆ ಇಲ್ಲದೇ ಬೀಗಮುದ್ರೆ ಮಾಡಿ ಅಧಿಕಾರಿಗಳಿಗೆ ತಿಳಿಸಿದರೆ ಸಾಕು.

ಉದ್ಯೋಗ – ಸುರಕ್ಷೆ – ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಯ ಸಂಹಿತೆಯ ಪ್ರಕಾರ ಕಾರ್ಮಿಕರ ಸಂಖ್ಯೆಯನ್ನು ವಿದ್ಯುತ್ ಶಕ್ತಿ ರಹಿತ ಉದ್ದಿಮೆಗಳಲ್ಲಿ 10 ರಿಂದ 20ಕ್ಕೆ, ವಿದ್ಯುತ್ ಸಹಿತವಾಗಿದ್ದಲ್ಲಿ 20 ರಿಂದ 40ಕ್ಕೆ ದ್ವಿಗುಣಗೊಳಿಸಿರುವುದರಿಂದ ಇವು ಈ ಸಣ್ಣ ಮತ್ತು ಮಧ್ಯಮ ಗಾತ್ರದ ಕಾರ್ಮಿಕರ ಕಾಯ್ದೆಯಡಿ ಬರುವುದಿಲ್ಲ. 20 ಜನ ಗುತ್ತಿಗೆ ಕಾರ್ಮಿಕರ ಸಂಖ್ಯೆಯನ್ನು 50ಕ್ಕೇರಿಸಿದೆ. 50ರೊಳಗೆ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರ ಕಾರ್ಮಿಕ ಇಲಾಖೆಯಲ್ಲಿ ಪರವಾನಿಗೆ ಪಡೆಯಬೇಕಿಲ್ಲ. ಮೂಲ ಕೆಲಸಗಳಿಗೂ ನೇಮಿಸಬಹುದು, ಸಮಾನ ವೇತನ ನೀಡಬೇಕಿಲ್ಲ. ಗುತ್ತಿಗೆ ಕಾರ್ಮಿಕ ದೂರುಗಳ ನಿವಾರಣೆಗೆ ಇದ್ದ ತ್ರಿಪಕ್ಷೀಯ ಕೇಂದ್ರ ಸಲಹಾ ಗುತ್ತಿಗೆ ಕೆಲಸಗಾರರ ಮಂಡಳಿಯನ್ನು ಈ ಸಂಹಿತೆ ರದ್ದುಗೊಳಿಸಿದೆ. ಓವರ್ ಟೈಮ್‌ನ ಮಿತಿಯನ್ನು ನಿರ್ದಿಷ್ಟಗೊಳಿಸಿಲ್ಲ, ಮತ್ತು ಕೆಲಸಗಾರರ ಒಪ್ಪಿಗೆ ಪಡೆಯಬೇಕಿಲ್ಲ. ಈ ಸಂಹಿತೆಯ ಯಾವುದೇ ವ್ಯಾಜ್ಯವನ್ನು ಸಿವಿಲ್ ನ್ಯಾಯಾಲಯಗಳ ಬದಲಿಗೆ ಆಡಳಿತಾತ್ಮಕ ಅರ್ಜಿ(ಅಪೆಲೇಟ್) ಪ್ರಾಧಿಕಾರಕ್ಕೆ ಕೊಡಬೇಕು. ವ್ಯಾಜ್ಯಗಳ ಇತ್ಯರ್ಥಕ್ಕೆ ಯಾವುದೇ ನ್ಯಾಯಾಂಗ ಪರಿಹಾರ ನೀಡುವುದಿಲ್ಲ ಮಹಿಳೆಯರನ್ನು ಎಲ್ಲಾ ಸಂಸ್ಥೆಗಳಿಗೂ, ಎಲ್ಲಾ ರೀತಿಯ ಕೆಲಸಗಳಿಗೂ, ರಾತ್ರಿ ಪಾಳಿಗೂ ನೇಮಿಸಿಕೊಳ್ಳಲು ಅವಕಾಶ

ಸಾಮಾಜಿಕ ಸುರಕ್ಷಾ ಸಂಹಿತೆಯ ಪ್ರಕಾರ ಮಾಲೀಕರು ಮತ್ತು ಕಾರ್ಮಿಕರು ಇಚ್ಛಿಸಿದರೆ ಭವಿಷ್ಯ ನಿಧಿ ಮತ್ತು ಇಎಸ್‌ಐ ಯಿಂದ ಹೊರಬರಬಹುದು. ಕೊಡುಗೆ ಪ್ರಮಾಣ ಕಡಿಮೆ, ಸ್ವರೂಪ ಬದಲಿಸುವ ಅಧಿಕಾರ ಆ ಸಂಸ್ಥೆಗಳಿಗೆ ನೀಡಿದೆ;

ಬೀಡಿ, ಮ್ಯಾಂಗನೀಸ್, ಕಬ್ಬಿಣ, ಕ್ರೋಮ್ ಅದಿರು, ಮೈಕಾ ಗಣಿ ಕೆಲಸಗಾರರ ಕ್ಷೇಮಾಭಿವೃದ್ಧಿ ಸೆಸ್‌ಗಳನ್ನು ರದ್ದುಗೊಳಿಸಲಾಗಿದೆ. ಆದರೆ ಇವರಿಗೆ ಬೇರೆ ನಿರ್ದಿಷ್ಟ ಯೋಜನೆಗಳಲ್ಲಿ ಕಟ್ಟಡ ಕಾರ್ಮಿಕ ಸೌಲಭ್ಯಗಳ ಜಾರಿಯ ಬಗ್ಗೆ ನಿರ್ದಿಷ್ಟತೆ ಇಲ್ಲ;

ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸಂಬಂಧಿಸಿ ಸಾಮಾಜಿಕ ಸುರಕ್ಷತೆಯ ಮಾತಿದೆ, ಆದರೆ ಹಣಕಾಸು ನೀಡಿಕೆಯ ಬಗ್ಗೆ ಸ್ಪಷ್ಟ ಕ್ರಮ ನಿಗದಿ ಮಾಡಿಲ್ಲ.

ವೇತನ ಸಂಹಿತೆಯಲ್ಲಿ ವೈಜ್ಞಾನಿಕ ಲೆಕ್ಕಾಚಾರ, ಐಎಲ್‌ಓ ಸಮಾವೇಶಗಳ ಮತ್ತು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿರುವ ಸೂತ್ರಗಳ ಆಧಾರದಲ್ಲಿ ಕನಿಷ್ಠ ವೇತನವನ್ನು ನಿಗದಿಗೊಳಿಸುವ ಬದಲಿಗೆ ಬಿಜೆಪಿ ಸರ್ಕಾರ ತಜ್ಞರ ಸಮಿತಿಯ ಶಿಫಾರಸ್ಸಿನಂತೆ ತಳ ಮಟ್ಟದ ಕನಿಷ್ಠ ವೇತನ ನಿರ್ಧರಿಸಲು ಹೊರಟಿದೆ. ನೌಕರರು ಒಂದು ದಿನ ಮುಷ್ಕರ ಮಾಡಿದರೆ 8 ದಿನದ ಸಂಬಳ ಕಡಿತ, ಬೋನಸ್ ಮಾತುಕತೆಗೆ ಅಗತ್ಯವಿರುವ ಬ್ಯಾಲನ್ಸ್ ಶೀಟ್ ಕೊಡಬೇಕಾಗಿಲ್ಲ. ಕಾರ್ಮಿಕ ಅಧಿಕಾರಿಗಳ ಕಾರ್ಯ ವ್ಯಾಪ್ತಿ ಮೊಟಕುಗೊಳಿಸಿ ಇನ್ಸ್‌ಪೆಕ್ಟರ್‌ಗಳನ್ನು ಇನ್ಸ್‌ಪೆಕ್ಟರ್ ಕಮ್ ಫೆಸಿಲಿಟೇಟರ್‌ಗಳೆಂದು ಗುರ್ತಿಸಲಾಗಿದೆ. ಇವರು ಸರ್ಕಾರದ ಪೂರ್ವಾನುಮತಿಯಿಲ್ಲದೇ ತಪಾಸಣೆ ಮಾಡುವಂತಿಲ್ಲ.

ಒಟ್ಟಿನಲ್ಲಿ, ಈ ಸಂಹಿತೆಗಳು ಕೆಲಸಗಾರರನ್ನು ತೀವ್ರವಾಗಿ ಶೋಷಿಸಲು ಮಾಲೀಕರಿಗೆ ಅತೀ ಹೆಚ್ಚಿನ ಸಾಮರ್ಥ್ಯವನ್ನು ಕೊಡುತ್ತವೆ. ಆಳಗೊಂಡಿರುವ ಬಂಡವಾಳಶಾಹಿ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಆಳುವ ವರ್ಗಕ್ಕೆ ಅನಿರ್ಬಂಧಿತ ಅಧಿಕಾರ ನೀಡಲು ಅದಕ್ಕೆ ನಿರಂಕುಶ ಅಧಿಕಾರ ನೀಡಲು ನವ ಉದಾರೀಕರಣ ನೀತಿಗಳಿಗೆ ಅನುಗುಣವಾಗಿ ಈ ಸಂಹಿತೆಗಳನ್ನು ವಿನ್ಯಾಸಗೊಳಿಸಲಾಗಿದೆ.

*** ರೈತ ವಿರೋಧಿ ಕಾನೂನುಗಳನ್ನು ವಾಪಸ್ಸು ಪಡೆಯಬೇಕು**

ಎಲ್ಲಾ ಸಂಸದೀಯ ಮತ್ತು ಸಂವಿಧಾನಿಕ ಕಾರ್ಯ ವಿಧಾನಗಳನ್ನು ಉಲ್ಲಂಘನೆ ಮಾಡಿ 70% ಗ್ರಾಮೀಣ ಜನತೆ ಜೀವನೋಪಾಯಕ್ಕಾಗಿ ಅವಲಂಬಿಸಿರುವ ಕೃಷಿಯನ್ನು ಕಾರ್ಪೋರೇಟ್ ಕಂಪನಿಗಳ ಪರವಾಗಿ ಮಾಡಲು ಎಲ್ಲಾ ಸುಧಾರಣ ಕೃಷಿ ಗುತ್ತಿಗೆ, ಬೀಜ, ಅರಣ್ಯ ಹಕ್ಕುಗಳ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ ಮತ್ತು ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವಕ್ಕೆ (RCEP) ಸರಕಾರ ಸಹಿ ಹಾಕಿದೆ.

ಪುಟ 10 ನೋಡಿ



ಅವರು ಹೇಳುತ್ತಾರೆ: 'ಇಂದು ಅಥವ ಎಂದೆಂದೂ ಇಲ್ಲ'
ನಾವು ಹೇಳುತ್ತೇವೆ:'ಎಂದೆಂದೂ ಮಾಡದಂತಾಗಲು ಇಂದೇ ಕಾರ್ಯಾಚರಣೆ'

ನಮ್ಮ ಶತ್ರು ನಮ್ಮ ಹಕ್ಕುಗಳು ಮತ್ತು ಅರ್ಹತೆಗಳನ್ನು ದಮನ ಮಾಡಿ ದುಡಿಯುವ ಜನಗಳ ಮೇಲೆ ಗುಲಾಮಿಕೆಯನ್ನು ಹೇರಲು "ಇಂದು ಅಥವ ಎಂದೆಂದೂ ಇಲ್ಲ" ಎಂಬ ಉತ್ಕಟತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಕಾರ್ಮಿಕ ವರ್ಗಕ್ಕೆ, ಈ ಗುಲಾಮಿಕೆಯನ್ನು ಹೇರುವ ವಿನಾಶಕಾರಿ ಕುತಂತ್ರ ಎಂದೆಂದೂ ಸಾಗದಂತೆ ಮಾಡಲು "ಇಂದೇ" ಆಕ್ರಾಮಕವಾಗಿ, ಐಕ್ಯತೆಯಿಂದ, ಅಂಗುಲ-ಅಂಗುಲವೂ ಪ್ರತಿರೋಧವನ್ನು ಕಟ್ಟುವ ಮೂಲಕ ಕಾರ್ಯಾಚರಣೆ ನಡೆಸಬೇಕಾದ ಸಮಯ.

ನಾವು ಅದನ್ನು ಮಾಡಬಲ್ಲೆವು, ಖಂಡಿತವಾಗಿಯೂ ಮಾಡಬಲ್ಲೆವು.

ಕಾರ್ಮಿಕರು ಈಗ ಹೊಂದಿರುವ ಯಾವ ಹಕ್ಕುಗಳೂ ತಾವಾಗಿಯೇ ಬರಲಿಲ್ಲ. ಎಂಟು ಗಂಟೆಗಳ ದುಡಿಮೆಯ ಅವಧಿಯಿಂದ ಹಿಡಿದು, ಸಂಘಟನೆಯ ಹಕ್ಕು, ಮುಷ್ಕರದ ಹಕ್ಕು, ಸಾಮೂಹಿಕ ಚೌಕಾಶಿಯ, ಹಕ್ಕು, ಕುಂದುಕೊರತೆಗಳನ್ನು ನಿವಾರಿಸಿಕೊಳ್ಳುವ ಹಕ್ಕು ಇತ್ಯಾದಿ ಎಲ್ಲ ಹಕ್ಕುಗಳು ಕಾರ್ಮಿಕ ವರ್ಗ ಸಾಮೂಹಿಕವಾಗಿ ಸೆಟೆದು ನಿಂತ ಮೇಲೆಯೇ ಪಡೆದವುಗಳು– ಮೊದಲು ಸಮರಶೀಲ ಹೋರಾಟಗಳನ್ನು ನಡೆಸಿ ಅಪಾರ ತ್ಯಾಗ-ಬಲಿದಾನಗಳ ಮೂಲಕ, ಮತ್ತು ಆ ಪ್ರಕ್ರಿಯೆಯ ಮೂಲಕ ಸಮಾಜ ಮತ್ತು ಆಳುವವರು ಕಾರ್ಮಿಕ ವರ್ಗದ ಈ ಹಕ್ಕುಗಳಿಗೆ ಮಾನ್ಯತೆ ನೀಡುವಂತೆ ಮಾಡುವ ಮೂಲಕ ಪಡೆದಿದ್ದೇವೆ. ಇದು ಹುಟ್ಟಿನಿಂದಲೇ ಕಾರ್ಮಿಕ ವರ್ಗದ ಆಂದೋಲನದ ಇತಿಹಾಸ.

ಈ ಹಕ್ಕುಗಳನ್ನು ನಿರ್ಮೂಲಗೊಳಿಸಲು ಹಲವು ರಾಜ್ಯಗಳಲ್ಲಿ ಸುಗ್ರೀವಾಜ್ಞೆಗಳ ಮೂಲಕ, ಅದರ ನಂತರ ಶ್ರಮ ಸಂಹಿತೆಗಳ ಮೂಲಕ ಪ್ರಯತ್ನಿಸಿದಾಗ ನಾವು ಸೆಟೆದು ನಿಂತು ಇದಿರೇಟು ಕೊಟ್ಟಿದ್ದೇವೆ, ಈ ಕುತಂತ್ರಗಳನ್ನು ಪ್ರತಿರೋಧಿಸಿದ್ದೇವೆ. ಈಗಾಗಲೇ ಭಾರತೀಯ ಕಾರ್ಮಿಕ ಅಂದೋಲನದ ರಂಗದ ಮೇಲೆ ಇಂತಹ ಇದಿರೇಟುಗಳು ಎದ್ದು ಬಂದಿವೆ. ಕಲ್ಲಿದ್ದಲು ಕಾರ್ಮಿಕರ ಮೂರು ದಿನಗಳ ಮುಷ್ಕರ, ಬಿಪಿಸಿಎಲ್ ಕಾರ್ಮಿಕರ ಎರಡು ದಿನಗಳ ಮುಷ್ಕರ, ಸಿಮೆಂಟ್ ಕಾರ್ಮಿಕರ ಹೋರಾಟಗಳು, ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಹೋರಾಟಗಳು, ಕೊನೆಯದಾಗಿ ಉತ್ತರಪ್ರದೇಶದ ವಿದ್ಯುತ್ ಶಕ್ತಿ ಕಾರ್ಮಿಕರ ಖಾಸಗೀಕರಣ ವಿರೋಧಿ ಹೋರಾಟ ಕಾರ್ಮಿಕ ವರ್ಗದಿಂದ ಇಂತಹ ಐಕ್ಯ ಪ್ರತಿರೋಧದ ಸಾಕ್ಷಿಗಳಾಗಿವೆ.


ಮತ್ತು ನಾವು ಮಾತ್ರ ಅಲ್ಲ. ಜಗತ್ತಿನಾದ್ಯಂತ ಆಳುವ ವರ್ಗಗಳಿಂದ ಸುಮಾರಾಗಿ ಇಂತಹುದೇ ದಾಳಿಗಳನ್ನು ಎದುರಿಸುತ್ತಿರುವ ಕಾರ್ಮಿಕ ವರ್ಗ ಸಮರಕ್ಕಿಳಿದಿದೆ. ಇಂಡೋನೇಸ್ಯಾದಲ್ಲಿ ಅಕ್ಟೋಬರ್ 6 ರಿಂದ 8 ರ ವರೆಗೆ ನಡೆದ ಮೂರು ದಿನಗಳ ಬೃಹತ್ ಮುಷ್ಕರ ಇದಕ್ಕೆ ಇತ್ತಿಚಿನ ಉದಾಹರಣೆ.

ನಾವು ಹೋರಾಡಲೇ ಬೇಕು,, ನಾವು ಹೋರಾಡಬಲ್ಲೆವು ಮತ್ತು ಗೆದ್ದೇ ಗೆಲ್ಲುವೆವು. ಕಾರ್ಮಿಕ-ವಿರೋಧಿ, ಜನ-ವಿರೋಧಿ ಮತ್ತು ದೇಶ-ವಿರೋಧಿ ಧೋರಣೆಗಳದ್ದೇ ಅಂತಿಮ ಮಾತು ಆಗುವುದು ಸಾಧ್ಯವಿಲ್ಲ.

('ವರ್ಕಿಂಗ್ ಕ್ಲಾಸ್'ನ ನವಂಬರ್ 2020ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಅವರ ಲೇಖನದಿಂದ)

ವಿದ್ಯುತ್ ಕಾಯ್ದೆ (ತಿದ್ದುಪಡಿ)–2020

ರೈತಾಪಿ ಕೃಷಿಯನ್ನು ಸರ್ವನಾಶ ಮಾಡುವ ಹುನ್ನಾರ



ಕೃಷಿ ಭೂಮಿ, ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆ, ಚಿಲ್ಲರೆ ವ್ಯಾಪಾರ ಮಾತ್ರವಲ್ಲ ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ವಿದ್ಯುತ್, ನೀರನ್ನೂ ಸಹ ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವುದರ ಮೂಲಕ ದೇಶದ ಬಹುಸಂಖ್ಯಾತ ಗ್ರಾಮೀಣಾ ಜನತೆಯ ಜೀವನಾಧಾರವಾಗಿರುವ 'ರೈತಾಪಿ ಕೃಷಿ'ಯನ್ನು ಸರ್ವನಾಶ ಮಾಡಿ, 'ಕಾರ್ಪೋರೇಟ್ ಕೃಷಿ'ಗೆ ಪಟ್ಟವನ್ನು ಕಟ್ಟುವುದರ ಜೊತೆಗೆ ಸಾರ್ವಜನಕರ ಶ್ರಮದ ಫಲವಾಗಿ ಲಕ್ಷ ಲಕ್ಷ ಕೋಟಿ ರೂಗಳ ಆಸ್ತಿಯೂ ವಿದ್ಯುತ್ ಕ್ಷೇತ್ರದಲ್ಲಿ ಕ್ರೋಡಿಕರಣಗೊಂಡಿದ್ದು, ಕಾರ್ಪೋರೇಟ್ ಕಂಪನಿಗಳು ಲಪಾಟಾಯಿಸಲು ಅನುಕೂಲ ಮಾಡುವ ಹುನ್ನಾರವೇ ಕೇಂದ್ರ ಸರ್ಕಾರದ 'ವಿದ್ಯುತ್ ಕಾಯ್ದೆ (ತಿದ್ದುಪಡಿ)–2020' ಎನ್ನುವುದರಲ್ಲಿ ಸಂಶಯವೇ ಇಲ್ಲ. ಕೇಂದ್ರ ಸರ್ಕಾರದ ಈ ಪ್ರಯತ್ನಗಳ ಒಂದು ವಿಶ್ಲೇಷಣೆಯನ್ನು ಈ ಲೇಖನದಲ್ಲಿ ನೀಡಲಾಗಿದೆ.

ಜಿ.ಸಿ. ಬಯ್ಯಾರೆಡ್ಡಿ

ವಿದ್ಯುತ್ ಕ್ಷೇತ್ರದ ಸಂಕ್ಷಿಪ್ತ ಇತಿಹಾಸ:

ದೇಶದಲ್ಲಿ ವಿದ್ಯುತ್ ಕ್ಷೇತ್ರಕ್ಕೆ ದೊಡ್ಡ ಇತಿಹಾಸವಿದೆ. ವಿಶೇಷವಾಗಿ ನಮ್ಮ ರಾಜ್ಯಕ್ಕೆ ವಿದ್ಯುತ್ ಉತ್ಪಾದನೆಯಲ್ಲಿ ಬಾರಿ ವಿಶಿಷ್ಟವಾದ ಸ್ಥಾನವಿದೆ. 1902 ರಲ್ಲಿಯೇ ಏಷ್ಯಾದಲ್ಲಿಯೇ ಮೊಟ್ಟ ಮೊದಲನೇಯ 'ಜಲ ವಿದ್ಯುತ್ ಘಟಕ' ಆರಂಭವಾಗಿದ್ದು ನಮ್ಮ ರಾಜ್ಯದಲ್ಲಿ. ಮೈಸೂರು ಮಹಾರಾಜರು ಮತ್ತು ಎಂ. ವಿಶ್ವೇಶ್ವರಯ್ಯನವರ ಪರಿಶ್ರಮದಿಂದ ಇವತ್ತಿನ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರದಲ್ಲಿ "ಜಲ ವಿದ್ಯುತ್ ಘಟಕ" ವನ್ನು ಆರಂಭ ಮಾಡಿ, ಇಲ್ಲಿ ಉತ್ಪಾದನೆಯಾದ ವಿದ್ಯುತ್‌ನ್ನು ಕೋಲಾರ ಜಿಲ್ಲೆಯ "ಕೋಲಾರ ಚಿನ್ನದ ಗಣಿ (ಕೆಜಿಎಫ್) ಗೆ ಸರಬರಾಜು ಮಾಡಲಾಗುತ್ತಿತ್ತು. ಸುಮಾರು 120 ವರ್ಷಗಳ ಹಿಂದೆ ಆರಂಭವಾದ ಜಲ ವಿದ್ಯುತ್ ಇವತ್ತಿಗೂ ಅತ್ಯಂತ ಕಡಿಮೆ ದರದ ವಿದ್ಯುತ್ ಆಗಿದೆ. ಒಂದು ಯೂನಿಟ್ ವಿದ್ಯುತ್ ದರ ಕೇವಲ 10–20 ಪೈಸೆ ಎಂದರೆ ನಮ್ಮೆಲ್ಲರಿಗೂ ಅಚ್ಚರಿಯವಾಗಬಹುದು. ಆದರೆ ಇದು ಸತ್ಯ. ಶಿವನಸಮುದ್ರದಲ್ಲಿ ಮಾತ್ರವಲ್ಲ ರಾಜ್ಯದ ಇತರೆ 'ಜಲ ವಿದ್ಯುತ್ ಘಟಕ"ಗಳಲ್ಲಿ ತಯಾರಾಗುವ ವಿದ್ಯುತ್‌ನ ದರವೂ ಸರಿಸುಮಾರು ಇಷ್ಟೆ. ಹೀಗೆ ಆರಂಭವಾದ ವಿದ್ಯುತ್ ಉತ್ಪಾದನಾ ಕ್ಷೇತ್ರ 'ಭಾರತೀಯ ವಿದ್ಯುತ್ ಕಾಯ್ದೆ –1910 ಮತ್ತು 'ವಿದ್ಯುತ್ (ಸರಬರಾಜು) ಕಾಯ್ದೆ–1948' ರ ಅನ್ವಯ ಕೆಲಸವನ್ನು ಮಾಡುತ್ತಾ ಮುನ್ನೆಡೆಯಿತು. ಈ ದಿನಗಳಲ್ಲಿ 'ವಿದ್ಯುತ್'ನ್ನು ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಯ ಒಟ್ಟಾರೆ ಸಮಾಜದ ಸಮಗ್ರ ಅಭಿವೃದ್ಧಿಯ "ಸಾಧನ"ವಾಗಿ ಪರಿಗಣಿಸಲಾಗಿತ್ತು. ವಿದ್ಯುತ್ ಉತ್ಪಾದನೆ ಮತ್ತು ಸರಬರಾಜು ಮಹತ್ತರ 'ಸೇವಾ ಕ್ಷೇತ್ರ'ವಾಗಿ ಸರಿ ಸುಮಾರು 1990 ಆರಂಭದವರೆಗೆ ಬೆಳೆಯ ತೊಡಗಿತ್ತು.



ಹೀಗೆ ಸಾರ್ವಜನಿಕ ಬಂಡವಾಳ ಹೂಡಿಕೆಯಿಂದ "ಸಾರ್ವಜನಕ ಉದ್ದಿಮೆ"ಯಾಗಿ ದೇಶದ 'ಕೃಷಿ' ಮತ್ತು 'ಕೈಗಾರಿಕೆ' ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾ, ದೇಶದ ಆರ್ಥಿಕ, ರಾಜಕೀಯ ಸ್ವಾವಲಂಬನೆಯನ್ನು ಸಾಧಿಸಲು ಸಹಕಾರಿಯಾಗಿದ್ದು ಮಾತ್ರವಲ್ಲದೆ ಲಕ್ಷ ಲಕ್ಷ ಕೋಟಿಗಳ ಆಸ್ತಿಯಾಗಿ ವಿದ್ಯುತ್ ಕ್ಷೇತ್ರವು ಜನತೆಯ ಬೆವರಿನಿಂದ ಬೆಳೆದು ನಂತಿದೆ. ಸಾರ್ವಜನಿಕ ಉದ್ದಿಮೆಯಾಗಿರುವ ಈ ವಿದ್ಯುತ್ ಕ್ಷೇತ್ರ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಪ್ರದೇಶಗಳಿಗೆ ವಿಸ್ತರಣೆಯಾಗಿ ಸಾಮಾನ್ಯ ಜನರ ಬದುಕಿನಲ್ಲಿ 'ಬೆಳಕು' ನೀಡಿದ್ದು ಮಾತ್ರವಲ್ಲ ಕೃಷಿ ಮತ್ತು ಕೈಗಾರಿಕಾ ರಂಗದಲ್ಲಿ ತೀರ ಅಗತ್ಯವಿರುವ ವಿಭಾಗದ ಜನರಿಗೆ ಉಚಿತ, ಸಬ್ಸಿಡಿ ದರದ ವಿದ್ಯುತ್‌ನ್ನು ಸರಬರಾಜು ಮಾಡುತ್ತಾ ಸಾಗಿದೆ. ಇದರಿಂದ ಲಕ್ಷಾಂತರ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು, ಸಣ್ಣ ಪುಟ್ಟ ಕೈಗಾರಿಕಾ ಮಾಲೀಕರು ತಮ್ಮ ವೃತ್ತಿಗಳನ್ನು ಮುಂದುವರಿಸಲು ಸಹಾಯವಾಗುತ್ತಿದೆ. ಉದಾಹರಣೆಗೆ ರಾಜ್ಯದ ಸುಮಾರು 25.90 ಲಕ್ಷ ನೀರಾವರಿ ಪಂಪಸೆಟ್ ವಿದ್ಯುತ್ ಬಳಕೆದಾರ ರೈತರು, ಲಕ್ಷಾಂತರ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಬಡವರು ಗೃಹ ಬಳಕೆಗೆ ವಿದ್ಯುತ್‌ನ್ನು ಉಚಿತವಾಗಿ ಪಡೆಯುತ್ತಿದ್ದಾರೆ.

ವಿದ್ಯುತ್ ಖಾಸಗಿಕರಣದ ಪರ್ವ

1991 ರಿಂದ ಆರಂಭವಾದ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ, ಗ್ಯಾಟ್ ಒಪ್ಪಂದ, ವಿಶ್ವ ವ್ಯಾಪಾರಿ ಸಂಘಟನೆಯ ಷರತ್ತುಗಳ ಫಲವಾಗಿ ದೇಶದ ಎಲ್ಲಾ ಕ್ಷೇತ್ರಗಳನ್ನು ಖಾಸಗೀಕರಣಗೊಳಿಸುವ ಧೋರಣೆಯ ಭಾಗವಾಗಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಲು ಶುರು ಮಾಡಲಾಯಿತು. ಈ ಪ್ರಕ್ರಿಯೆಯ ಭಾಗವಾಗಿ ವಿದ್ಯುತ್ ಕ್ಷೇತ್ರದ ಸಬ್ಸಿಡಿಗಳ ಕುರಿತು ಪಾರದರ್ಶಕತೆ, ಈ ಕ್ಷೇತ್ರದ ಸಾಮರ್ಥ್ಯವನ್ನು ಹೆಚ್ಚಿಸುವ ಹೆಸರಿನಲ್ಲಿ 'ವಿದ್ಯುತ್ ನಿಯಂತ್ರಣ ಕಾಯ್ದೆ–1998' ನ್ನು ಜಾರಿಗೆ ತರಲಾಯಿತು. ಈ ಕಾಯ್ದೆಯ ಜಾರಿಯ ಭಾಗವಾಗಿಯೇ ದೇಶಾದ್ಯಂತ ವಿದ್ಯುತ್ ಕ್ಷೇತ್ರವನ್ನು "ವಿದ್ಯುತ್ ಉತ್ಪಾದನೆ" ವಿದ್ಯುತ್ ಸರಬರಾಜು" ಮತ್ತು "ವಿದ್ಯುತ್ ಪ್ರಸರಣೆ" ಗಾಗಿ ಪ್ರತ್ಯೇಕ ಕಂಪನಿಗಳನ್ನು ರಚಿಸಲು ರಾಜ್ಯ ಸರ್ಕಾರಗಳು ತಮ್ಮ ಕಾಯ್ದೆಗಳಿಗೆ ತಿದ್ದುಪಡಿಗಳನ್ನು ತಂದವು ಮಾತ್ರವಲ್ಲ ಪ್ರಪ್ರಥಮ ಬಾರಿಗೆ "ವಿದ್ಯುತ್ ದರ" ನಿಗದಿ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರದ ಅಧಿಕಾರದಿಂದ ಬೇರ್ಪಡಿಸಿ ಈ ಉದ್ದೇಶಕ್ಕಾಗಿ 'ವಿದ್ಯುತ್ ನಿಯಂತ್ರಣಾ ಆಯೋಗ'ಗಳನ್ನು ರಚಿಸಲಾಯಿತು. ಈ ಒಟ್ಟಾರೆ ಧೋರಣೆಗಳ ಫಲವಾಗಿಯೇ ನಮ್ಮ ರಾಜ್ಯದಲ್ಲಿಯು 1999 ರಲ್ಲಿ 'ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ (ಕೆಇಆರ್‌ಸಿ) ರಚನೆಯಾಯಿತು. 2002 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆಇಬಿ) ಯನ್ನು ಒಡೆದು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ (ಸೆಸ್ಕಂ), ಹುಬ್ಬಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ), ಗುಲ್ಬಾರ್ಗ ವಿದ್ಯುತ್ ಸರಬರಾಜು ಕಂಪನಿ (ಗೆಸ್ಕಂ) ಗಳನ್ನು ವಿದ್ಯುತ್ ಸರಬರಾಜುಗಾಗಿ ಕಂಪನಿಗಳಾಗಿ ರಚಿಸಲಾಯಿತು. ಇನ್ನಷ್ಟು ಮುಂದುವರಿದು 'ವಿದ್ಯುತ್ ಪ್ರಸರಣೆ'ಗಾಗಿ ಕರ್ನಾಟಕ ವಿದ್ಯುತ್ ಪ್ರಸರಣೆ ನಿಗಮ ನಿಯಮಿತ (ಕೆಪಿಟಿಸಿಎಲ್) ನ್ನು ಸಹ ಹುಟ್ಟು ಹಾಕಲಾಯಿತು. 1970 ರಲ್ಲಿಯೇ ವಿದ್ಯುತ್ ಉತ್ಪಾದನೆಗೆಂದು ರಾಜ್ಯದಲ್ಲಿ 'ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್)ವನ್ನು ರಚಿಸಲಾಗಿತ್ತು.

ವಿದ್ಯುತ್ ಉತ್ಪಾದನೆ, ಪ್ರಸರಣೆ, ಸರಬರಾಜು ಮತ್ತು ವಿದ್ಯುತ್ ದರ ನಿಗದಿ ಮಾಡುವಲ್ಲಿ ಪಾರದರ್ಶಕತೆ, ಸಾಮರ್ಥ್ಯ ಹೆಚ್ಚಳ, ಉತ್ತಮ ಸೇವೆ ಇತ್ಯಾದಿ ಆಕರ್ಷಕ ಉದ್ದೇಶಗಳನ್ನು ಬಹಿರಂಗವಾಗಿ ಸರ್ಕಾರಗಳು ಪ್ರಚುರಪಡಿಸಿದರೂ, ಮೂಲ ಉದ್ದೇಶ, ಈ ಎಲ್ಲಾ ಹಂತದಲ್ಲಿ ಖಾಸಗಿ ಕಂಪನಗಳಿಗೆ ಪ್ರವೇಶ ನೀಡುವುದು, ನಿಧಾನವಾಗಿ ಇಡೀ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದೇ ಆಗಿತ್ತು.

ಈ ಒಟ್ಟು ಪ್ರಕ್ರಿಯೆಯನ್ನು ಮತ್ತಷ್ಟು ಸುಲಭಗೊಳಿಸಲು ಮತ್ತು ಸಮರ್ಥವಾಗಿ ಜಾರಿ ಮಾಡುವ ಉದ್ದೇಶದಿಂದಲ್ಲೇ 'ವಿದ್ಯುತ್ ಕಾಯ್ದೆ–2003' ಕೇಂದ್ರ ಸರ್ಕಾರ ಹೊಸದಾಗಿ ಜಾರಿ ಮಾಡಿತ್ತು.

ವಿದ್ಯುತ್ ಮೀಟರೀಕರಣ ಮತ್ತು ಖಾಸಗೀಕರಣದ ವಿರುದ್ಧ ಕರ್ನಾಟಕದಲ್ಲಿ ಭುಗಿಲೆದ್ದ ರೈತ ಹೋರಾಟಗಳು:

'ವಿದ್ಯುತ್ ಕಾಯ್ದೆ – 2003' ರ ಅನ್ವಯ 'ಬೆಸ್ಕಾಂ'ನ್ನು ಮಾರಾಟ ಮಾಡುವ ಚರ್ಚೆಗಳು ಶುರುವಾದವು. ಇದಕ್ಕೆ ಪೂರಕವಾಗಿಯೇ ರೈತರ ಎಲ್ಲಾ ನೀರಾವರಿ ಪಂಪಸೆಟ್‌ಗಳಿಗೆ ಕಡ್ಡಾಯ ಮೀಟರೀಕರಣವನ್ನು ಮಾಡಿಯೇ ತೀರುವುದಾಗಿ ಕಾಂಗ್ರೆಸ್‌ನ ಎಸ್.ಎಂ. ಕೃಷ್ಣ ಸರ್ಕಾರ ಘೋಷಣೆ ಮಾಡಿ ಮೀಟರೀಕರಣವನ್ನು ಶುರು ಮಾಡಿದರು. ವಿದ್ಯುತ್ ಉತ್ಪಾದನೆಗೆ ವಿವಿಧ ಖಾಸಗಿ ಕಂಪನಿಗಳಿಗೆ ಹೇರಳ ಅವಕಾಶ, ವಿಪರೀತ ದುಬಾರಿ ದರಗಳಲ್ಲಿ ಖಾಸಗಿ ಕಂಪನಗಳಿಂದ ವಿದ್ಯುತ್ ಖರೀದಿ ಒಪ್ಪಂದಗಳು, ಅವುಗಳಲ್ಲಿ ವ್ಯಾಪಕ ಭ್ರಷ್ಟಚಾರದ ಪ್ರಕರಣಗಳು ಸ್ಫೋಟಗೊಂಡವು. 0.20 ಪೈಸೆ, 0.30 ಪೈಸೆಯ ವಿದ್ಯುತ್ ಯೂನಿಟ್ ದರಗಳ 2–00, 300, 7–00, 8–00 ರೂ. ವರೆಗೆ ಧೀಡಿರನೆ ಏರತೊಡಗಿದವು.

ಇಂತಹ ಸನ್ನಿವೇಶದಲ್ಲಿಯೇ ರಾಜ್ಯದ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು, ಸಾಮಾನ್ಯ ಜನರು ಬೀದಿಗೆ ಬಂದು ಪ್ರತಿಭಟನೆಗಳಲ್ಲಿ ಧುಮುಕಿದರು. ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್), ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯೂಯೂ), ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಸಂಘಟನೆಗಳು, ವಿವಿಧ ವಿಭಾಗದ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ರಾಜ್ಯದ್ಯಂತ ವ್ಯಾಪಕವಾದ ಸಮರಶೀಲ ನಿರಂತರ ಹೋರಾಟಗಳನ್ನು ಸಂಘಟಿಸುವಲ್ಲಿ ಮುಂಚೂಣಿ ಪಾತ್ರವನ್ನು ನಿರ್ವಹಿಸಿದವು. ಇಂತಹ ಚಳುವಳಿಗಳ ಭಾಗವಾಗಿ ರಾಜ್ಯ ಸರ್ಕಾರ ತನ್ನ ನಿರ್ಧಾರವನ್ನು ಕೈಬಿಟ್ಟಿತು. ನೀರಾವರಿ ಪಂಪ್‌ಸೆಟ್‌ಗಳು ಮೀಟರ್ ಮತ್ತು ಬಡವರ ಮನೆಗಳಿಗೆ ಬಲತ್ಕರದಿಂದ ಮೀಟರ್‌ಗಳನ್ನು ಅಳವಡಿಸುವ ಸರ್ಕಾರದ ಕ್ರಮ ವಿರುದ್ಧ ನಡೆದ ಸಮರ ಶೀಲ ಚಳುವಳಿ, ರಾಜ್ಯದ ವಿದ್ಯುತ್ ಕ್ಷೇತ್ರದ ಖಾಸಗೀಕರಣವನ್ನು ಒಂದು ಹಂತದಲ್ಲಿ ತಡೆಯಲು ಯಶಸ್ವಿಯಾಯಿತೆಂದು ಹೇಳಬಹುದು.

ಆದರೆ ಖಾಸಗಿ ಕಂಪನಿಗಳ ವಿದ್ಯುತ್ ಉತ್ಪಾದನೆ ಮತ್ತು ಖಾಸಗಿ ಕಂಪನಗಳಿಂದ ವಿಪರೀತ ದರದಲ್ಲಿ ಖರೀದಿ ಮಾಡುವ ಕಾರ್ಯ ಮುಂದುವರಿಯಿತು. ಇದರ ಫಲವಾಗಿ ಇವತ್ತು ಒಟ್ಟಾರೆ ವಿದ್ಯುತ್ ದರಗಳು ಅಭಿವೃದ್ಧಿಗೆ ಮಾರಕವಾಗಿ ನಿಂತಿವೆ.

ವಿದ್ಯುತ್ ಕಾಯ್ದೆ (ತಿದ್ದುಪಡಿ)–2020 ರೈತರ ಮರಣ ಶಾಸನ

'ವಿದ್ಯುತ್ ನಿಯಂತ್ರಣ ಕಾಯ್ದೆ 1998' ಮತ್ತು 'ವಿದ್ಯುತ್ ಕಾಯ್ದೆ 2003'ಗಳನ್ನು ಜಾರಿಗೆ ತಂದು ವಿದ್ಯುತ್ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗೀಕರಣ ಗೊಳಿಸಬೇಕೆಂಬ ಕೇಂದ್ರ ಸರ್ಕಾರಗಳ ಉದ್ದೇಶವನ್ನು ಈಡೇರಿಸಲು ಸಾಧ್ಯವಾಗಲ್ಲಿಲವೆಂದು ಹಾಗು ಇದಕ್ಕೆ ಕೆಲವು ರಾಜ್ಯ ಸರ್ಕಾರಗಳು, ರೈತರು, ಕೃಷಿಕೂಲಿಕಾರರ ದುರ್ಬಲ ವರ್ಗದವರಿಗೆ ಉಚಿತ, ಸಬ್ಸಿಡಿ ದರಗಳಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿರುವುದು ಈ ಖಾಸಗೀಕರಣ ಪ್ರಕ್ರಿಯೆ ಅಡ್ಡಿ ಉಂಟಾಗಿದೆಯೆಂದು ತೀರ್ಮಾನಿಸಿ, ಈ ಬಾರಿ ರಾಜ್ಯಗಳನ್ನು ಹಿಂದಕ್ಕೆ ಸರಿಸಿ, ತಾನೇ ಸಂಪೂರ್ಣ ಹಿಡಿತವನ್ನು ಸಾಧಿಸಿ, ರೈತರು, ಕೃಷಿಕೂಲಿಕಾರರ ಇತ್ಯಾದಿ ದುರ್ಬಲ ವರ್ಗದವರಿಗೆ ನೀಡುತ್ತಿರುವ ಉಚಿತ, ಸಬ್ಸಿಡಿ ದರದ ವಿದ್ಯುತ್‌ವನ್ನು ನಿಲ್ಲಿಸುವುದು. ಕಾಲಾಮಿತಿಯಲ್ಲಿ ಖಾಸಗೀಕರಣ ಗೊಳಿಸುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು 'ವಿದ್ಯುತ್ ಕಾಯ್ದೆ 2003'ಕ್ಕೆ ತಿದ್ದುಪಡಿಗಳನ್ನು ತಂದು ಕೊರೊನಾ ಕಾಲದಲ್ಲಿ 'ವಿದ್ಯುತ್ ಕಾಯ್ದೆ (ತಿದ್ದುಪಡಿ)–2020'ನ್ನು ಬಿಜೆಪಿಯ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ.

ಈ ಕಾಯ್ದೆ ಜಾರಿಯ ಮೂರು ವರ್ಷಗಳಲ್ಲಿ ಉಚಿತ, ಸಬ್ಸಿಡಿ ದರದಲ್ಲಿ ನೀಡುತ್ತಿರುವ ವಿದ್ಯುತ್ ನಿಲ್ಲಿಸಬೇಕು. ಪ್ರತಿವರ್ಷ ಶೇ 6 ಕ್ಕಿಂತ ಕಡಿಮೆಯಾಗದಂತೆ ಸಬ್ಸಿಡಿಗಳನ್ನು ಕಡಿತ ಮಾಡಬೇಕು. ವಿದ್ಯುತ್ ದರದ ಶೇ 20 ಕ್ಕಿಂತ ಹೆಚ್ಚಿಗೆ ಸಬ್ಸಿಡಿಗಳ ಇರಬಾರದು, ಒಂದು ವೇಳೆ ರಾಜ್ಯ ಸರ್ಕಾರಗಳ ಈ ಎಲ್ಲಾ ಶರತ್ತ್‌ಗಳ ಅನ್ವಯ ಸಬ್ಸಿಡಿಗಳನ್ನು ನೀಡುವುದಾದರೆ, ರೈತರು, ಕೂಲಿಕಾರರು ವಿದ್ಯುತ್ ದರಗಳನ್ನು ಪಾವತಿಸಿದ ನಂತರ ಅವರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗವಣೆ (DBT) ಮಾಡುವುದು. ಇತ್ಯದಿ ಹತ್ತು ಹಲವು ಅಂಶಗಳನ್ನು ಒಳಗೊಂಡಿದೆ. 'ವಿದ್ಯುತ್

ಪುಟ 10 ನೋಡಿ

ಈ ಕಾಯ್ದೆಯನ್ನು ಜಾರಿ ಮಾಡಿಯೇ ತೀರುತ್ತೇನೆ ಎಂದು ಕೇಂದ್ರ ಸರ್ಕಾರ ಮುಂದುವರೆಯುತ್ತಿದೆ. ಈ ಮೂಲಕ ಸಮಾಜದ ಆರ್ಥಿಕ ಸಾಮಾಜಿಕ ಪರಿವರ್ತನೆಯ ಅಗತ್ಯ ಸೇವೆಯಾಗಿದ್ದ ವಿದ್ಯುತ್‌ನ್ನು ಮಾರಾಟದ ಸರಕನ್ನಾಗಿ ಮಾಡಲು ತುದಿಗಾಲಿನ ಮೇಲೆ ನಿಂತಿದೆ. ಇದಕ್ಕೆ ಮೂಲ ಕಾರಣ ಬಿಜೆಪಿಯ ತೀರ ಹತ್ತಿರದ ಮಿತ್ರರಾದ ಅದಾನಿ, ಅಂಬಾನಿಗಳಂತಹ ಕಾರ್ಪೋರೇಟ್‌ಗಳನ್ನು ತೃಪ್ತಿ ಪಡಿಸುವುದು. 7 ದಶಕಗಳಿಂದ ಶೇಖರಣೆಗೊಂಡಿರುವ ಲಕ್ಷ ಲಕ್ಷ ಕೋಟಿ ರೂ.ಗಳ ಆಸ್ತಿಯನ್ನು ಮೂರು–ನಾಲ್ಕು ಕಾಸಿಗೆ ಧಾರೆ ಎರೆಯುತ್ತಿದೆ. ಈ ಖಾಸಗೀಕರಣದ ಫಲವಾಗಿ ಮುಂದಿನ ದಿನಗಳಲ್ಲಿ ಎಲ್ಲಾ ವಿಭಾಗದ ವಿದ್ಯುತ್ ದರಗಳು ಗಗನಕ್ಕೆ ಏರಲಿವೆ. ರೈತರು, ಕೃಷಿ ಕೂಲಿಕಾರರು ಇತ್ಯಾದಿ ಸಾಮಾನ್ಯ ಜನರು ವಿದ್ಯುತ್‌ನ್ನು ಬಳಸಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಾಣವಾಗಲಿದೆ. ಮತ್ತೆ ಬಡವರು 'ಕತ್ತಲಿಗೆ' ತಳ್ಳಲ್ಪಡುತ್ತಾರೆ.



ಮುಂಬೈಯಲ್ಲಿ ಅದಾನೀ ವಿದ್ಯುತ್ ಕಂಪನಿಯ ಬಿಲ್ಲಿಂಗ್‌ನ ಅವಾಂತರಗಳನ್ನು ಪ್ರದರ್ಶಿಸುತ್ತಿರುವ ಒಬ್ಬ ಗ್ರಾಹಕ

ನ.26: ಕಾರ್ಮಿಕ ವರ್ಗದ ಮಹಾ ಸವಾಲು....



ಪುಟ 8 ರಿಂದ

ಹಾಗೆಯೇ ರಾಜ್ಯದಲ್ಲಿಯೂ ಕೂಡ APMC ಮತ್ತು ಭೂಸ್ವಾಧೀನ ಕಾಯ್ದೆಗಳಿಗೆ ತಿದ್ದುಪಡಿ ಮಾಡಿ ಸುಗ್ರೀವಾಜ್ಞೆ ಹೊರಡಿಸಿದೆ. 2020 ರ ಮಳೆಗಾಲದ ಅಧಿವೇಶನದಲ್ಲಿ ವಿಧಾನ ಪರಿಷತ್‌ನಲ್ಲಿ ಕಾನೂನು ಮಾಡಲು ಆಗದೇ ಈಗ ಪುನ: ಸುಗ್ರೀವಾಜ್ಞೆ ತರಲು ರಾಜ್ಯ ಸರ್ಕಾರ ಮುಂದಾಗಿದೆ.

ಈಗಿರುವ ಕೃಷಿ ಬಿಕ್ಕಟ್ಟಿನಿಂದ ರೈತಾಪಿ ಜನತೆಯನ್ನು ಹೊರ ತರಲು ಕೃಷಿ ಉತ್ಪಾದನಾ ವೆಚ್ಚ ಕಡಿಮೆ ಮಾಡಬೇಕು, ಬೆಳೆದ ಫಸಲಿಗೆ ಬೆಂಬಲ ಬೆಲೆ ಸಿಗಬೇಕು. ಕೃಷಿಗೆ ಬೇಕಾಗುವ ಮೂಲ ಸೌಕರ್ಯಗಳನ್ನೊದಗಿಸಿ ಮಾರುಕಟ್ಟೆ ವ್ಯವಸ್ಥೆ, ಸಂಸ್ಕರಣೆ, ಸಾರಿಗೆ ಇತ್ಯಾದಿಗಳ ಸುಧಾರಣೆಯಾಗಬೇಕು. ಕೃಷಿಯಾಧಾರಿತ ಕೈಗಾರಿಕೆಗಳ ಸ್ಥಾಪನೆ ಮಾಡಿ ಕೃಷಿಯನ್ನು ಲಾಭದಾಯಕ ಮತ್ತು ಉತ್ತೇಜನಕಾರಿ ಮಾಡುವ ಬದಲಿಗೆ ಇಡೀ ಕೃಷಿಯನ್ನು ಸುಧಾರಣೆಯ ಹೆಸರಿನಲ್ಲಿ ಅಗತ್ಯ ಸರಕುಗಳ ಕಾಯ್ದೆಯನ್ನು ನಿಗ್ರಹಿಸಿದ್ದಾರೆ. ಹೀಗಾಗಿ ಕಾರ್ಪೋರೇಟ್ ಮತ್ತು ಗುತ್ತಿಗೆ ಕೃಷಿಯನ್ನು, ಆಹಾರ ಸಂಸ್ಕರಣೆ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಮತ್ತು ದೇಶೀಯ ಗುತ್ತೇದಾರಿಗಳನ್ನು ಉತ್ತೇಜಿಸಲಾಗುತ್ತದೆ. ಹಾಗೆಯೇ 2020 ವಿದ್ಯುತ್ (ತಿದ್ದುಪಡಿ) ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸದೇ 12 ಮುಖ್ಯ ಮಂತ್ರಿಗಳ ವಿರೋಧವಿದ್ದರೂ ವಿದ್ಯುತ್ ವಿತರಣಾ ಜಾಲವನ್ನು ಖಾಸಗೀಕರಣ ಮಾಡಲಾಗುತ್ತಿದೆ. ಇದರಿಂದ ಸಬ್ಸಿಡಿ ದರದ ವಿದ್ಯುತ್ ಪೂರೈಕೆಗೆ ಹೊಡೆತ ಬೀಳುವುದಲ್ಲದೆ, ಇದರ ನಿಯಂತ್ರಣದಲ್ಲಿ ರಾಜ್ಯ ಸರ್ಕಾರಗಳ ಪಾತ್ರವನ್ನುಅಲ್ಲಗೆಳೆದು, ಈಗಿರುವ ನೌಕರರನ್ನು ಪ್ರಾಂಚೈಸಿ ಮಾಲೀಕರ ಒಡೆತನಕ್ಕೆ ಒಳಪಡಿಸಲಾಗುತ್ತಿದೆ.

*** ಕಡಿಮೆ ಆದಾಯದ ಕುಟುಂಬಗಳಿಗೆ 7500 ರೂ. ನಗದು ವರ್ಗಾವಣೆ ಮಾಡಬೇಕು**

ಕೊರೊನಾ ಸಂಕಷ್ಟದ ಸಮಯದಲ್ಲಿ ಕೊರೋನಾಗಿಂತ ಮೊದಲೇ ಇದ್ದ ಜಿಡಿಪಿ ಬೆಳವಣಿಗೆ ದರ 2016–17ರಲ್ಲಿ 8.3% ಇತ್ತು ಸತತವಾಗಿ ಇಳಿಯುತ್ತ ಇದು 2017–18ರಲ್ಲಿ 7 ಶೇ.ಕ್ಕೆ, 2018–19ರಲ್ಲಿ 6.1ಶೇ.ಕ್ಕೆ, 2019–20ರಲ್ಲಿ 4.ಶೇ.ಕ್ಕೆ ಇಳಿದಿದೆ; 2020–21ರಲ್ಲಿ (–)9.5ಶೇ. ಕ್ಕೆ ಇಳಿಯಲಿದೆ. ಇದು ಉದ್ಯೋಗಗಳ ಮೇಲೆ ಪರಿಣಾಮ ಬೀರಿ 15 ಕೋಟಿ ಜನರನ್ನು ತಮ್ಮ ಜೀವನಾಧಾರಗಳನ್ನು ಕಳೆದು ಕೊಂಡು ಅಕ್ಷರಶ: ಬೀದಿ ಪಾಲಾಗಿದ್ದಾರೆ.

ಭಾರತದಲ್ಲಿ ಆರ್ಥಿಕ ಅಸಮಾನತೆಗಳು ಹೆಚ್ಚಿವೆ. ಕೊರೋನಾ ಸಮಯದಲ್ಲಿ ಅಸಂಘಟಿತ ಕ್ಷೇತ್ರದ ಕಾರ್ಮಿಕರು, ಸೇವಾ ವಲಯಗಳಲ್ಲಿ ದುಡಿಯುವ ಸ್ಕೀಂ ನೌಕರರು, ಉತ್ಪಾದನಾ ವಲಯದ ಕಾರ್ಮಿಕರು, ಸ್ವ ಉದ್ಯೋಗಸ್ಥರು, ಸಾರಿಗೆ ವಿಭಾಗಗಳಲ್ಲಿ ದುಡಿಯುವವರು, ಖಾಯಂ ಅಲ್ಲದ ವಿಭಾಗಗಳಲ್ಲಿ ದುಡಿಯುವವರು ಕೃಷಿ ಕೂಲಿಕಾರರು, ಬಡ ರೈತರು, ಜೀವನೋಪಾಯಗಳನ್ನು ಕಳೆದು ಕೊಂಡಿರುವಾಗ, 1000 ಕೋಟಿಗಿಂತ ಹೆಚ್ಚು ಸಂಪತ್ತು ಇರುವ 828 ಅತಿ ಶ್ರೀಮಂತ ವಿಭಾಗದ ಆಸ್ತಿ ಈಗ 31 ಲಕ್ಷ 72 ಸಾವಿರದ 500 ಕೋಟಿಗೆ ಹೆಚ್ಚಾಗಿದೆ. (35%ದಷ್ಟು). ಆರ್ಥಿಕ ಹಿಂಜರಿತದಿಂದ ಪಾರಾಗಬೇಕಾದರೆ ಜನಸಾಮಾನ್ಯರ ಕೊಂಡು ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಲಿಕ್ಕಾಗಿ ಕನಿಷ್ಠ ವೇತನ, ಹಣಕಾಸು ಆಯೋಗಗಳ ಶಿಫಾರಸ್ಸು ಜಾರಿ ಮಾಡುವುದರೊಂದಿಗೆ ಆದಾಯ ತೆರಿಗೆಯ ವ್ಯಾಪ್ತಿಯ ಹೊರಗಿರುವ ಕುಟುಂಬಗಳಿಗೆ ಮಾಸಿಕ 7500 ರೂ.ಗಳನ್ನು ಪಾವತಿಸಬೇಕು.

*** ಎಲ್ಲ ಅಗತ್ಯವಿರುವವರಿಗೆ ತಿಂಗಳಿಗೆ 10 ಕೆ.ಜಿ. ಉಚಿತ ಪಡಿತರ ನೀಡಬೇಕು.**

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ 107 ದೇಶಗಳ ಪೈಕಿ ಭಾರತ 94ನೇ ಸ್ಥಾನದಲ್ಲಿದೆ. ಇದು ಪಕ್ಕದ ಬಾಂಗ್ಲಾದೇಶ, ಮ್ಯಾನ್ಮಾರ್ ಮತ್ತು ಪಾಕಿಸ್ತಾನ ದಂತಹ ಸಣ್ಣ ಪುಟ್ಟ ದೇಶಗಳಿಗಿಂತಲೂ ಕೆಳಗಿದೆ. ಲಕ್ಷ ಗಟ್ಟಲೆ ಜನರು ಹಸಿವಿನಿಂದ ಸಾಯುತ್ತಿರುವುದಷ್ಟೇ ಅಲ್ಲದೇ ಶ್ರಮಶಕ್ತಿಗೆ ಅಪಾಯವಾಗುತ್ತಿದೆ. ಆದ್ದರಿಂದ ಕೇಂದ್ರೀಯ ಗೋದಾಮುಗಳಲ್ಲಿ ಕೊಳೆಯುತ್ತಿರುವ 77 ಮಿಲಿಯನ್ ಟನ್ ಆಹಾರವನ್ನು ಅಗತ್ಯವಿರುವವರಿಗೆ ಯಾವುದೇ ಉಚಿತವಾಗಿ ಹಂಚಿಕೆ ಮಾಡಿ ಜನರನ್ನು ಹಸಿವಿನಿಂದ ಮುಕ್ತಗೊಳಿಸಬೇಕು.

ನರೇಗಾ ಕೆಲಸವನ್ನು 200 ದಿನಗಳಿಗೆ ಹೆಚ್ಚಿಸಿ, ನಗರ ಪ್ರದೇಶಗಳಿಗೆ ವಿಸ್ತರಿಸಿ, ಕೂಲಿಯನ್ನು ಹೆಚ್ಚಿಸಬೇಕು ಕೊರೋನಾ ಸಂದರ್ಭದಲ್ಲಿ ಸುಮಾರು 14 ಕೋಟಿ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಹಿಂತಿರುಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಆದಾಯ ರಹಿತರಾಗಿದ್ದಾರೆ. ಇಂತಹ ಜನರನ್ನು ಸಂರಕ್ಷಿಸಲು ಈಗಿರುವ 36 ಸಾವಿರ ಕೋಟಿ ಬಜೆಟನ್ನು 1 ಲಕ್ಷ ಕೋಟಿ ರೂ.ಗೆ ಹೆಚ್ಚಿಸಬೇಕು ಮತ್ತು ಮೀಸಲಿರಿಸಬೇಕು.

ಸಾರ್ವಜನಿಕ ವಲಯ ಮತ್ತು ಸರ್ಕಾರಿ ಉತ್ಪಾದನಾ ಮತ್ತು ಸೇವಾ ಸಂಸ್ಥೆಗಳ ಖಾಸಗೀಕರಣ ನಿಲ್ಲಿಸಿ.

ಸ್ವಾತಂತ್ರ್ಯ ನಂತರದಲ್ಲಿ ಭಾರತದ ಅಭಿವೃದ್ದಿಗೆ ಅತ್ಯಗತ್ಯವಾದ ಬಂಡವಾಳವನ್ನು ಅಂದಿನ ಬೃಹತ್ ಬಂಡವಾಳಗಾರರು ಹಾಕುವ ಬದಲಿಗೆ ಅಂದಿನ ಸರ್ಕಾರವೇ ಬಂಡವಾಳ ಹೂಡಿ ಭಾರತವನ್ನು ಮುನ್ನಡೆಸಿತು. ಆದರೆ ಇಂದು ಅತ್ಯಂತ ಲಾಭದಾಯಕವಾಗಿ ನಡೆಯುವ ಆ ಸಂಸ್ಥೆಗಳನ್ನು ಅದೇ ಬಂಡವಾಳದಾರರಿಗೆ ಧಾರೆಯೆರೆಯುತ್ತಿದೆ.

85 ಲಕ್ಷಕೋಟಿ ಠೇವಣಿ ದಾರರಿರುವ ರಾಷ್ಟ್ರೀಕೃತ ಬ್ಯಾಂಕುಗಳನ್ನು 10 ಲಕ್ಷ ಕೋಟಿ ವಸೂಲಾಗದ ಸಾಲದ ಪ್ರಮಾಣವನ್ನು ಮನ್ನಾ ಮಾಡುವ ತಂತ್ರಗಾರಿಕೆಯಿಂದ 32 ರಾಷ್ಟ್ರೀಕೃತ ಬ್ಯಾಂಕುಗಳನ್ನು ಸೇರಿಸಿ 12 ಬ್ಯಾಂಕುಗಳನ್ನಾಗಿ ಪರಿವರ್ತಿಸಿದೆ. 40 ಕೋಟಿ ಪಾಲಿಸಿದಾರರನ್ನೊಂದಿರುವ 32 ಲಕ್ಷ ಕೋಟಿ ಆಸ್ತಿಯನ್ನೊಂದಿರುವ ಎಲ್‌ಐಸಿಯನ್ನು ಇಂದು ಖಾಸಗೀಕರಿಸಲು ಹೊರಟಿದೆ.

ಜಗತ್ತಿನಲ್ಲಿಯೇ ಅತಿ ದೊಡ್ಡ ಸಂಪರ್ಕ ಜಾಲ ಹೊಂದಿರುವ ದೇಶದ ಪ್ರತಿಷ್ಠಿತ 109 ರೈಲ್ವೆ ನಿಲ್ದಾಣಗಳನ್ನು ಖಾಸಗೀಕರಿಸಿ, 157 ಖಾಸಗಿ ರೈಲುಗಳನ್ನೋಡಿಸುವ ನಿರ್ಧಾರದಿಂದ ರೈಲ್ವೆ ಪ್ರಯಾಣಿಕರ ಟಿಕೆಟ್‌ಗೆ ಸಿಗುತ್ತಿದ್ದ 43 % ಸಬ್ಸಿಡಿ ರದ್ದಾಗಿ, 70 ಸಾವಿರ ಜನರ ಉದ್ಯೋಗ ನಷ್ಟವಾಗುವ ಅಪಾಯವಿದೆ. ಹೀಗೆ ವಿಮಾನ ನಿಲ್ದಾಣಗಳು, ಬಂಧರು, ಹಡಗು ಕಟ್ಟೆಗಳು ಮುಂತಾದ ಲಾಭಗಳಿಸುವ ಸರ್ಕಾರಿ ಸಂಸ್ಥೆಗಳು, ಕಲ್ಲಿದ್ದಲು ಗಣಿಗಳು, ಸಮೃದ್ಧ ಪಿಎಸ್‌ಯು ಗಳಾದ ಬಿಪಿಸಿಎಲ್, ರಕ್ಷಣಾ ವಲಯದ 41 ಆರ್ಡಿನೆನ್ಸ್ ಫ್ಯಾಕ್ಟರಿಗಳು, ಬಿಎಸ್‌ಎನ್‌ಎಲ್, ಏರ್ ಇಂಡಿಯಾ, ಸಾರಿಗೆ ಸೇರಿದಂತೆ 55 ಪಿಎಸ್‌ಯು ಗಳು ಹೀಗೆ ಈ ಸಂಸ್ಥೆಗಳನ್ನು ಹರಾಜು ಮತ್ತು 100 % ವಿದೇಶಿ ಬಂಡವಾಳದ ಮೂಲಕ ಖಾಸಗೀಕರಣದ ಉನ್ಮಾದಕ್ಕೆ ಒಡ್ಡಲಾಗುತ್ತಿದೆ.

*** ಸರ್ಕಾರಿ ಮತ್ತು ಪಿಎಸ್‌ಯುಗಳ ನೌಕರರ ಮೇಲಿನ ಅಕಾಲಿಕ ನಿವೃತ್ತಿಯ ಮೇಲಿನ ಕ್ರೂರ ಸುತ್ತೋಲೆ ಹಿಂತೆಗೆದುಕೊಳ್ಳಬೇಕು.**

ಈಗಾಗಲೇ ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ನೌಕರರ ಮೇಲಿನ ಒತ್ತಡವನ್ನು ಹೆಚ್ಚು ಮಾಡಲು ಅಥವಾ ಅವರಿಗೆ ಕೆಲಸ ಬಿಡಿಸಲು ಕೇಂದ್ರ ಸರ್ಕಾರ ಒಂದು ಸುತ್ತೋಲೆ ತಂದಿದೆ. ಅದರಲ್ಲಿ 50 ವರ್ಷ ವಯಸ್ಸಾದ ಅಥವಾ 30 ವರ್ಷ ಸೇವೆ ಸಲ್ಲಿಸಿದ ನೌಕರರ ಕಾರ್ಯದಕ್ಷತೆ ಕಡಿಮೆಯಾಗಿರುತ್ತದೆ ಆದ್ದರಿಂದ ಅಂತಹವರನ್ನು ಯಾವುದೇ ಪರಿಹಾರ ಕೊಡದೆ ಕೆಲಸದಿಂದ ಹೊರದಬ್ಬ ಬಹುದು. ಮತ್ತು ಕರ್ನಾಟಕ ರಾಜ್ಯ ಸರ್ಕಾರ ರಾಜ್ಯ ಸರ್ಕಾರಿ ನೌಕರರ ಕುಟುಂಬದವರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸಲಾಗಿದೆ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ 2020 ರಿಂದ 21 ಮಾರ್ಚ್ ರವರೆಗೆ ಕೊಡಬೇಕಾದ D.A ಕೊಡದಿರುವುದರಿಂದ ಒಬ್ಬೊಬ್ಬ ನೌಕರ ಕನಿಷ್ಠ 70 ಸಾವಿರದಿಂದ 2 1/2 ಲಕ್ಷದ ಹಣವನ್ನು ಕಳೆದುಕೊಂಡಿದ್ದಾರೆ. ಆದರೆ ಪ್ರಶ್ನಿಸುವ ಹಾಗಿಲ್ಲ.

ಎಲ್ಲರಿಗೂ ಪಿಂಚಣಿ ಒದಗಿಸಬೇಕು, ಎನ್‌ಪಿಎಸ್ ರದ್ದು ಮಾಡಬೇಕು, ಹಿಂದಿನ ಪಿಂಚಣಿ ಯೋಜನೆಯ ಪುನರ್‌ಸ್ಥಾಪನೆ ಮತ್ತು ಇಪಿಎಸ್–95ನ್ನು ಸುಧಾರಿಸಬೇಕು.

ಸಾರ್ವಜನಿಕ ಸೇವೆಯನ್ನು ಮಾಡುವ ಪ್ರತಿಯೊಬ್ಬ ಉದ್ಯೋಗಿ ತನ್ನ ವಿಶ್ರಾಂತ ಜೀವನವನ್ನು ಸಭ್ಯತೆಯಿಂದ ನಡೆಸುವ ಗ್ಯಾರಂಟಿಗೆ ಪಿಂಚಣಿ ವ್ಯವಸ್ಥೆಯನ್ನು ಒದಗಿಸಿದ್ದು, ಆದರೆ ಸರ್ಕಾರಗಳು ತಮ್ಮ ಪಾಲಿನ ಖರ್ಚನ್ನು ಕಡಿಮೆ ಮಾಡಿ ವಂತಿಗೆಯಾಧಾರಿತ ಮತ್ತು ಷೇರು ಮಾರುಕಟ್ಟೆಯಾಧಾರಿತ NPSನ್ನು ಪ್ರಾರಂಭಿಸಲಾಗಿದೆ. ಮಾತ್ರವಲ್ಲದೆ 20 ಸಾಮಾಜಿಕ ಸುರಕ್ಷತಾ ಕಾಯ್ದೆ ತಂದಿದ್ದರೂ ಅದಕ್ಕೆ ಬೇಕಾದ ಹಣಕಾಸನ್ನು ಒದಗಿಸಿಲ್ಲ. ಈಗಾಗಲೇ ಒಟ್ಟು ಸಂಖ್ಯೆಯ 30% ಹಿರಿವಯಸ್ಕರಿದ್ದಾರೆ,ಮುಂದಿನ 4–5 ವರ್ಷಗಳಲ್ಲಿ ಇದು 40%ಗೆ ಹೆಚ್ಚಳವಾದರೆ ದೇಶದ ಪರಿಸ್ಥಿತಿ ಅತ್ಯಂತ ಶೋಚನೀಯವಾಗುತ್ತದೆ. ಆದ್ದರಿಂದ ಹಳೆ ಪಿಂಚಣಿ ವ್ಯವಸ್ಥೆ ಎಲ್ಲರಿಗೂ 10 ಸಾವಿರ ಪಿಂಚಣಿಯನ್ನು ಗ್ಯಾರಂಟಿ ಮಾಡಬೇಕೆಂದೂ ಒತ್ತಾಯಿಸಲಾಗುತ್ತಿದೆ.

ಬಿಜೆಪಿ ಕೇಂದ್ರ ಸರಕಾರ ದೇಶದಲ್ಲಿ ಈಗ ನಿರ್ಮಿಸಿರುವ ಪರಿಸ್ಥಿತಿಯನ್ನು ಒಪ್ಪಲು ಕಾರ್ಮಿಕ ವರ್ಗಕ್ಕೆ ಸಾಧ್ಯವಿಲ್ಲ. ಇಂತಹ ನೀತಿಗಳಿಗೆ ಅಸಹಕಾರದ ರೂಪದಲ್ಲಿ ಹೆಚ್ಚಿನ ಸ್ವರೂಪದ ಪ್ರತಿರೋಧದ ಹೋರಾಟಕ್ಕೆ ಅದು ಅಣಿಯಾಗುತ್ತಿದೆ.. ನವೆಂಬರ್ 26ರ ಅಖಿಲ ಭಾರತ ಮುಷ್ಕರ ಈ ದಿಕ್ಕಿನಲ್ಲಿ ಒಂದು ಮಹತ್ವದ ಕಾರ್ಯಾಚರಣೆ. ಇದು ಈಗಾಗಲೇ ಅಕ್ಟೋಬರ್ 2 ರ ರಾಷ್ಟ್ರೀಯ ಸಮಾವೇಶದ ಘೋಷಣೆಯಲ್ಲಿ ಹೇಳಿರುವಂತೆ ಇನ್ನಷ್ಟು ತೀವ್ರ, ಪಟ್ಟುಬಿಡದ ಮತ್ತು ದೀರ್ಘ ಹೋರಾಟಗಳಿಗೆ ಸಿದ್ಧತೆಯಾಗಿದೆ. ○



ರೈತಾಪಿ ಕೃಷಿಯನ್ನು ಸರ್ವನಾಶ ಮಾಡುವ ಹುನ್ನಾರ..

ಪುಟ 9 ರಿಂದ

ಕಾಯ್ದೆ (ತಿದ್ದುಪಡಿ)2020. ಈ ಉದ್ದೇಶದಿಂದಲೇ ಅಖಿಲ ಭಾರತ ಕಿಸಾನ್ ಸಭಾ (AIKS), ಕೇಂದ್ರ ಸರ್ಕಾರಕ್ಕೆ ತನ್ನ ಅಭಿಪ್ರಾಯವನ್ನು ನೀಡುವ ಸಂದರ್ಭದಲ್ಲಿ "ಈ ಕಾಯ್ದೆ ರೈತರ ಮರಣ ಶಾಸನ" ವೆಂದು ಅದನ್ನು ಜಾರಿ ಮಾಡಬಾರದೆಂದು ಆಗ್ರಹಿಸಿದ್ದು.

ಈ 'ವಿದ್ಯುತ್ ಕಾಯ್ದೆ (ತಿದ್ದುಪಡಿ)–2020' ಕೇವಲ ಈ ಸಬ್ಸಿಡಿಗಳನ್ನು ರದ್ದು ಮಾಡುವುದಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ. ಇದಕ್ಕೂ ಗಂಭೀರವಾದ ಅಂಶಗಳನ್ನು ಒಳಗೊಂಡಿದೆ. ನಿಜ, ಕಾರ್ಷಿಕ ಬಿಕ್ಕಟ್ಟು ಕೊರೊನಾ–ಲಾಕ್‌ಡೌನ್, ಈ ಕಾಲಾವಧಿಯ ಕೇಂದ್ರ, ರಾಜ್ಯ ಸರ್ಕಾರಗಳ ಇತರೆ ನಿರ್ಧಾರಗಳು ರೈತರು, ಕೃಷಿ ಕೂಲಿಕಾರರು ಒಟ್ಟಾರೆ ದುಡಿಯುವ ಜನರನ್ನು ಗಂಭೀರವಾದ ಬಿಕ್ಕಟ್ಟಿಗೆ ತಳ್ಳಿವೆ. ಇಂತಹ ಸ್ಥಿತಿಯಲ್ಲಿ ರೈತರು, ಕೃಷಿ ಕೂಲಿಕಾರರಿಗೆ ಸಿಗುತ್ತಿರುವ ಉಚಿತ ವಿದ್ಯುತ್ ಇಲ್ಲವಾದರೆ ಕೃಷಿಯನ್ನು ನಡೆಸಲು ಸಾಧ್ಯವಿಲ್ಲದಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಕೋಟಿ ಕೋಟಿ ರೈತರು, ಕೂಲಿಕಾರರ ಕುಟುಂಬಗಳು ಬೀದಿಪಾಲಾಗುತ್ತವೆ. ಆಹಾರ ಭದ್ರತೆಗೆ ಧಕ್ಕೆ, ಬಡತನ, ಗ್ರಾಮೀಣ ನಿರುದ್ಯೋಗ, ವಿಪರೀತ ಹೆಚ್ಚಳವಾಗುತ್ತವೆ.

ಆದರೆ ಕೇಂದ್ರ ಸರ್ಕಾರ, ತಮಿಳುನಾಡು, ಪುದುಚೇರಿ, ಕೇರಳ, ಬಿಹಾರ್, ಜಾರ್ಖಂಡ, ತೆಲಂಗಾಣ, ಆಂಧ್ರಪ್ರದೇಶ ಇತ್ಯಾದಿ ರಾಜ್ಯಗಳು ಹಾಗು ಜನ ಚಳುವಳಿಗಳ ವಿರೋದದ ನಡುವೆಯೂ ಈ ಕಾಯ್ದೆಯನ್ನು ಜಾರಿ ಮಾಡಲು ಪಣತೊಟ್ಟು ನಿಂತಿದೆ. ಸಂವಿಧಾನದ ವಿರುದ್ದವಾಗಿ, ಸಮವರ್ತಿ ಪಟ್ಟಿಯಲ್ಲಿರುವ 'ವಿದ್ಯುತ್' ಗೆ ಸಂಬಂಧಿಸಿ, ಹಲವು ರಾಜ್ಯಗಳ 'ವಿದ್ಯುತ್ ನಿಯಂತ್ರಣ ಆಯೋಗ'ಗಳಲ್ಲಿನ ಸದಸ್ಯರ ಆಯ್ಕೆ, ಕೇಂದ್ರ ಸರ್ಕಾರ ಪ್ರಾತಿನಿಧ್ಯವನ್ನು ಪಡೆಯುವ ವಿಷಯವೂ ಸೇರಿದಂತೆ ರಾಜ್ಯ ಸರ್ಕಾರಗಳ ಹಲವು ಅಧಿಕಾರಗಳನ್ನು ಮೊಟಕು ಮಾಡಿ, ಈ ಕಾಯ್ದೆಯನ್ನು ಜಾರಿ ಮಾಡಿಯೇ ತೀರುತ್ತೇನೆ ಎಂದು ಕೇಂದ್ರ ಸರ್ಕಾರ ಮುಂದುವರೆಯುತ್ತಿದೆ. ಈ ಮೂಲಕ ಸಮಾಜದ ಆರ್ಥಿಕ ಸಾಮಾಜಿಕ ಪರಿವರ್ತನೆಯ ಅಗತ್ಯ ಸೇವೆಯಾಗಿದ್ದ ವಿದ್ಯುತ್‌ನ್ನು ಮಾರಾಟದ ಸರಕನ್ನಾಗಿ ಮಾಡಲು ತುದಿಗಾಲಿನ ಮೇಲೆ ನಿಂತಿದೆ.

ಇದಕ್ಕೆ ಮೂಲ ಕಾರಣ ಬಿಜೆಪಿ ಕೇಂದ್ರ ಸರ್ಕಾರದ ತೀರ ಹತ್ತಿರದ ಮಿತ್ರರಾದ ಅದಾನಿ, ಅಂಬಾನಿಗಳಂತಹ ಕಾರ್ಪೋರೇಟ್ ಕಂಪನಿಗಳನ್ನು ತೃಪ್ತಿ ಪಡಿಸುವುದು. 70 ದಶಕಗಳಿಂದ ಶೇಖರಣೆಗೊಂಡಿರುವ ಲಕ್ಷ ಲಕ್ಷ ಕೋಟಿಗಳ ಆಸ್ತಿಯನ್ನು ಮೂರು ಕಾಸಿಗೆ, ನಾಲ್ಕು ಕಾಸಿಗೆ ಧಾರೆ ಎರೆಯುತ್ತಿದೆ. ಈ ಖಾಸಗೀಕರಣದ ಫಲವಾಗಿ ಮುಂದಿನ ದಿನಗಳಲ್ಲಿ ಎಲ್ಲಾ ವಿಭಾಗದ ವಿದ್ಯುತ್ ದರಗಳು ಗಗನಕ್ಕೆ ಏರಲಿವೆ. ರೈತರು, ಕೃಷಿ ಕೂಲಿಕಾರರು ಇತ್ಯಾದಿ ಸಾಮಾನ್ಯ ಜನರು ವಿದ್ಯುತ್‌ನ್ನು ಬಳಸಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಾಣವಾಗಲಿದೆ. ಮತ್ತೆ ಬಡವರು 'ಕತ್ತಲಿಗೆ' ತಳ್ಳಲ್ಪಡುತ್ತಾರೆ. ಖಂಡಿತ ಇದು ಅತ್ಯಂತ ಹೇಯ, ದೇಶದ್ರೋಹದ ಕೆಲಸವಾಗಿದೆ. 'ದೇಶ ಪ್ರೇಮ'ವನ್ನು ಸಂಪೂರ್ಣ ಗುತ್ತಿಗೆ ಪಡೆದವರಂತೆ ಮಾತನಾಡುವ ಸಂಘ ಪರಿವಾರ, ಅದರ ನಾಯಕತ್ವದ ಬಿಜೆಪಿ ಕೇಂದ್ರ ಸರ್ಕಾರ ಆದಾನಿ, ಅಂಬಾನಿ ದೊರೆಗಳ ಗುಲಾಮರಾಗುತ್ತಿದ್ದಾರೆ. ಹೀಗಾಗಿ ಈ ಕಾಯ್ದೆಯನ್ನು ದೇಶ ಪ್ರೇಮಿಗಳು ಎಲ್ಲರೂ ಉಗ್ರವಾಗಿ ವಿರೋಧಿಸಬೇಕಿದೆ. ಇದಕ್ಕಾಗಿ ದೇಶದಲ್ಲಿ ಈಗಾಗಲೇ ಸುಮಾರು 500ಕ್ಕಿಂತ ಹೆಚ್ಚಿನ ರೈತ ಸಂಘಟನೆಗಳು, ಎಐಕೆಎಸ್‌ಸಿಸಿ ನಾಯಕತ್ವದಲ್ಲಿ ಒಟ್ಟುಗೂಡಿ, ಸಮರವನ್ನು ಸಾರಿವೆ. ಗ್ರಾಮೀಣ ಜನತೆಯಲ್ಲಿ ಜಾಗೃತಿ ಮೂಡಿಸಿ, ಈ ಹೋರಾಟವನ್ನು ಪಕ್ಷಾತೀತ ವಿಶಾಲವಾದ ಸಮರಧೀರ ಹೋರಾಟವನ್ನಾಗಿ ಕಟ್ಟೋಣವೆಂದು ಪ್ರತಿಜ್ಞೆ ಮಾಡಬೇಕಿದೆ.

ಈ ಹೋರಾಟದಲ್ಲಿ ನಾವು ಏಕಾಂಗಿಯಲ್ಲ, ನಮ್ಮ ಜೊತೆಗೆ ಇತರೆ ರೈತ, ಕೃಷಿ ಕೂಲಿಕಾರರ ಸಂಘಟನೆಗಳು ಮಾತ್ರವಲ್ಲ ಕಾರ್ಮಿಕ ಸಂಘಟನೆಗಳು, ವಿದ್ಯುತ್ ಇಲಾಖೆಗಳಲ್ಲಿ ದುಡಿಯುತ್ತಿರುವ ನೌಕರರು, ಅಧಿಕಾರಿಗಳು, ಸಣ್ಣ, ಮಧ್ಯಮ ಕೈಗಾರಿಕೆಯ ಮಾಲೀಕರು ಸೇರಿಕೊಳ್ಳಲಿದ್ದಾರೆ.

ಬಿಜೆಪಿಯ ಆಳ್ವಿಕೆಯ ಉತ್ತರ ಪ್ರದೇಶದ ರಾಜ್ಯ ಸರ್ಕಾರ ವಿದ್ಯುತ್ ಕ್ಷೇತ್ರ ಖಾಸಗೀಕರಣಕ್ಕೆ ಮುಂದಾದಾಗ ವಿದ್ಯುತ್ ಇಲಾಖೆಯ ನೌಕರರು ಮತ್ತು ಅಧಿಕಾರಿಗಳು ನಡೆಸಿದ ಹೋರಾಟ ಐತಿಹಾಸಿಕವಾದದ್ದು. ರಾಜ್ಯ ಸರ್ಕಾರದ ಜನವಿರೋಧಿ ನೀತಿಯ ವಿರುದ್ಧ ರಾಜ್ಯದ ಪೊಲೀಸ್ ಮತ್ತು ಪ್ಯಾರಮಿಲಿಟರಿ ದೌರ್ಜನ್ಯವನ್ನು ಲೆಕ್ಕಿಸದೆ ರಾಜ್ಯದ ಪ್ರಜಾಸತಾತ್ಮಕ ಶಕ್ತಿಗಳ ಬೆಂಬಲದೊಂದಿಗೆ ನಡೆದ ಹೋರಾಟಕ್ಕೆ ಕೊನೆಗೂ ಬಿಜೆಪಿ ಸರ್ಕಾರ ಮಣಿಯಬೇಕಾಯಿತು. ವಿದ್ಯುತ್ ಖಾಸಗೀಕರಣದ ವಿರುದ್ದದ ಹೋರಾಟದಲ್ಲಿ ಇದು ಮಹತ್ವದ ಬೆಳವಣಿಗೆ,

'ವಿದ್ಯುತ್ ಕಾಯ್ದೆ (ತಿದ್ದುಪಡಿ)–2020' ರ ವಿರುದ್ಧ ನಡೆಯುವ ಹೋರಾಟ ಪ್ರತ್ಯೇಕವಾದ ಹೋರಾಟವಲ್ಲ. ಇಡೀ ರೈತಾಪಿ ಕೃಷಿಯನ್ನು ಸರ್ವನಾಶ ಮಾಡಿ, ಕಾರ್ಪೋರೇಟ್ ಕೃಷಿಯನ್ನು ಜಾರಿ ಮಾಡಲು ಹೊರಟಿರುವ ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ನಡೆಯುತ್ತಿರುವ ಒಟ್ಟಾರೆ ಚಳುವಳಿಯ ಭಾಗವೇ ಆಗಿದೆ. ಹೀಗಾಗಿ "ಕಾರ್ಪೋರೇಟ್ ಕೃಷಿ"ಯನ್ನು ಹಿಮ್ಮೆಟ್ಟಿಸಿ, 'ರೈತಾಪಿ ಕೃಷಿ'ಯನ್ನು ರಕ್ಷಿಸಿ, 'ಸಹಾಕಾರಿ ಕೃಷಿ'ಯನ್ನು ಪ್ರೋತ್ಸಾಹಿಸಿ ಎನ್ನುವುದು ನಮ್ಮ ಕೇಂದ್ರ ಘೋಷಣೆಯಾಗಬೇಕಿದೆ.

ಪ್ರಸಕ್ತ

ನನ್ನ ಆಯ್ಕೆ ನನ್ನ ಹಕ್ಕು ಅನ್ಯರಿಗಿಲ್ಲಿ ಅವಕಾಶವಿಲ್ಲ, ಭಿನ್ನ ರಾಗ ಬೇಕಿಲ್ಲ

ಕೆ.ಎಸ್. ವಿಮಲ



ಈಗ ಕೂಗೇಳಬೇಕು ಪರಸ್ಪರ ಪ್ರೀತಿಸಿ ವಿವಾಹ ವಯಸ್ಕ ಯುವಜನರು ಮದುವೆಯಾಗ ಬಯಸಿದರೆ ಯಾವುದೇ ವಿಳಂಬವಿಲ್ಲದೇ ಸುರಕ್ಷಿತವಾಗಿ ಮತ್ತು ಶೀಘ್ರವಾಗಿ ಮದುವೆಯಾಗಲು ಅವಕಾಶ ಕಲ್ಪಿಸಿ ವಿಶೇಷ ವಿವಾಹ ಕಾಯ್ದೆಗೆ ತಕ್ಷಣ ತಿದ್ದುಪಡಿ ತರಬೇಕು. ಯುವಜನರ ಸಂಗಾತಿ ಆಯ್ಕೆಯ ಹಕ್ಕನ್ನು ಕಾಪಾಡುವ ಮತ್ತು ಅದನ್ನು ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಈಗ ಬೇಕಿರುವುದು. ದೇಶದ ಜಾತ್ಯಾತೀತ ಗುಣ ಲಕ್ಷಣಗಳನ್ನು ಉಳಿಸುವತ್ತ ಇದೂ ಒಂದು ಹೆಜ್ಜೆ ಎಂಬುದು ಸರಳ ಮತ್ತು ಸಹಜ ಸತ್ಯ. ದೇಶದ ಸಂವಿಧಾನವನ್ನು ಗೌರವಿಸಲು ಮೊದಲು ಕಲಿಯಿರಿ ಎಂಬುದೇ ಭೋಗಿಗಳ ರಾಜ್ಯವನ್ನಾಳುತ್ತಿರುವ ಯೋಗಿಗೂ ಮತ್ತು ಮಹಿಳಾ ವಿರೋಧೀ ಸಾಂಕ್ರಾಮಿಕ ರೋಗ ಪೀಡಿತ ಬಿ.ಜೆ.ಪಿಗರಿಗೂ ತಿಳಿಸುವುದೇ ಮಾರ್ಗ ಉಳಿದಿರುವುದು.

ಕಾನೂನು ಕುಣಿಕೆಯಾಗಿ ಬಿಡುವ, ಎತ್ತ ಎಳೆದರೂ ಸುತ್ತಿ ಸಾಯಿಸಿಬಿಡುವಂತೆ ಅಸ್ತ್ರವನ್ನಾಗಿ ಮಾಡಿಕೊಳ್ಳುವ ವಿಪರೀತಗಳ ನಡುವೆ ನಾವಿದ್ದೇವೆ. ತಪ್ಪು ಮಾಡುವವರನ್ನು ಶಿಕ್ಷಿಸುವ ಸಲುವಾಗಿ ಸರಿ ತಪ್ಪುಗಳ ಮಧ್ಯೆ ನಿಖರ ರೇಖೆಗಳನ್ನು ಎಳೆಯುವ ಸಾಧನವಾಗಬೇಕಾದ ಕಾನೂನನ್ನು ತಮಗೆ ಬೇಕಾದ ಹಾಗೆ ಅರ್ಥೈಸಿಕೊಂಡು ಬಿಡುವ ಪ್ರವೃತ್ತಿ ಕೂಡಾ ನಮಗೆ ಹೊಸದಲ್ಲ. ಆಗಾಗ್ಗೆ ಇಂಥಹವುಗಳು ನಡೆಯುತ್ತಲೇ ಇವೆ. ಬಹುತೇಕ ಸಂದರ್ಭಗಳಲ್ಲಿ ಹೀಗೆ ನಡೆಯುವುದು, ಮಹಿಳೆಯರು ಮತ್ತು ಒಂದಲ್ಲ ಒಂದು ರೀತಿಯಲ್ಲಿ ಟಾರ್ಗೇಟೆಡ್ ವಲಯದಲ್ಲಿಯೇ ಇರುವ ಅಲ್ಪ ಸಂಖ್ಯಾತ ಮತ್ತು ದಮನಿತ ವಿಭಾಗವನ್ನು ಕೇಂದ್ರೀಕರಿಸಿ, ಎಂಬುದನ್ನೂ ಗಮನಿಸಬೇಕಿದೆ.


ಇತ್ತೀಚೆಗೆ ಉತ್ತರ ಪ್ರದೇಶದ ಒಂದು ಪ್ರಕರಣ. ವಯೋಸಹಜ ಪ್ರೀತಿ ಆಕರ್ಷಣೆ ಮತ್ತು ಬೆಳೆದ ಒಲವು ವಿವಾಹದಲ್ಲಿ ಅಂತ್ಯವಾಗಿದೆ. ಪ್ರೀತಿಗೆ ಜಾತಿ ಧರ್ಮ ವರ್ಗ ಅಂತಸ್ತುಗಳ ಹಂಗಿಲ್ಲ. ಅಂಥಹ ಒಂದು ಪ್ರೀತಿ ಮಾಡಿದ ಯುವತಿ ಮತ್ತು ಯುವಕ ಈ ಸಮಾಜದ ರೀತಿನೀತಿಗಳ ನೆಲೆಯಲ್ಲಿ ಅಂತರ್ಧರ್ಮೀಯರು. ಯುವತಿ ಮುಸ್ಲಿಂ, ಯುವಕ ಹಿಂದೂ. ಯುವತಿ ಹಿಂದೂ ಧರ್ಮಕ್ಕೆ ಮತಾಂತರಗೊಂಡಳು, ಮತ್ತು ಮದುವೆಯಾದಳು. ಮದುವೆಯಾದ ನಂತರ ಜೀವಕ್ಕಿರುವ ಭೀತಿಯ ಕಾರಣದಿಂದ ತಮ್ಮ ಬದುಕಿಗೆ ರಕ್ಷಣೆ ಬೇಕೆಂದು ಅಲಹಾಬಾದ್ ಕೋರ್ಟಿಗೆ ಮೊರೆ ಹೋದರು. ಕೋರ್ಟು ರಕ್ಷಣೆಯನ್ನು ನಿರಾಕರಿಸಿ ಮದುವೆಗಾಗಿ ಮತಾಂತರಗೊಳ್ಳುವುದು ಸ್ವೀಕಾರಾರ್ಹವಲ್ಲ ಎಂದಿದೆ. ಅದಕ್ಕೆ ಈ ಮೊದಲಿನ ತನ್ನ ತೀರ್ಪನ್ನು ಉಲ್ಲೇಖಿಸಿದೆ. ಮತಾಂತರ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಕುರಿತು ಅಂತ್ಯವಾಗದ ಹಲವು ಚರ್ಚೆಗಳು ನಡೆಯುತ್ತಲೇ ಇವೆ. ಎಲ್ಲಿಯ ವರೆಗೆ ಜನರಿಗಿರುವ ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವ ಮತ್ತು ಧರ್ಮ, ಜಾತಿ ಆಚರಣೆಗಳ ನಂಬಿಕೆಗಳು ಅವರವರ ಇಷ್ಟಕ್ಕೇ ಬಿಟ್ಟಿದ್ದು ಮತ್ತು ಅದರಲ್ಲಿ ಇತರರ, ಸರಕಾರಗಳ ಮಧ್ಯ ಪ್ರವೇಶದ ಅಗತ್ಯ ಅಥವಾ ಅವಕಾಶ ಎರಡೂ ಇರಕೂಡದೆಂಬ ದೃಢ ನಿರ್ಧಾರಕ್ಕೆ ಬಂದು ಆಚರಣೆಗೆ ಬರದ ಹೊರತೂ ಇದು ಬಗೆಹರಿಯುವುದಿಲ್ಲ.

ಆದರೆ ಈಗ ಎದ್ದಿರುವ ಪ್ರಶ್ನೆ, ಅಲಹಾಬಾದ್ ನ್ಯಾಯಾಲಯ ಸಹಾಯ ಕೋರಿ ಬಂದವರಿಗೆ ರಕ್ಷಣೆ ನಿರಾಕರಿಸಿ ಮದುವೆಯನ್ನೇ ಗುರಿಯಾಗಿಸಿಕೊಂಡು ನಡೆಯುವ ಮತಾಂತರ ಸರಿಯಲ್ಲವೆಂದಿತು. ಇದು ನ್ಯಾಯದ ಕಟಕಟೆಯಲ್ಲಿ ಚರ್ಚೆಯಾಗಬೇಕಾದ ಸಂಗತಿ. ಆದರೆ ಇದನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಬಿ.ಜೆ.ಪಿಗರು ಥಟ್ಟನೆ ಇಳಿದಿದ್ದೇ ಎಚ್ಚರಿಕೆಯ ಘಂಟೆಯಾಗಬೇಕು. ರಾಜ್ಯದಲ್ಲಿ ಮಹಿಳೆಯರು, ಅದರಲ್ಲಿಯೂ ದಲಿತ ಸಮುದಾಯದ ಮಹಿಳೆಯರ ಮೇಲೆ ತೀವ್ರ ತೆರನ ದೌರ್ಜನ್ಯಗಳು ನಡೆಯುತ್ತಿರುವಾಗ ಅದರತ್ತ ಗಮನ ಹರಿಸದ ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಮತ್ತವರ ಸರಕಾರ ಈ ವಿಷಯದತ್ತ ಅತೀವ ಗಮನ ಕೊಡುತ್ತಿದೆ. ತಮ್ಮ ರಾಜ್ಯದಲ್ಲಿ ಮದುವೆಗಾಗಿ ನಡೆಯುವ ಮತಾಂತರ ನಿಷೇಧವನ್ನು ವಿರೋಧಿಸುವವರು 'ರಾಮ ನಾಮ್ ಸತ್ಯ ಹೈ' (ಅಂದರೆ ಮಸಣಕ್ಕೆ ಅಟುತ್ತೇವೆ ಅಂತ) ಆಗಬೇಕಾದೀತು ಎಂದು ಸಂವಿಧಾನದ ವಿಧಿಯ ಮೇಲೆ ಪ್ರಮಾಣ ಮಾಡಿ ಅಧಿಕಾರ ಸ್ವೀಕರಿಸಿದ ವ್ಯಕ್ತಿ ಸಾರ್ವಜನಿಕ ಸಭೆಯೊಂದರಲ್ಲಿ ಹೇಳುತ್ತಾರೆ! ಸಾಂಕ್ರಾಮಿಕ ಅಲ್ಲಿಗೇ ಸೀಮಿತವಾಗಿ ಉಳಿಯದೇ ಇತರ ಬಿ.ಜೆ.ಪಿ ಅಧಿಕಾರದ ರಾಜ್ಯಗಳಾದ ಮಧ್ಯಪ್ರದೇಶ ಹರ್ಯಾಣಾಗಳು ಧ್ವನಿ ಸೇರಿಸಿದವು. ಸಾಲದೆಂಬಂತೆ ಆ ರಾಜ್ಯಗಳಿಗೆ ಹೋಲಿಸಿದಲ್ಲಿ 'ಮುಂದುವರೆದ' ಎನ್ನುವ ಹಣೆಪಟ್ಟಿಯನ್ನು ಹೊತ್ತ ಕರ್ನಾಟಕದಲ್ಲಿಯೂ ಮದುವೆಗಾಗಿ ನಡೆಯುವ ಮತಾಂತರವನ್ನು ನಿಷೇಧಿಸುವ ಕಾನೂನು ತರುವುದಾಗಿ ಸ್ವತಃ ಮುಖ್ಯಮಂತ್ರಿಗಳೆ ಹೇಳಿಕೆ ನೀಡಿದರು. ಇದರ ಮೊದಲು ಅಂದಿನ ಸಂಸ್ಕೃತಿ ಸಚಿವರು ಅವರ ಧ್ವನಿಗೆ ಪ್ರತಿಧ್ವನಿಯಾಗಿ ಗೃಹ ಸಚಿವರು ಕೂಡಾ ಇದೇ ಮಾತು ಹೇಳಿದ್ದರು. ಅಲ್ಲದೇ ಅದೇ ಹೊತ್ತಿಗೆ ನಡೆದ ಬಿ.ಜೆ.ಪಿ ಯ ಕಾರ್ಯಕಾರಿಣಿ ಕೂಡಾ ಅಂಥಹ ಒಂದು ಪ್ರಸ್ತಾಪವನ್ನು ಚರ್ಚೆ ಮಾಡಿದೆ.

ಮದುವೆಯ ಆಮಿಷ ಮತ್ತು ಪ್ರೀತಿಯ ನಾಟಕ ಮತಾಂತರಕ್ಕೆ ಎಂದು ತೀರ್ಮಾನ ಮಾಡುವವರು ಯಾರು? ಧರ್ಮ ಜಾತಿ ಕುಲ ಗೋತ್ರಗಳ ಹಂಗಿಲ್ಲದೇ ಹುಟ್ಟುವ ಪ್ರೀತಿ ಮದುವೆಯಲ್ಲಿ ಪರ್ಯಾವಸಾನವಾಗುವುದು ಈ ಸಮಾಜಕ್ಕೆ ಹೊಸತೇನಲ್ಲ. ಆದರೆ ಅದು ಅಂತರ್ಧರ್ಮೀಯವಾದಾಗ ಅದಕ್ಕೊಂದು ಬಳಕೆಯಲ್ಲಿಲ್ಲದ 'ಲವ್ ಜಿಹಾದ್' ಎಂಬ ಶಬ್ದವನ್ನೇ ಟಂಕಿಸಿ ಅಲ್ಪ ಸಂಖ್ಯಾತ ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿ ಸುಳ್ಳು ಸುದ್ದಿಗಳನ್ನು ಹರಡಿದ ರಾಜ್ಯ ನಮ್ಮದೆಂಬ ಕುಖ್ಯಾತಿ ನಮಗಿದೆ.

ಸೈನೈಡ್ ಮೋಹನ್ ಮತ್ತು ಲವ್ ಜಿಹಾದ್!! ಎಂಬ ಹುಯ್ಲು

2005–06ರ ಸಂದರ್ಭದಲ್ಲಿಯೇ ಸರಣಿ ಅತ್ಯಾಚಾರ ಮಾಡಿ ಮತ್ತು ಸೈನೈಡ್ ತಿನ್ನಿಸಿ 20 ಮಹಿಳೆಯರನ್ನು ಒಬ್ಬ ಮೋಹನ್ ಎಂಬ ವ್ಯಕ್ತಿ ಕೊಲೆ ಮಾಡಿದ್ದ. ದಿಕ್ಕು ದೆಸೆಯಿಲ್ಲದ ಬಸ್ ಸ್ಟ್ಯಾಂಡ್ ಗಳಲ್ಲಿ ಸಾರ್ವಜನಿಕ ಶೌಚಾಲಯಗಳಲ್ಲಿ ಸಿಕ್ಕ ಹೆಣಗಳ ಬಗ್ಗೆ ಹೆಚ್ಚೇನೂ ತಲೆಕೆಡಿಸಿಕೊಳ್ಳದ ಪೋಲೀಸ್ ಇಲಾಖೆ ಅಸಹಜ ಅಪರಿಚಿತ ವ್ಯಕ್ತಿ ಎಂದು ಶವ ಸಂಸ್ಕಾರ ಮಾಡಿ ಹಾಕಿದ ಪ್ರಕರಣಗಳನ್ನು ಅಲ್ಪ ಸಂಖ್ಯಾತ ಯುವಕರು ಮತಾಂತರ ಮಾಡಲು ಕದ್ದೊಯ್ದಿದ್ದಾರೆಂದು ಸುದ್ದಿ ಹರಡಿ ಗದ್ದಲ ಎಬ್ಬಿಸಿದ್ದರು. ಸೈನೈಡ್ ಮೋಹನನಿಂದ ಅನ್ಯಾಯಕ್ಕೊಳಗಾದ ಮಹಿಳೆಯರ ಪ್ರಕರಣಗಳಲ್ಲಿ ಸಂಘಿಗಳು, ಅವರೆಲ್ಲರನ್ನೂ ಮುಸ್ಲಿಂ ಯುವಕರು ಆಕರ್ಷಿಸಿ ಮತಾಂತರ ಮಾಡಲೆಂದೇ ಪ್ರೀತಿಯ ನಾಟಕವಾಡುತ್ತಿದ್ದಾರೆಂದರು. ಇಸ್ಲಾಂ ನಲ್ಲಿ ಬಳಕೆಯಲ್ಲಿಲ್ಲವೆಂದು ಹೇಳಲಾಗುವ 'ಲವ್ ಜಿಹಾದ್' ಎಂಬ ಶಬ್ದವನ್ನು ಟಂಕಿಸಿದ್ದರು. ಆದರೆ ಅವರದೇ ಹೋರಾಟದ ಕಾರಣದಿಂದ ಪೋಲೀಸ್ ತನಿಖೆ ಚುರುಕುಗೊಂಡು ಸತ್ಯ ಹೊರಬಿದ್ದಿತ್ತು. ಮತ್ತು ಆ ವ್ಯಕ್ತಿಯ ಮೇಲಿದ್ದ ಪ್ರತಿ ಆರೋಪಕ್ಕೂ ಜೀವಾವಧಿ ಮತ್ತು ಒಮ್ಮೆ ಮರಣ ದಂಡನೆಯ ಶಿಕ್ಷೆ ಎಂಬ ತೀರ್ಪು ಬಂತು. ಇಷ್ಟೆಲ್ಲ ಆದರೂ ತಮ್ಮ ಚಾಳಿಯನ್ನು ಬಿಡದ ಸಂಘಿಗಳು ಆಗಾಗ್ಗೆ ಅದೇ ಜಾಡಿನಲ್ಲಿ ಮಾತನಾಡುತ್ತಲೇ ಇದ್ದಾರೆ. ಅದಕ್ಕೆ ಇಂಬು ಕೊಡುವಂತೆ ಆಗಾಗ್ಗೆ ನ್ಯಾಯಾಲಯದ ತೀರ್ಪುಗಳೂ ಬರುತ್ತಿವೆ. ದೇಶದ ಗೃಹಮಂತ್ರಾಲಯದಲ್ಲಿ ಕೂಡ ಲವ್ ಜಿಹಾದ್ ನಡೆದ ಬಗ್ಗೆ ಯಾವುದೇ ಪುರಾವೆಗಳಿಲ್ಲ. ಹಾಗೆಯೇ ಎನ್.ಐ.ಏ ಕೂಡಾ ಕೇರಳದ ಹಾದಿಯಾ ಪ್ರಕರಣದಲ್ಲಿ ಲವ್ ಜಿಹಾದ್ ನ್ನು ಸಾಬೀತು ಪಡಿಸಲು ವಿಫಲವಾಗಿದೆ.



ನಮ್ಮ ಸಂವಿಧಾನದ ಕಲಮು 25 ರಿಂದ 28 ರ ವರೆಗೆ ಧಾರ್ಮಿಕ ಸ್ವಾತಂತ್ರ ಮತ್ತು ಧರ್ಮ ಪ್ರಚಾರದ ಅವಕಾಶಗಳ ಹಕ್ಕು ನೀಡಿದೆ. ಅದೇ ಹಕ್ಕಿನ ಬಗ್ಗೆ ಮಾತನಾಡುತ್ತಲೇ ಹಲವಾರು ಪ್ರಕರಣಗಳಲ್ಲಿ ಪ್ರಲೋಭನೆ ಆಸೆ ಆಮಿಷಗಳಿಗೆ ಬಲಿಯಾಗಿ ಆತ್ಮ ಸಾಕ್ಷಿಗೆ ವ್ಯತಿರಿಕ್ತವಾಗಿ ಮತಾಂತರಗೊಳ್ಳುವುದನ್ನು ಒಪ್ಪುವುದಿಲ್ಲ ಎಂದಿದೆ. ಇಲ್ಲಿರುವ ಪ್ರಶ್ನೆ ವಯಸ್ಕ ವ್ಯಕ್ತಿ ತನ್ನ ಇಚ್ಛೆಯ ವಿವಾಹ, ತನ್ನ ಆಯ್ಕೆಯ ಕೆಲಸ, ವ್ಯಾಪಾರ ವ್ಯವಹಾರ, ಧಾರ್ಮಿಕ ಆಚರಣೆಗಳಿಗೆ ಅವಕಾಶ ಕೊಟ್ಟ ಮೇಲೆ ಅಂತರ್ಧರ್ಮೀಯ ಎಂಬ ಒಂದೇ ಕಾರಣಕ್ಕೆ ಅದನ್ನು ಒಪ್ಪಲಾರದ ಸಂದಿಗ್ದತೆಯನ್ನೇಕೆ ಸೃಷ್ಟಿಸುವುದು ಎಂಬುದಕ್ಕೆ ಪರಿಹಾರ ಕ್ರಮವೇನು? ತಮ್ಮ ಇಚ್ಛೆಯಂತೆಯೇ ಮದುವೆಯಾದೆನೆಂದು ವಯಸ್ಕ ಯುವ ಜೋಡಿ ಹೇಳಿದ ಮೇಲೂ ಅದಕ್ಕನುಗುಣವಾಗಿ ಅವರಿಗೆ ಅಗತ್ಯವಿದ್ದ ಜೀವ ರಕ್ಷಣೆಯ ವ್ಯವಸ್ಥೆ ನೀಡುವುದು ಭಾರತದ ಸಂವಿಧಾನದ ಅಡಿಯ ಅಗತ್ಯವೆನಿಸುವುದಿಲ್ಲವೇ?

ಆದರೆ ಈಗ ನಮ್ಮ ರಾಜ್ಯವೂ ಸೇರಿದಂತೆ ಇತರ ಬಿ.ಜೆ.ಪಿ. ಅಧಿಕಾರದ ಸರಕಾರಗಳು ಇದನ್ನೇ ನೆಪವಾಗಿಸಿಕೊಂಡು ತರಹೊರಟಿರುವ ಕಾನೂನು ಮಹಿಳೆಯರ ಮತ್ತು ಯುವಜನರ ಆಯ್ಕೆ ಸ್ವಾತಂತ್ರ್ಯದ ಮೇಲೆ ನೇರ ಪ್ರಹಾರವಾಗಲಿದೆ. ಮಹಿಳೆಯರ ಶೋಷಣೆಯನ್ನು ತಡೆಗಟ್ಟುವ ಹೆಸರಿನಲ್ಲಿ ಕಾನೂನು ತರುವ ಮಾತಾಡುತ್ತಿರುವ ಬಿ.ಜೆ.ಪಿಗರಿಗೆ ನಿಜವಾಗಿ ಮಹಿಳೆಯರ ಮೇಲಾಗುತ್ತಿರುವ ಶೋಷಣೆಗಳ ಬಗ್ಗೆ ಕಾಳಜಿ ಇದೆಯೇ? ಹಾಗಿದ್ದರೆ ನಿರಂತರವಾಗಿ ನಡೆಯುತ್ತಿರುವ ಅತ್ಯಾಚಾರ ದೌರ್ಜನ್ಯಗಳ ಕುರಿತ ಗಂಭೀರ ಕ್ರಮಕ್ಕೆ ಯಾಕೆ ಮುಂದಾಗುತ್ತಿಲ್ಲ? ನಮ್ಮದೇ ರಾಜ್ಯದಲ್ಲಿ ಕಳೆದ ಎರಡು ತಿಂಗಳಲ್ಲಿ ನಡೆದ ಮರ್ಯಾದೆಗೇಡು ಹತ್ಯೆಗಳು ಯಾಕೆ ಸಿ.ಟಿ.ರವಿಯವರಿಗಾಗಲಿ, ಮಾನ್ಯ ಗೃಹ ಮಂತ್ರಿ ಬಸವರಾಜ ಬೊಮ್ಮಾಯಿ ಯವರಿಗಾಗಲಿ ಅಥವಾ ಸ್ವತಃ ಮುಖ್ಯಮಂತ್ರಿಗಳಿಗಾಗಲಿ ನಿದ್ದೆಗೆಡಿಸಲಿಲ್ಲ. ರಾಷ್ಟ್ರೀಯ ಮಹಿಳಾ ಸಂಘಟನೆಗಳು ಮರ್ಯಾದೆಗೇಡು ಹತ್ಯೆಗಳನ್ನು ನಿಲ್ಲಿಸಲು, ಅಪರಾಧಿಗಳ ಮೇಲೆ ಕಠಿಣ ಕ್ರಮಕೈಗೊಳ್ಳಲು ಸಾಧ್ಯವಾಗುವಂತೆ ಕಾನೂನು ರೂಪಿಸಲು ಕೇಳುತ್ತಲೆ ಇವೆ. ಮಾನ್ಯ ಕರ್ನಾಟಕ ಘನ ಸರಕಾರವು ಅಂತಹ ಒಂದು ರಾಜ್ಯ ಕಾನೂನು ತಂದು ಇತರರಿಗೆ ಮಾದರಿಯಾಗಬಹುದಲ್ಲ. ಮಹಿಳಾ ಪರ ಕಾಳಜಿ ಉಕ್ಕಿ ಹರಿಯುತ್ತಿರುವ ಮಾನ್ಯ ಸಿ.ಟಿ.ರವಿಯವರು ಅತ್ತಲೂ ಗಮನ ಹರಿಸಿದರೆ ಹಣದ ಸೊಕ್ಕು, ಜಾತಿಯ ಮದ, ಅಂತಸ್ತಿನ ಅಹಂಕಾರದಲ್ಲಿ ಅಂಧರಾಗಿ ಕರುಳಿನ ಕುಡಿಗಳನ್ನೇ ಹತ್ಯೆಗೈಯುವ ಪಾತಕಿಗಳಾಗುವವರಿಗೆ ಎಚ್ಚರಿಕೆಯ ಸಂದೇಶ ರವಾನಿಸಬಹುದಲ್ಲ.

ಮರ್ಯಾದೆಗೇಡು ಹತ್ಯೆ ತಡೆಯಲು ಕಾನೂನು ಬೇಕು, ಇಲ್ಲದ 'ಲವ್–ಜಿಹಾದ್'ಗಲ್ಲ!

ಕಳೆದ ತಿಂಗಳು ರಾಮನಗರ ಜಿಲ್ಲೆಯಲ್ಲಿ ನಡೆದ ಅನ್ಯಾಯದ ಹತ್ಯೆ ಮತ್ತು ಅದಕ್ಕೆ ಅತ್ಯಾಚಾರದ ಸುಳ್ಳು ಆರೋಪಗಳು ತಮ್ಮ ಸರಕಾರಕ್ಕೆ ಮೆತ್ತುವ ಕಳಂಕವೆಂದು ಶುದ್ಧಾಂಗ ಸಚ್ಚಾರಿತ್ರ್ಯದ ಧರ್ಮ ಪ್ರತಿಪಾದಕರಿಗೇಕೆ ಅನಿಸಲಿಲ್ಲವೆಂಬ ಪ್ರಶ್ನೆಗೆ ಉತ್ತರ ಸಿಕ್ಕೀತೆ. ನ್ಯಾಯದಾನದ ಭಾಗವಾಗಿಯೇ ನಿರ್ಭಯಾ ಪ್ರಕರಣದ ನಂತರ ಜಸ್ಟೀಸ್ ವರ್ಮಾ ಆಯೋಗ ಕೊಟ್ಟ ಶಿಫಾರಸ್ಸುಗಳನ್ನು ಮಾನ್ಯ ಮಾಡಿ ಜಾರಿಗೆ ತಂದಿದ್ದರೂ ಮಹಿಳೆಯರ ಮೇಲಿನ ಶೋಷಣೆಯ ಬಹುಪಾಲು ನಿಯಂತ್ರಣ ಸಾಧ್ಯವಾಗುತ್ತಿತ್ತು. ಆದರೆ ಅಲ್ಲಿಲ್ಲದ ತರಾತುರಿ ಇಲ್ಲೇಕೆ ಎಂದರೆ ಇದು ಅವರ ಘೋಷಿತ ಅಜೆಂಡಾದ ಭಾಗವಾಗಿ, ಜನರಲ್ಲಿ ಧಾರ್ಮಿಕ ಭಾವನೆಗಳನ್ನು ಬಡಿದೆಬ್ಬಿಸಿ ಗದ್ದಲ ಎಬ್ಬಿಸುವ ಕುತ್ಸಿತ ರಾಜಕಾರಣದ ಭಾಗವೆಂದು ಯಾರಿಗೂ ಅರ್ಥವಾಗುತ್ತದೆ.

ಇದಕ್ಕಾಗಿಯೇ ಈಗ ಕೂಗೇಳಬೇಕು ಪರಸ್ಪರ ಪ್ರೀತಿಸಿ ವಿವಾಹ ವಯಸ್ಕ ಯುವಜನರು ಮದುವೆಯಾಗ ಬಯಸಿದರೆ ಯಾವುದೇ ವಿಳಂಬವಿಲ್ಲದೇ ಸುರಕ್ಷಿತವಾಗಿ ಮತ್ತು ಶೀಘ್ರವಾಗಿ ಮದುವೆಯಾಗಲು ಅವಕಾಶ ಕಲ್ಪಿಸಿ ವಿಶೇಷ ವಿವಾಹ ಕಾಯ್ದೆಗೆ ತಕ್ಷಣ ತಿದ್ದುಪಡಿ ತರಬೇಕು. ಯುವಜನರ ಸಂಗಾತಿ ಆಯ್ಕೆಯ ಹಕ್ಕನ್ನು ಕಾಪಾಡುವ ಮತ್ತು ಅದನ್ನು ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಈಗ ಬೇಕಿರುವುದು. ದೇಶದ ಜಾತ್ಯಾತೀತ ಗುಣ ಲಕ್ಷಣಗಳನ್ನು ಉಳಿಸುವತ್ತ ಇದೂ ಒಂದು ಹೆಜ್ಜೆ ಎಂಬುದು ಸರಳ ಮತ್ತು ಸಹಜ ಸತ್ಯ. ದೇಶದ ಸಂವಿಧಾನವನ್ನು ಗೌರವಿಸಲು ಮೊದಲು ಕಲಿಯಿರಿ ಎಂಬುದೇ ಭೋಗಿಗಳ ರಾಜ್ಯವನ್ನಾಳುತ್ತಿರುವ ಯೋಗಿಗೂ ಮತ್ತು ಮಹಿಳಾ ವಿರೋಧೀ ಸಾಂಕ್ರಾಮಿಕ ರೋಗ ಪೀಡಿತ ಬಿ.ಜೆ.ಪಿಗರಿಗೂ ತಿಳಿಸುವುದೇ ಮಾರ್ಗ ಉಳಿದಿರುವುದು. ■

ಮತ್ತೊಂದು ‘ಉತ್ತೇಜನಾ’ ಪ್ಯಾಕೇಜ್ ಪ್ರಕಟಣೆ
ಸರಕಾರದ ಖರ್ಚುಗಳಲ್ಲಿ ಗಣನೀಯ ಹೆಚ್ಚಳವೇನೂ ಇಲ್ಲ



ಕೇಂದ್ರ ಸರಕಾರ ಮತ್ತೊಂದು ‘ಉತ್ತೇಜನಾ’ ಪ್ಯಾಕೇಜನ್ನು ಪ್ರಕಟಿಸಿದೆ, ಆದರೆ ಇದರಲ್ಲಿ ಸರಕಾರದ ಖರ್ಚುಗಳಲ್ಲಿ ಯಾವುದೇ ಗಣನೀಯ ಏರಿಕೆಯೂ ಇಲ್ಲ, ಅಥವ ಜನಗಳಿಗೆ ನೇರ ನಗದು ವರ್ಗಾವಣೆಗಳೂ ಇಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಪ್ರತಿಕ್ರಿಯೆ ವ್ಯಕ್ತಪಡಿಸಿದೆ.

ಸರಕಾರ, ಹಿಂದಿನ ಮೂರು ಪ್ರಕಟಣೆಗಳು, ಮತ್ತು ಈ ಪ್ರಕಟಣೆಯೊಂದಿಗೆ ಒಟ್ಟು ಜಿಡಿಪಿಯ 15ಶೇ.ದಷ್ಟು ಉತ್ತೇಜನೆಗಳನ್ನು ಕೊಟ್ಟಿರುವುದಾಗಿ ಬಡಾಯಿ ಕೊಚ್ಚಿಕೊಂಡಿದೆ. ಆದರೆ ವಾಸ್ತವತೆಯೇನೆಂದರೆ, ಸರಕಾರ ಮಾಡುವ ಒಟ್ಟು ಹೆಚ್ಚುವರಿ ಖರ್ಚುಗಳ ಮೊತ್ತ, ಅತ್ಯಂತ ಉದಾರವಾಗಿ ಅಂದಾಜು ಮಾಡಿದರೂ, ರೂ. 3,72,295 ಕೋಟಿ ರೂ. ಅಂದರೆ ಕೇವಲ ಜಿಡಿಪಿಯ 1.9ಶೇ. ಮಾತ್ರ. ಜಗತ್ತಿನ ಇತರ ಪ್ರಧಾನ ಅರ್ಥವ್ಯವಸ್ಥೆಗಳಿಗೆ ಹೋಲಿಸಿದರೆ ಇದು ಅತ್ಯಲ್ಪ, ಅವು ತಮ್ಮ ಜಿಡಿಪಿಯ 10 ರಿಂದ 15ಶೇ.ದಷ್ಟು ಉತ್ತೇಜನೆಗಳನ್ನು ಕೊಟ್ಟಿವೆ ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಸರಕಾರದ ಖರ್ಚುಗಳಲ್ಲಿ ಹೆಚ್ಚಳದ ಪ್ರಕಟಣೆಗಳು ಕೂಡ ಕೇವಲ ಬಜೆಟ್ ಹಂಚಿಕೆಗಳಷ್ಟೇ. ಇವನ್ನು ಬಜೆಟಿನ ಇತರ ಬಾಬ್ತುಗಳಲ್ಲಿ ಕಡಿತ ಮಾಡಿ ಹೊಂದಿಸಿಕೊಳ್ಳಬಹುದು. ಆ ಮೂಲಕ ಹೆಚ್ಚುವರಿ ಖರ್ಚುಗಳ ಮೊತ್ತ ಉದಾರವಾಗಿ ಅಂದಾಜುಮಾಡಿದ ಜಿ.ಡಿ.ಪಿ.ಯ 1.9ಶೇ.ಕ್ಕಿಂತಲೂ ಕಡಿಮೆಯಾಗಬಹುದು. ಸರಕಾರದ ಖರ್ಚುಗಳ ಬಜೆಟ್ ಅಂದಾಜಿಗಿಂತ ಎಷ್ಟು ಹೆಚ್ಚು ಹಣವನ್ನು ಖರ್ಚು ಮಾಡಲಾಗುತ್ತದೆ ಎಂದು ಹಣಕಾಸು ಮಂತ್ರಿಗಳು ದೇಶಕ್ಕೆ ಹೇಳಬೇಕಾಗಿದೆ. ಆಗ ಮಾತ್ರವೇ ನಿಜವಾದ ಚಿತ್ರ ಹೊಮ್ಮುತ್ತದೆ.

ಭಾರತೀಯ ಅರ್ಥವ್ಯವಸ್ಥೆ ಇತಿಹಾಸದಲ್ಲೇ ಮೊದಲ ಬಾರಿಗೆ ಆಳವಾದ ಹಿಂಜರಿತಕ್ಕೊಳಗಾಗಿದೆ ಎಂಬ ರಿಝರ್ವ್ ಬ್ಯಾಂಕ್‌ನ ತೀವ್ರ ತಪ್ಪು ಹೊರಿಕೆಯ ಮರುದಿನವೇ ಬಂದಿರುವ ಈ ಪ್ರಕಟಣೆ ಆರ್ಥಿಕ ಪುನಶ್ಚೇತನದ ನೀಲನಕ್ಷೆಯನ್ನು ಮುಂದಿಡುವಲ್ಲಿ ವಿಫಲವಾಗಿದೆ.

ಈ ಪ್ಯಾಕೇಜಿನ ಇತರ ಅಂಶಗಳು, ಹಿಂದಿನ ಮೂರು ಪ್ರಕಟಣೆಗಳಲ್ಲಿದ್ದಂತೆ, ಹೂಡಿಕೆಗಳನ್ನು ಹೆಚ್ಚಿಸುತ್ತವೆ, ಉದ್ಯೋಗಗಳನ್ನು ಸೃಷ್ಟಿಸುತ್ತವೆ ಮತ್ತು ಅರ್ಥವ್ಯವಸ್ಥೆ ಚೇತರಿಸಿಕೊಳ್ಳುವಂತೆ ಮಾಡುತ್ತವೆ ಎಂಬ ಆಶಯದಿಂದ ಸಾಲ ಪಡೆಯಲು ಅನುಕೂಲ ಕಲ್ಪಿಸಿ ಕೊಡುವಂತವುಗಳು. ಅದರೆ ಇಂತಹ ಚೇತರಿಕೆ ಎಂದೂ ಆಗದು, ಏಕೆಂದರೆ ಇಂತಹ ಹೂಡಿಕೆಗಳಿಂದ ಉತ್ಪಾದಿಸಿದ ಸರಕುಗಳು ಮಾರಾಟವಾಗಬೇಕು ತಾನೇ? ಆದರೆ ಭಾರತೀಯ ಮಾರುಕಟ್ಟೆ ಮುಳುಗುತ್ತಿದೆ, ಏಕೆಂದರೆ, ಜನಗಳ ಖರೀದಿ ಸಾಮರ್ಥ್ಯ ಕಡಿಮೆ-ಕಡಿಮೆಯಾಗುತ್ತಲೇ ಇದೆ.

ನಮಗೆ ಬಹಳ ಅಗತ್ಯವಿರುವ ಮೂಲರಚನೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಿ, ಉದ್ಯೋಗಗಳನ್ನು ಸೃಷ್ಟಿಸಿ, ಆಂತರಿಕ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಮಾತ್ರವೇ ಅರ್ಥವ್ಯವಸ್ಥೆಯಲ್ಲಿ ಮತ್ತೆ ಚೇತರಿಕೆ ಸಾಧ್ಯ.

ಸರಕಾರದ ಈ ಉತ್ತೇಜನಾ ಪ್ಯಾಕೇಜುಗಳು ವಿದೇಶೀ ಮತ್ತು ದೇಶೀ ಬಂಡವಾಳಗಳ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸುವ ಅಗತ್ಯವನ್ನು ಈಡೇರಿಸಬಹುದಷ್ಟೇ, ಅರ್ಥವ್ಯವಸ್ಥೆಯ ಪುನಶ್ಚೇತನ ಇವುಗಳಿಂದ ಸಾಧ್ಯವಿಲ್ಲ. ಏರುಗತಿಯಲ್ಲಿರುವ ನಿರುದ್ಯೋಗ, ಹಸಿವು ಮತ್ತು ಬೆಲೆಯೇರಿಕೆಗಳಿಂದ ಜನಗಳ ಸಂಕಟಗಳು ಹೆಚ್ಚುತ್ತಲೇ ಹೋಗುತ್ತವೆ, ಬಡತನ ಮತ್ತು ಅಭಾವಗಳು ಮತ್ತಷ್ಟು ಬೆಳೆಯಲು ದಾರಿ ಮಾಡಿ ಕೊಡುತ್ತವೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ನೇರ ನಗದು ವರ್ಗಾವಣೆ ಮತ್ತು ಉಚಿತ ಆಹಾರ ವಿತರಣೆ ತಕ್ಷಣವೇ ಆಗಬೇಕಾಗಿದೆ ಎಂದು ಪುನರುಚ್ಚರಿಸಿದೆ. ಇದು ಮಾನವೀಯ ಆಧಾರದಿಂದಷ್ಟೇ ಅಲ್ಲ, ಜನಗಳಿಗೆ ಖರೀದಿ ಸಾಮರ್ಥ್ಯವನ್ನು ಕೊಡಲು ಕೂಡ ಅಗತ್ಯ, ಇದರಿಂದ ಮಾತ್ರವೇ ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಹೆಚ್ಚಬಲ್ಲದು, ಈ ಮೂಲಕ ಯಾವುದೇ ಆರ್ಥಿಕ ಪುನಶ್ಚೇತನ ಆರಂಭವಾಗಬಲ್ಲದು ಎಂದು ಪೊಲಿಟ್ ಬ್ಯುರೊ ಹೇಳಿದೆ.

ಇದು ಮತ್ತೊಂದು ಗಿಮಿಕ್– ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಟಿಪ್ಪಣಿ ಮಾಡಿದ್ದಾರೆ. ಜಿಡಿಪಿ ಎಪ್ರಿಲ್–ಜೂನ್ ತ್ರೈಮಾಸಿಕದಲ್ಲಿ 23.9ಶೇ.ದಷ್ಟು ಆಳಕ್ಕೆ ಕುಸಿದ ನಂತರ, ಈಗ ಸಪ್ಟಂಬರ್ 2020ರಂದು ಕೊನೆಗೊಂಡ ಈ ತ್ರೈಮಾಸಿಕದಲ್ಲಿ ಮತ್ತೆ 8.6ಶೇ.ದಷ್ಟು ಇಳಿದಿದೆ, ಭಾರತದ ಅರ್ಥವ್ಯವಸ್ಥೆ ತೀವ್ರ ಹಿಂಜರಿತಕ್ಕೆ ಒಳಗಾಗಿದೆ ಎಂದು ರಿಝರ್ವ್ ಬ್ಯಾಂಕ್ ಹೇಳಿದ ನಂತರ ಮಾಧ್ಯಮಗಳಲ್ಲಿ ಪ್ರತಿಕೂಲ ಪ್ರಚಾರ ಬಾರದಂತೆ ನೋಡಿಕೊಳ್ಳುವುದಕ್ಕಾಗಿ ಈ ಪ್ಯಾಕೇಜ್ ಪ್ರಕಟಣೆ ಎಂದು ಅವರು ಹೇಳಿದ್ದಾರೆ.


ಹಣಕಾಸು ಮತ್ರಿಗಳು ಯಾವ ಜಗತ್ತಿನಲ್ಲಿದ್ದಾರೆ?

ಇದು ಒಬ್ಬ ವಿಶ್ಲೇಷಕರು ಕೇಳಿರುವ ಪ್ರಶ್ನೆ(ಸುಬೋಧ್ ವರ್ಮ, ನ್ಯೂಸ್‌ಕ್ಲಿಕ್, ನವಂಬರ್ 13). ಹಿಂಜರಿತ ಆರಂಭವಾಗಿದೆ ಎಂದು ಅಧಿಕೃತವಾಗಿ ಒಪ್ಪಿಕೊಂಡ ಅದೇ ರಿಝರ್ವ್ ಬ್ಯಾಂಕ್ ವಿಶ್ಲೇಷಣೆಯಿಂದಲೇ ಹಣಕಾಸು ಮಂತ್ರಿಗಳು ಉದ್ಧರಿಸುತ್ತ, ಮೂರನೇ ತ್ರೈಮಾಸಿಕದಲ್ಲಿ ಬೆಳವಣಿಗೆಯ ಸಾಧ್ಯತೆ ಇದೆ ಎಂದರು. ಆದರೆ ಅವರು ಅದರಲ್ಲಿ ಕೊಟ್ಟ ಎಚ್ಚರಿಕೆಗಳ ಬಗ್ಗೆ ಹೇಳಲಿಲ್ಲ. ಹಣದುಬ್ಬರ ತೀವ್ರ ಹೊಡೆತ ನೀಡಬಹುದು, ಕೊವಿಡ್‌ನ ಎರಡನೇ ಅಲೆ ಬಂದರೆ ಬೇಡಿಕೆ ವಿಧ್ವಂಸಕಾರಿ ರೀತಿಯಲ್ಲಿ ಕುಸಿಯಬಹುದು, “ನಾವು ಸವಾಲಿನ ದಿನಗಳಲ್ಲಿ ಬದುಕಿದ್ದೇವೆ” ಎಂದು ಅದು ಎಚ್ಚರಿಸಿದೆ.

ಹಣಕಾಸು ಮಂತ್ರಿಗಳು ರಿಝರ್ವ್ ಬ್ಯಾಂಕ್ ಕೊಟ್ಟಿರುವ ಅಂಕಿ-ಅಂಶಗಳ ಬಗ್ಗೆಯೂ ಹೇಳಲಿಲ್ಲ. ಅದು ಕೊಟ್ಟಿರುವ ಅಂಕಿ–ಅಂಶಗಳನ್ನು ನೋಡಿ–

ಜಿಡಿಪಿ ಬೆಳವಣಿಗೆ	ಜುಲೈ–ಆಗಸ್ಟ್	–8.6%
ಒಟ್ಟು ಮೌಲ್ಯಸೇರಿಕೆ	ಎಪ್ರಿಲ್–ಜೂನ್	–22.8%
ಕೈಗಾರಿಕೆಗಳು	“	–33.8%
ಸೇವಾ ವಲಯ	“	–24.3%
ನಿರುದ್ಯೋಗ	**ಅಕ್ಟೋಬರ್ 2020**	**7.0%**
ಕೈಗಾರಿಕಾ ಉತ್ಪಾದನಾ ಸೂಚ್ಯಂಕ	ಸಪ್ಟಂಬರ್ 2020	0.2%
ಹಣದುಬ್ಬರ(ಸಾಮಾನ್ಯ)	**ಅಕ್ಟೋಬರ್ 2020**	**7.%**
ಹಣದುಬ್ಬರ (ಆಹಾರ)	**ಅಕ್ಟೋಬರ್ 2020**	**11.1%**

ಈ ಅಂಕಿ–ಅಂಶಗಳ ನಡುವೆಯೂ ಹಣಕಾಸು ಮಂತ್ರಿಗಳು ಮತ್ತು ಅವರ ಸರಕಾರ ಆರ್ಥಿಕ ಬೆಳವಣಿಗೆಯ ಹಸಿರು ಚಿಗುರೆಲೆಗಳನ್ನು ಕಾಣುತ್ತಿದ್ದಾರೆ ಎಂದು ವ್ಯಂಗ್ಯವಾಡಿರುವ ಈ ವಿಶ್ಲೇಷಕರು, ಈ ಹಿಂದಿನ ಮೇ 2020ರ ‘ಪ್ಯಾಕೆಜ್’ನ ಕ್ರಮಗಳ ಶೋಚನೀಯ ವಿಫಲತೆಯ ಐದು ತಿಂಗಳ ನಂತರ ಅಂತಹ ಕ್ರಮಗಳನ್ನೇ ಮತ್ತೆ ಉತ್ತೇಜನೆಯೆಂದು ಮುಂದಿಟ್ಟಿದ್ದಾರೆ ಎಂದಿದ್ದಾರೆ.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್, ವಾರ್ತಾಭಾರತಿ

ನೋಟು ರದ್ಧತಿ ಮತ್ತು ಆರ್ಥಿಕ ನಿಧಾನಗತಿ
ಮತ್ತು ಹಸುಳೆಗಳ ಮರಣ ದರ ಏರಿಕೆ

ನೋಟು ರದ್ಧತಿಯ ‘ಸಾಧನೆ’ಗಳ ಬಗ್ಗೆ ಬಹುದಿನಗಳ ಮೌನದ ನಂತರ ಪ್ರಧಾನ ಮಂತ್ರಿಗಳು ಬಿಹಾರ ಚುನಾವಣಾ ಪ್ರಚಾರದ ವೇಳೆಯಲ್ಲಿ ಅದನ್ನು ಸಮರ್ಥಿಸಿಕೊಂಡು ತಮ್ಮ ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ಅದೇ ವೇಳೆಗೆ ನೋಟಿ ರದ್ಧತಿ ಮತ್ತು ಅದರ ಪರಿಣಾಮವಾದ ಆರ್ಥಿಕ ನಿಧಾನಗತಿ ದೇಶದಲ್ಲಿ ಹಸುಳೆಗಳ ಮರಣ ದರವನ್ನು ಹೆಚ್ಚಿಸಿರಬಹುದು ಎಂದು ಕಂಡುಕೊಂಡಿರುವ ಅಧ್ಯಯನದ ಬಗ್ಗೆ ವರದಿಯಾಗಿದೆ.


“2017 ಮತ್ತು 2018ರಲ್ಲಿ ಹಸುಳೆಗಳ ಮರಣದರದ ಇಳಿಕೆಯಲ್ಲಿ ತಡೆ ಮತ್ತು ಹಿಂಚಲನೆ” ಎಂಬ ಈ ಅಧ್ಯಯನ ಒಂದು ದೇಶವ್ಯಾಪಿ ಎಸ್ ಆರ್‌ಎಸ್ (ಸ್ಯಾಂಪಲ್ ರಿಜಿಸ್ಟ್ರೇಷನ್ ಸಿಸ್ಟಂ)ನ ದತ್ತಾಂಶದ ವಿಶ್ಲೇಷಣೆ. ದಿಲ್ಲಿ ವಿವಿಯ ಜೀನ್ ಡ್ರೇಝ್, ಪೆನ್ಸಿಲ್ವೇನಿಯ ವಿವಿಯ ಆಶಿಷ್ ಗುಪ್ತ, ಟಾಟಾ ಸಾಮಾಜಿಕ ವಿಜ್ಞಾನಗಳ ಸಂಸ್ಥೆಯ ಸಾಯಿ ಅಂಕಿತ್ ಪರಾಶರ ಮತ್ತು ಎಮೊರಿ ವಿವಿಯ ಕನಿಕಾ ಶರ್ಮ ರವರು ಸೇರಿ ಮಾಡಿದ ಅಧ್ಯಯನ ಇದು.

1971ರಲ್ಲಿ 1000 ಹಸುಳೆಗಳಲ್ಲಿ 129 ಸತ್ತಿದ್ದವು. ಅಂದಿನಿಂದ ಎಸ್‌ಆರ್‌ಎಸ್ ಈ ದರದ ಉಸ್ತುವಾರಿ ಮಾಡುತ್ತಿದೆ. ನಾಲ್ಕು ದಶಕಗಳ ನಂತರ 2011ರಲ್ಲಿ ಇದು 44ಕ್ಕೆ ಇಳಿದಿತ್ತು. 1971–1990 ರ ನಡುವೆ ವರ್ಷಕ್ಕೆ 2.6%ದರದಲ್ಲಿ 1999–2005ರ ನಡುವೆ 2.1% ದರದಲ್ಲಿ ಮತ್ತು 2005–2016ರ ನಡುವೆ 4.8% ದರದಲ್ಲಿ ಇಳಿದಿದೆ. ಆದರೆ 2016ರ ನಂತರ ಈ ಇಳಿಕೆ ದರ 2017ರಲ್ಲಿ 2.9%ಕ್ಕೆ, ಮತ್ತು 2018ರಲ್ಲಿ 3.1%ಕ್ಕೆ ಇಳಿದಿದೆ.

2016ರ ನಂತರ ಅದೇನಾಯಿತು? ಇದಕ್ಕೆ ನೋಟುರದ್ಧತಿ ಮತ್ತು ಅದು, ವಿಶೇಷವಾಗಿ ಅನೌಪಚಾರಿಕ ವಲಯದ ಮೇಲೆ ಹೇರಿದ ಆರ್ಥಿಕ್ ಸಂಕಟಗಳು ಕಾರಣ. 2017–18ರ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಪ್ರಕಾರ ಸರಾಸರಿ ಮಾಸಿಕ ಬಳಕೆ ಖರ್ಚು 2011–12 ರಲ್ಲಿ 1501ರೂ. ಇದ್ದದ್ದು, 2017–18ರಲ್ಲಿ 1446ರೂ.ಗೆ ಇಳಿಯಿತು. 6ವರ್ಷಗಳಲ್ಲಿ ತನ್ನ ಅಗತ್ಯಗಳಿಗೆ ಖರ್ಚುಮಾಡುವ ಒಬ್ಬ ಸರಾಸರ ಭಾರತೀಯನ ಸಾಮರ್ಥ್ಯದಲ್ಲಿ 4% ಇಳಿಕೆಯಾಗಿದೆ.

ಅಲ್ಲದೆ ಗ್ರಾಮೀಣ ಕೂಲಿಗಳಲ್ಲಿ 2014–15ರಿಂದ 2018–196 ನಡುವೆ ಸ್ಥಗಿತತೆ ಕಂಡು ಬಂದಿದೆ, ಅದರ ಹಿಂದಿನ ಹತ್ತು ವರ್ಷಗಳಲ್ಲಿ ಅವು ಏರುತ್ತ ಬಂದಿದ್ದವು. ಇವೆಲ್ಲ ಆರ್ಥಿಕ ಪರಿಸ್ಥಿತಿಗಳಿಗೂ ಹಸುಳೆಗಳ ಮರಣ ದರದ ಇಳಿಕೆಯ ಪ್ರಮಾಣ ತಗ್ಗಿರುವುದಕ್ಕೂ ಸಂಬಂಧ ಕಾಣುತ್ತದೆ ಎಂದು ಈ ಅಧ್ಯಯನಕಾರರು ಹೇಳುತ್ತಾರೆ.

ಈಗ ಕೊವಿಡ್–19ರ ಹಿನ್ನೆಲೆಯಲ್ಲಿ ಅಭೂತಪೂರ್ವ ಉದ್ಯೋಗನಷ್ಟ ಮಾತ್ರವೇ ಅಲ್ಲ, ಗರ್ಭಿಣಿಯರ ಶುಶ್ರೂಷೆ ಮತ್ತು ಮಕ್ಕಳ ಸೋಂಕುನಿವಾರಣೆ ಸೇರಿದಂತೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಅಸ್ತವ್ಯಸ್ತಗೊಂಡಿರುವ ಸಮಯದಲ್ಲಿ ಬಂದಿರುವ ಈ ವಿಶ್ಲೇಷಣೆ ಸರಕಾರ, ಆಡಳಿತಗಾರರು ತಮ್ಮ ಧೋರಣೆಗಳನ್ನು ವಿಮರ್ಶೆ ಮಾಡಿಕೊಳ್ಳದಿದ್ದರೆ ಬರಬಹುದಾದ ಅಪಾಯದ ಬಗ್ಗೆ ಸಹಜವಾಗಿಯೇ ಭೀತಿ ಹುಟ್ಟಿಸುತ್ತದೆ.



(ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ)

ಬಿಹಾರದಲ್ಲಿ ನೋಡಿರುವದೇನು?



(ವ್ಯಂಗ್ಯಚಿತ್ರ: ಸಂತೀಶ ಆಚಾರ್ಯ/ ಫೇಸ್‌ಬುಕ್)

ದಟ್ಟ ದಾರಿದ್ರ್ಯವನ್ನು ತೊಡೆದು ಹಾಕಲು ಹಣವಿಲ್ಲ ಎನ್ನದಿರಿ



ಭಾರತದಲ್ಲಿ ಹೆಚ್ಚಿನ ಬಂಡವಾಳಶಾಹಿ ದೇಶಗಳಲ್ಲಿರುವಂತೆ ಸಂಪತ್ತಿನ ತೆರಿಗೆ ಇಲ್ಲ. ವಾರಸುದಾರಿಕೆ ತೆರಿಗೆಯೂ ಇಲ್ಲ. ಆದರೂ ಸಂಪತ್ತಿನ ಅಸಮಾನತೆ ವೇಗವಾಗಿ ಹೆಚ್ಚುತ್ತಿರುವಾಗಲೂ ಈ ಬಗ್ಗೆ ಸಾರ್ವಜನಿಕ ಚರ್ಚೆಯೂ ಇಲ್ಲ. ಜನಸಂಖ್ಯೆಯ ಮೇಲ್ತುದಿಯಲ್ಲಿರುವ 1% ಅತಿ ಶ್ರೀಮಂತ ಮಂದಿಯ ಮೇಲೆ ಸಂಪತ್ತು ತೆರಿಗೆ ಮತ್ತು ವಾರಸುದಾರಿಕೆ ತೆರಿಗೆ ಹಾಕಿದರೆ ಪ್ರಸಕ್ತ ಜಿಡಿಪಿಯ ಸರಿಸುಮಾರು 7% ಹಣವನ್ನು ಸಂಗ್ರಹಿಸಬಹುದು. ಇನ್ನೊಂದೆಡೆಯಲ್ಲಿ ಐದು ಮೂಲಭೂತ ಆರ್ಥಿಕ ಹಕ್ಕುಗಳನ್ನು ಖಾತ್ರಿಪಡಿಸುವ ಮೂಲಕ ಭಾರತದಲ್ಲಿ ಕಲ್ಯಾಣ ರಾಜ್ಯ ಸ್ಥಾಪಿಸಲು ಜಿಡಿಪಿಯ 10%ದಷ್ಟು ಹೆಚ್ಚುವರಿ ಖರ್ಚು ಮಾಡಲು ಬೇಕಾಗುವ ಹೆಚ್ಚುವರಿ ತೆರಿಗೆಳ ಮೊತ್ತವೂ ಜಿಡಿಪಿಯ 7%ದಷ್ಟು. ಹೀಗಿರುವಾಗ ಭಾರತದಲ್ಲಿ ಬಹುಪಾಲು ಜನರ ದಾರಿದ್ರ್ಯದ ಶೋಚನೀಯ ಸ್ಥಿತಿಯನ್ನು ತೊಡೆದು ಹಾಕಲು ಹಣವಿಲ್ಲ ಎಂದು ಯಾರೂ ಹೇಳುವಂತಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಗಳಿಸಿದ ಆಸ್ತಿಯು ತನ್ನ ಸಂತತಿಗೇ ಸೇರುತ್ತದೆ ಎನ್ನುವ ಕಾರಣದಿಂದ ವ್ಯಕ್ತಿಯು ಹೆಚ್ಚು ಹೆಚ್ಚು ಸಂಪಾದಿಸುತ್ತಾನೆ. ಆಸ್ತಿಯನ್ನು ತನ್ನ ಸಂತತಿಗೆ ವರ್ಗಾಯಿಸಲಾಗದು ಎಂದಾದರೆ ವ್ಯಕ್ತಿಯು ಹೆಚ್ಚು ಸಂಪಾದನೆಯ ಆಸಕ್ತಿ ಕುಂದುವುದರಿಂದ, ಬಂಡವಾಳಶಾಹಿ ವ್ಯವಸ್ಥೆಯು ಚೈತನ್ಯ ಕಳೆದುಕೊಳ್ಳುತ್ತದೆ. ಹಾಗಾಗಿ, ಸಂತತಿಗೆ ಆಸ್ತಿ ವರ್ಗಾವಣೆಯಾಗುವ ಸಾಮರ್ಥ್ಯವನ್ನು ಬಂಡವಾಳವಾದದ ಒಂದು ವಿಶಿಷ್ಟ ಲಕ್ಷಣವೆಂದು ಹೇಳಲಾಗಿದೆ. ಈ ಅಭಿಪ್ರಾಯವು ಸತ್ಯಕ್ಕೆ ದೂರವಾದುದು. ಪಿತ್ರಾರ್ಜಿತ ಆಸ್ತಿಯನ್ನು ಜನ್ಮಸಿದ್ಧ ಹಕ್ಕಾಗಿ ಪಡೆಯುವ ಈ ಕ್ರಮವು ಬೂರ್ಜ್ವಾ ಪರಿಕಲ್ಪನೆಯ ಬಂಡವಾಳವಾದಿ–ಆಸ್ತಿ ಸಮರ್ಥನೆಗೆ ವ್ಯತಿರಿಕ್ತವಾಗಿದೆ.

ಬೂರ್ಜ್ವಾ ಪರಿಕಲ್ಪನೆಯ ಬಂಡವಾಳವಾದಿ–ಆಸ್ತಿ ಸಮರ್ಥನೆಯ ಪ್ರಕಾರ, ಬಂಡವಾಳಗಾರರಿಗೆ ಒಂದು ಅಪರೂಪದ ಗುಣವಿಶೇಷವಿರುತ್ತದೆ. ಅದರ ಪ್ರೇರಣೆಯಿಂದಾಗಿ ಅವರು ಉದ್ಯಮಶೀಲರಾಗುತ್ತಾರೆ. ಆ ಮೂಲಕ ದೇಶವು ಸಮೃದ್ಧಗೊಳ್ಳುತ್ತದೆ. ಆದ್ದರಿಂದ, ಅವರಿಗೆ ಪ್ರತಿಫಲವನ್ನು ನೀಡಬೇಕಾಗುತ್ತದೆ. ಆದರೆ, ಅವರ ಈ ಅಪರೂಪದ ಗುಣವಿಶೇಷ ಯಾವುದು ಎಂಬುದರ ಬಗ್ಗೆ ಬಂಡವಾಳವಾದದ ವಕ್ತಾರರ ನಡುವೆ ಒಮ್ಮತವಿಲ್ಲ. ಈ ಗುಣವಿಶೇಷವನ್ನು ಉತ್ಪಾದನಾ ಪ್ರಕ್ರಿಯೆಯ ಮೇಲ್ವಿಚಾರಣೆ ಎಂದು ಹೇಳುವಂತಿಲ್ಲ. ಏಕೆಂದರೆ, ಸಾಮಾನ್ಯವಾಗಿ ಅತ್ಯುತ್ತಮವಾಗಿ ಕೆಲಸ ಮಾಡುವವರೇ ಈ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾರೆ ಮತ್ತು ಅದಕ್ಕೆ ತಕ್ಕ ಸಂಬಳ ಪಡೆಯುತ್ತಾರೆ. ಲಾಭವನ್ನಲ್ಲ. ಆ ಕಂಪೆನಿಯ ಷೇರುದಾರರು ಮಾತ್ರ ಲಾಭ ಪಡೆಯುತ್ತಾರೆ. ಈ ಅಂಶವನ್ನು ಪರಿಗಣಿಸಿಯೇ, ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ನಡೆಸುವವರು ಬಂಡವಾಳಗಾರರಲ್ಲ; ಬದಲಿಗೆ ಅದೊಂದು ತಂತ್ರಜ್ಞ–ವ್ಯವಸ್ಥೆ ಎಂಬುದಾಗಿ ಜಾನ್ ಕೆನೆತ್ ಗಾಲ್‌ಬ್ರೇತ್ ಹೇಳಿದ್ದರು.

ಈ ವಿಶೇಷ ಗುಣವನ್ನು, ಯಾವುದನ್ನು ಕೀನ್ಸ್ "ನಿರ್ದಯ ಪ್ರವೃತ್ತಿ" ("animal spirit") ಎಂದು ಕರೆದರೋ, ಅದೇ ಎನ್ನುವಂತಿಲ್ಲ. ಕೀನ್ಸ್ ಹೇಳಿದ್ದ ಹಾಗೆ, ಎಷ್ಟು ಹೂಡಿಕೆ ಮಾಡಬಹುದು ಎಂಬುದನ್ನು ಈ "ನಿರ್ದಯ ಪ್ರವೃತ್ತಿ"ಯ ಪಶುಬಲವು ನಿರ್ಧರಿಸಬಹುದೇ ವಿನಃ ಅದು ಬಂಡವಾಳಗಾರರ ಆದಾಯವನ್ನು ವಿವರಿಸಲಾರದು. ಅವರ ಆದಾಯವನ್ನೇ ವಿವರಿಸಲಾರದ ಕಾರಣದಿಂದ ಅವರ ಆಸ್ತಿಯ ಸಂಬಂಧವನ್ನೂ ವಿವರಿಸಲಾರದು.

ಬಂಡವಾಳಗಾರರ ಆದಾಯ ಮತ್ತು ಅವರ ಆಸ್ತಿಗಳಿಗೆ ಇರುವ ಬೇರೆ ಕೆಲವು ಸಮರ್ಥನೆಗಳಿಗೂ ಸಹ ವಿಶ್ವಾಸಾರ್ಹತೆ ಇಲ್ಲ. ಬಂಡವಾಳಗಾರರು "ರಿಸ್ಕ್ ತೆಗೆದುಕೊಳ್ಳುವವರು" ಎಂಬುದು ಅಂಥವುಗಳಲ್ಲಿ ಒಂದು. ವಾಸ್ತವವಾಗಿ ಹೇಳುವುದಾದರೆ, ರಿಸ್ಕ್ ಇರುವುದು ಯಾರಿಗೆ ಎಂದರೆ, ಬಂಡವಾಳಗಾರರಿಗಲ್ಲ; ಯಾರ ಠೇವಣಿಯ ಹಣವನ್ನು ಬ್ಯಾಂಕ್‌ಗಳು ಬಂಡವಾಳಗಾರರ ಯೋಜನೆಗಳಿಗೆ ಸಾಲ ಕೊಟ್ಟಿವೆಯೋ, ಅಂಥಹ ಠೇವಣಿದಾರರಿಗೆ. ಏಕೆಂದರೆ, ಒಂದು ವೇಳೆ, ಇಂತಹ ಯೋಜನೆಗಳು ಹಳ್ಳ ಹಿಡಿದರೆ, ಠೇವಣಿಯ ಹಣ (ಅಂದರೆ, ಸಾಲ ಕೊಟ್ಟ ಹಣ) ಮಾಯವಾಗುತ್ತದೆ. ಬ್ಯಾಂಕ್‌ಗಳು ಮುಳುಗುವ ಹಂತ ತಲುಪುತ್ತವೆ. ಅಂತಹ ಸಂದರ್ಭದಲ್ಲಿ, ಬಂಡವಾಳಶಾಹಿ ದೇಶಗಳಲ್ಲಿನ ಸರ್ಕಾರಗಳು ಬ್ಯಾಂಕ್‌ಗಳ ನೆರವಿಗೆ ಧಾವಿಸುತ್ತವೆ. ಅಂದರೆ, ನಷ್ಟವನ್ನು ಸಮಾಜೀಕರಿಸಿದಂತಾಗುತ್ತದೆ. ಈ ಅಂಶವು, ಬಂಡವಾಳಗಾರರು "ರಿಸ್ಕ್" ತೆಗೆದುಕೊಳ್ಳುವ ವಿಶೇಷ ಗುಣ ಹೊಂದಿರುವವರು ಎಂಬ ಭಾವನೆಯನ್ನು ಇನ್ನೂ ಹೆಚ್ಚು ನಿರ್ಣಾಯಕವಾಗಿ ನಾಶಪಡಿಸುತ್ತದೆ.



ಅದೇ ರೀತಿಯಲ್ಲಿ, ಬಂಡವಾಳಗಾರರು ಆಸ್ತಿಯನ್ನು ಹೊಂದುವ ಮತ್ತು ಅದರಿಂದ ವರಮಾನ ಗಳಿಸುವ, ಅಂದರೆ, ಅವರು ತಮ್ಮ ಉಪಭೋಗಗಳನ್ನು ತ್ಯಜಿಸಿ ಮಾಡುವ "ಉಳಿತಾಯ"ಕ್ಕೆ ಪ್ರತಿಫಲವನ್ನು ನೀಡಬೇಕಾಗುತ್ತದೆ ಎಂಬ ಪರಿಕಲ್ಪನೆಯ ನಿಜ ಸ್ವರೂಪವನ್ನು ಈಗೀಗ ಬಯಲಿಗೆಳೆಯಲಾಗುತ್ತಿದೆ. ಈ ದೃಷ್ಟಿಕೋನವನ್ನು, "ತ್ಯಾಗ" ಎಂದರೆ ಏನು ಎಂಬುದರ ಅರ್ಥದ ಬಗ್ಗೆ ತಾತ್ವಿಕ ವಾದಗಳನ್ನು ಬದಿಗಿರಿಸಿ, ಬಹಳ ಸರಳವಾಗಿ ಮತ್ತು ಸ್ಪಷ್ಟವಾಗಿ ಅಲ್ಲಗಳೆಯಲಾಗುತ್ತಿದೆ. ಅದೇನೆಂದರೆ, ಉಳಿತಾಯವನ್ನು ಹೂಡಿಕೆ ನಿರ್ಧರಿಸುತ್ತದೆಯೇ ವಿನಃ, ಉಳಿತಾಯವು ಹೂಡಿಕೆಯನ್ನು ನಿರ್ಧರಿಸುವುದಿಲ್ಲ. ಸ್ಥಾಪಿತ ಸಾಮರ್ಥ್ಯವು ಸಂಪೂರ್ಣವಾಗಿ ಬಳಕೆಯಾಗದೆ ಉಳಿದ ಪರಿಸ್ಥಿತಿಯಲ್ಲಿ ಬಂಡವಾಳ ಹೂಡಿಕೆಯಾದಾಗ ಸಾಮರ್ಥ್ಯದ ಹೆಚ್ಚಿದ ಬಳಕೆಯು ಉಳಿತಾಯವನ್ನು ಸೃಜಿಸುತ್ತದೆ ಮತ್ತು ಹಣದುಬ್ಬರದ ಮೂಲಕ ನಿಜ ವೇತನಗಳನ್ನು ಬಲವಂತವಾಗಿ ಹಿಂಡುವುದರಿಂದ ಕಾರ್ಮಿಕರ ಬಳಕೆಯೂ ಹಿಂಡಿಕೆಯಾಗುತ್ತದೆ. ಹಲವಾರು ವ್ಯಕ್ತಿಗಳು ಬಳಕೆ ಮತ್ತು ಉಳಿತಾಯಗಳ ನಡುವೆ ಸ್ವಯಂಪ್ರೇರಿತವಾಗಿ ಮಾಡುವ ಆಯ್ಕೆಯು ಹೂಡಿಕೆಯನ್ನು ನಿಯಂತ್ರಿಸುವಾಗ, ಉಳಿತಾಯದ ಆಯ್ಕೆ ಮಾಡುವವರು ತಮ್ಮ ತ್ಯಾಗಕ್ಕೆ ಪ್ರತಿಫಲ ಕೋರುವುದು ಬಂಡವಾಳಶಾಹಿಯ ಕಾರ್ಯವೈಖರಿಯಲ್ಲ.

ಕೊನೆಯದಾಗಿ, ಬಂಡವಾಳಗಾರರು "ನಾವೀನ್ಯತೆಗಳನ್ನು" ಪರಿಚಯಿಸುವ "ಉದ್ಯಮಶೀಲರು" ಮತ್ತು ಆ ಮೂಲಕ ಅವರು ಅರ್ಥವ್ಯವಸ್ಥೆಗೆ ಪ್ರೇರಕ ಶಕ್ತಿಯಾಗುತ್ತಾರೆ ಎಂಬ ಒಂದು ದೃಷ್ಟಿಕೋನವೂ ಇದೆ. ಈ ಉದ್ಯಮಶೀಲತೆಯು ಸಮಾಜದಲ್ಲಿ ಯಥೇಚ್ಛವಾಗಿ ಕಂಡುಬರುವ ಗುಣವಲ್ಲ, ಆದ್ದರಿಂದ ಅದನ್ನು ಹೊಂದಿರುವವರಿಗೆ ಪ್ರತಿಫಲ ನೀಡಬೇಕಾಗುತ್ತದೆ ಎಂಬ ದೃಷ್ಟಿಕೋನದ ಒಂದು ಸಮಸ್ಯೆಯೆಂದರೆ, ನಾವೀನ್ಯತೆ ಇಲ್ಲದ ಸರಳ ಪುನರುತ್ಪಾದನೆಯಲ್ಲೇ ತೊಡಗಿದ ಬಂಡವಾಳಶಾಹಿ ಮತ್ತು ಅದರ ಲಾಭ.

ಬಂಡವಾಳಶಾಹಿ ಆಸ್ತಿ ಮತ್ತು ಅದರ ಲಾಭ ಎಂದು ಕರೆಯಲ್ಪಡುವ ವರಮಾನದ ಗಳಿಕೆ ಇವುಗಳು ಏಕೆ ಇವೆ ಎಂಬುದರ ಕುರಿತ ಬೂರ್ಜ್ವಾಸಿದ್ಧಾಂತವನ್ನು ಇಲ್ಲಿ ವಿಮರ್ಶಿಸುವುದು ನನ್ನ ಉದ್ದೇಶವಲ್ಲ. ವಿಷಯವೆಂದರೆ, ಬಂಡವಾಳಶಾಹಿ ಆಸ್ತಿಯ ಪರ ಈ ಯಾವುದೇ ವಿವರಣೆಯನ್ನು ನಾವು ಒಪ್ಪಿಕೊಂಡರೂ ಸಹ, ಬಂಡವಾಳಶಾಹಿ ಆಸ್ತಿಗೆ ಹಕ್ಕು ಪಡೆಯಲು ಹೊಂದಿರುವ ಅರ್ಹತೆಯ ವಿವರಣೆಯ ಪ್ರಕಾರ, ಈ ವಿಶೇಷ ಗುಣವನ್ನು ಹೊಂದಿರದ ವ್ಯಕ್ತಿಯು ಆಸ್ತಿಯನ್ನು ಏಕೆ ಪಡೆಯಬೇಕು ಎಂಬುದನ್ನು ಸಮರ್ಥಿಸುವುದಿಲ್ಲ. ಅಂದರೆ, ಪಿತ್ರಾರ್ಜಿತ ಆಸ್ತಿಯು ಜನ್ಮಸಿದ್ಧವಾಗಿ ಲಭಿಸಬೇಕು ಏಕೆ? ವಾಸ್ತವವಾಗಿ, ಬಂಡವಾಳಗಾರನ ಆಸ್ತಿಯನ್ನು ವಿಶೇಷ ಗುಣಗಳಿಲ್ಲದ ಅವನ ಸಂತತಿಯು ಜನ್ಮಸಿದ್ಧವಾಗಿ ಸ್ವೀಕರಿಸುವ ಪದ್ಧತಿಯು, ಬಂಡವಾಳಗಾರನು ಹೊಂದಿರುವ ವಿಶೇಷ ಗುಣಗಳಿಗೆ ಪ್ರತಿಫಲವಾಗಿ ಆಸ್ತಿ ದೊರೆಯುತ್ತದೆ ಎಂಬ ವಿವರಣೆಗೆ ವಿರುದ್ಧವಾಗುತ್ತದೆ. ಹೀಗೆ, ಪಿತ್ರಾರ್ಜಿತ ಆಸ್ತಿಯು ಜನ್ಮಸಿದ್ಧವಾಗಿ ಲಭಿಸುವ ಕ್ರಮವೇ ಬೂರ್ಜ್ವಾ ಪರಿಕಲ್ಪನೆಯ ಬಂಡವಾಳವಾದಿ–ಆಸ್ತಿ ಸಮರ್ಥನೆಯ ನಿರಾಕರಣೆಯಾಗುತ್ತದೆ.

ಬಂಡವಾಳಗಾರರು ಹೊಂದಿರುವ ವಿಶೇಷ ಗುಣಕ್ಕಾಗಿ ಸಮಾಜವು ಅವರಿಗೆ ಪ್ರತಿಫಲವನ್ನು ನೀಡುತ್ತದೆ. ತಮ್ಮ ಆಸ್ತಿಯನ್ನು ತಮ್ಮ ಮಕ್ಕಳಿಗೆ ವರ್ಗಾಯಿಸುವ ಭರವಸೆ ಒಂದು ವೇಳೆ ಇಲ್ಲದಿದ್ದರೆ, ವಿಶೇಷ ಗುಣ ಹೊಂದಿದ ಬಂಡವಾಳಗಾರರು ಅದನ್ನು ಸಮಾಜದ ಉಪಯೋಗಕ್ಕಾಗಿ ಬಳಸಲು ಮುಂದೆ ಬರುವುದಿಲ್ಲ. ಆದ್ದರಿಂದ, ಅವರ ಈ "ಪ್ರೇರಣೆ"ಯ ಕತೆ ಏನು? ಅವರ ಈ ವಾದವು ಆಸ್ತಿಯನ್ನು ತಮ್ಮ ಮಕ್ಕಳಿಗೆ ವರ್ಗಾಯಿಸಬೇಕು ಎಂಬುದರ ಸಮರ್ಥನೆಯಲ್ಲ. ಬದಲಿಗೆ, ತಮ್ಮ "ವಿಶೇಷ ಪ್ರತಿಭೆ"ಯನ್ನು ಬಳಸುವುದಕ್ಕೆ ಪ್ರತಿಯಾಗಿ ತಮ್ಮ ಆಸ್ತಿಯನ್ನು ತಮ್ಮ ಮಕ್ಕಳಿಗೆ ವರ್ಗಾಯಿಸುವ ಅವಕಾಶ ಕಲ್ಪಿಸಿಕೊಡುವಂತೆ ಅವರು ಸಮಾಜದ ತೋಳು–ತಿರುಚುವ ಒತ್ತಾಯವಾಗುತ್ತದೆ. ಈ ವಾದವು, ತನ್ನ ಸಂಶಯಾಸ್ಪದ ನೈತಿಕ ತಳಹದಿಯ ಹೊರತಾಗಿಯೂ, ತಾರ್ಕಿಕವಾಗಿ ಸಮರ್ಥನೀಯವಲ್ಲ: ಉದಾಹರಣೆಗೆ, ಆಸ್ತಿಯ ಆನುವಂಶಿಕ ವರ್ಗಾವಣೆ ಇಲ್ಲದ ಸಮಾಜದಲ್ಲಿ ನಾವೀನ್ಯತೆ ಏಕೆ ಸೊರಗಬೇಕು ಎಂಬುದಕ್ಕೆ ಕಾರಣವೇ ಇಲ್ಲ; ಆಸ್ತಿಯ ಆನುವಂಶಿಕ ವರ್ಗಾವಣೆ ಇಲ್ಲದ ಕಾರಣದಿಂದ ಒಬ್ಬ ಬಂಡವಾಳಗಾರನು ನಾವೀನ್ಯತೆ ಮೆರೆಯುವುದನ್ನು ನಿಲ್ಲಿಸಿದರೆ, ಯಾರೋ ಒಬ್ಬ ಮುಂದೆ ಬರುತ್ತಾನೆ. ಹೀಗಾಗಿ, ಬಂಡವಾಳಶಾಹಿ ಸಮಾಜದಲ್ಲಿ ಪಿತ್ರಾರ್ಜಿತ ಆಸ್ತಿಯು ಜನ್ಮಸಿದ್ಧವಾಗಿ ಲಭಿಸುವ ಕ್ರಮವು ಬೂರ್ಜ್ವಾ ತರ್ಕದ ಪ್ರಕಾರವಾಗಿಯೂ ಸಮರ್ಥನೀಯವಲ್ಲ.

ಈ ಕಾರಣದಿಂದಾಗಿಯೇ ಬಹುತೇಕ ಬಂಡವಾಳಶಾಹಿ ದೇಶಗಳು ಬಂಡವಾಳಶಾಹಿಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕುವ ಈ ನವ ಉದಾರ ಕಾಲಘಟ್ಟದಲ್ಲಿಯೂ ಸಹ, ಹೆಚ್ಚಿನ ಮಟ್ಟದ ಪಿತ್ರಾರ್ಜಿತ ಆಸ್ತಿ (ಆನುವಂಶಿಕ) ವಾರಸುದಾರಿಕೆ ತೆರಿಗೆ (inheritance tax) ಹಾಕುವ ಕ್ರಮವನ್ನು ಮುಂದುವರೆಸಿಕೊಂಡು ಬಂದಿವೆ. ಉದಾಹರಣೆಗೆ, ಜಪಾನ್‌ನಲ್ಲಿ ಈ ತೆರಿಗೆಯು 50% ಮಟ್ಟದಲ್ಲಿದೆ. ಅಮೇರಿಕಾದಲ್ಲಿ ಕೂಡ 40% ತೆರಿಗೆ ಇದೆ. ಬಹುತೇಕ ಯೂರೋಪಿಯನ್ ದೇಶಗಳಲ್ಲಿ 40% ತೆರಿಗೆ ಇದೆ. ತೆರಿಗೆ ತಪ್ಪಿಸಿಕೊಳ್ಳುವ ಪ್ರಕರಣಗಳು ನಿಸ್ಸಂದೇಹವಾಗಿ, ವ್ಯಾಪಕವಾಗಿಯೇ ಇರಬಹುದು. ಆದರೆ, ಈ ತೆರಿಗೆಯ ತಾತ್ವಿಕತೆಯು ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿದೆ.

ಭಾರತದಲ್ಲಿ ಸಂಪತ್ತಿನ ಅಸಮಾನತೆ ವೇಗವಾಗಿ ಹೆಚ್ಚುತ್ತಿದೆ. ಆದರೂ ಇಲ್ಲಿ ಸಂಪತ್ತಿನ ತೆರಿಗೆ ಇಲ್ಲ. ವಾರಸುದಾರಿಕೆ (inheritance) ತೆರಿಗೆಯೂ ಇಲ್ಲ. ಈ ಬಗ್ಗೆ ಸಾರ್ವಜನಿಕ ಚರ್ಚೆಯೂ ಇಲ್ಲ. ಏಕೆಂದರೆ, ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾದ ಭರವಸೆಗಳ ಹೊರತಾಗಿಯೂ, ಅವಕಾಶಗಳ ಸಮಾನತೆಯ ಭರವಸೆಯೂ ಬಹುತೇಕ ಜನರಿಗೆ ಒಂದು ಅವಾಸ್ತವಿಕ ಕನಸಾಗಿಯೇ ತೋರುತ್ತದೆ. ತಮ್ಮ ದಿನ ನಿತ್ಯದ ಜಂಜಾಟಗಳಿಗೆ ತುಸು ಪರಿಹಾರ ದೊರೆತರೆ, ಅಷ್ಟರಲ್ಲೇ ಅವರು ತೃಪ್ತರಾಗುತ್ತಾರೆ. ಆದರೆ, ಅವಕಾಶಗಳ ಸಮಾನತೆಯೇ ತಿರುಳಾಗಿರುವ ಪ್ರಜಾಪ್ರಭುತ್ವದ (ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದನ್ನು ಎಂದಿಗೂ ಸಾಧಿಸಲಾಗದು) ಬಯಕೆ ಎಂದರೆ, ಸಂಪತ್ತಿನ ಅಸಮಾನತೆಗಳ ಅಂತರದ ಇಳಿಕೆ ಮತ್ತು ಪಿತ್ರಾರ್ಜಿತ ಆಸ್ತಿ ವಾರಸುದಾರಿಕೆ ತೆರಿಗೆಯ ಜಾರಿ.

ಸಂಪತ್ತು ತೆರಿಗೆ ಏನನ್ನು ಸಾಧಿಸಬಲ್ಲದು ಎಂಬುದನ್ನು ಕೆಲವು ಅಂಕಿ–ಅಂಶಗಳ ಮೂಲಕ ವಿವರಿಸಬಹುದು. 2019ರಲ್ಲಿ ದೇಶದ ಒಟ್ಟು ಖಾಸಗಿ ಸಂಪತ್ತು 12.6 ಟ್ರಿಲಿಯನ್ ಡಾಲರ್ ಅಥವಾ ಸರಿಸುಮಾರು 945 ಲಕ್ಷ ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದ್ದು, ಈ ಪೈಕಿ ಮೇಲ್ತುದಿಯಲ್ಲಿರುವ 1% ಮಂದಿಯ ಪಾಲು 42.5% ಆಗಿದೆ. ಅಂದರೆ, ಅವರು ಸುಮಾರು 400 ಲಕ್ಷ ಕೋಟಿ ರೂಪಾಯಿಗಳ ಸಂಪತ್ತು ಹೊಂದಿದ್ದಾರೆ. ಈ ಮೊತ್ತದ ಮೇಲೆ 2% ತೆರಿಗೆ ಹಾಕಿದರೆ 8 ಲಕ್ಷ ಕೋಟಿ ರೂ ಗಳ ಆದಾಯ ಬರುತ್ತದೆ. ಅಮೇರಿಕಾದ ಅಧ್ಯಕ್ಷೀಯ ಚುನಾವಣಾ ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದ ಎಲಿಜಬೆತ್ ವಾರೆನ್ ಅವರು ಅಮೇರಿಕಾದಲ್ಲಿ 50 ಮಿಲಿಯನ್ ಡಾಲರ್ ಅಥವಾ ಅದಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುವವರ ಮೇಲೆ ಕನಿಷ್ಠ 2% ಸಂಪತ್ತು ತೆರಿಗೆ ಹಾಕಬೇಕು ಎಂದು ಹೇಳಿದ್ದರು. ಇನ್ನೊಬ್ಬ ಅಭ್ಯರ್ಥಿ ಬರ್ನಿ ಸ್ಯಾಂಡರ್ಸ್, ಸಂಪತ್ತಿನ ಪ್ರಮಾಣಕ್ಕೆ ಅನುಗುಣವಾಗಿ 1% ನಿಂದ 8% ವರೆಗೆ ಸಂಪತ್ತು ತೆರಿಗೆ ಹಾಕಬೇಕು ಎಂದು ಹೇಳಿದ್ದರು.

ಸಂಪತ್ತು ತೆರಿಗೆಯ ಜೊತೆಗೆ, ಒಂದು ವೇಳೆ, ಮೂರನೆ ಒಂದರಷ್ಟು ವಾರಸುದಾರಿಕೆ ತೆರಿಗೆಯನ್ನು (inheritance tax) ಹಾಕಿದರೆ, ಜನಸಂಖ್ಯೆಯ ಮೇಲ್ತುದಿಯಲ್ಲಿರುವ 1% ಮಂದಿಯ ಒಟ್ಟು ಸಂಪತ್ತಿನಲ್ಲಿ ಶೇ.5ರಷ್ಟು ಪ್ರತಿ ವರ್ಷವೂ ಮುಂದಿನ ಪೀಳಿಗೆಗೆ ವರ್ಗಾಯಿಸಲಾಗುತ್ತದೆ ಎಂದುಕೊಂಡರೂ ಸಹ, 6.67 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹವಾಗುತ್ತದೆ. ಈ ಎರಡೂ ತೆರಿಗೆಗಳನ್ನು ಕೇವಲ ಜನಸಂಖ್ಯೆಯ ಮೇಲ್ತುದಿಯಲ್ಲಿರುವ 1% ಮಂದಿಯ ಮೇಲೆ ವಿಧಿಸಿದರೆ, ಈ ಬಾಬ್ತು 14.67 ಲಕ್ಷ ಕೋಟಿ ರೂ. ಗಳನ್ನು ಅಥವಾ ಪ್ರಸಕ್ತ ಜಿಡಿಪಿಯ ಸರಿಸುಮಾರು 7% ಹಣವನ್ನು ಸಂಗ್ರಹಿಸಬಹುದು.

ಐದು ಮೂಲಭೂತ ಆರ್ಥಿಕ ಹಕ್ಕುಗಳನ್ನು ಖಾತ್ರಿಪಡಿಸುವ ಮೂಲಕ ಭಾರತದಲ್ಲಿ ಕಲ್ಯಾಣ ರಾಜ್ಯ ಸ್ಥಾಪಿಸಬಹುದು. ಕೈಗೆಟುಕುವ ಬೆಲೆಯಲ್ಲಿ ಆಹಾರದ ಹಕ್ಕು, ಉದ್ಯೋಗದ ಹಕ್ಕು (ಅಥವಾ ಉದ್ಯೋಗ ದೊರೆಯದಿದ್ದರೆ ಪೂರ್ಣ ವೇತನ), ಸರ್ಕಾರಿ ಆಸ್ಪತ್ರೆಗಳ ಮೂಲಕ ಆರೋಗ್ಯ ರಕ್ಷಣೆಯ ಹಕ್ಕು, ವಿಶ್ವವಿದ್ಯಾಲಯ ಮಟ್ಟದವರೆಗೆ (ಸರ್ಕಾರಿ ಶಾಲೆಗಳ ಮೂಲಕ) ಶಿಕ್ಷಣದ ಹಕ್ಕು, ಮತ್ತು ವೃದ್ಧಾಪ್ಯದಲ್ಲಿ ಸಾಕಷ್ಟು ಪಿಂಚಣಿ ಮತ್ತು ಅಂಗವೈಕಲ್ಯ–ಸೌಲಭ್ಯ ಸೇವೆಗಳು, ಇವುಗಳಿಗೆ ತಗಲುವ ವೆಚ್ಚವು ಈಗಾಗಲೇ ಮಾಡುತ್ತಿರುವ ವೆಚ್ಚಕ್ಕಿಂತ ಅಧಿಕವಾಗಿ ಜಿಡಿಪಿಯ ಶೇ.10ರಷ್ಟು ಎಂದು ಅಂದಾಜಿಸಲಾಗಿದೆ. ಸರ್ಕಾರವು ಜಿಡಿಪಿಯ ಶೇ.10ರಷ್ಟು ಹಣವನ್ನು ಹೆಚ್ಚುವರಿಯಾಗಿ ಖರ್ಚು ಮಾಡಿದಾಗ, ಜಿಡಿಪಿಯು "ಗುಣಕ"ದ ರೀತಿಯಲ್ಲಿ ವೃದ್ಧಿಸುತ್ತದೆ. ಅದರಿಂದ ಸರಿಸುಮಾರು 15% ತೆರಿಗೆ ಸರ್ಕಾರಕ್ಕೆ ಬರುತ್ತದೆ. ಹಾಗಾಗಿ, 10% ಹೆಚ್ಚುವರಿ ವೆಚ್ಚ ಮಾಡಲು ಬೇಕಾಗುವ ಹೊಸ ತೆರಿಗೆಗಳನ್ನು ಜಿಡಿಪಿಯ 7% ಎಂದು ಅಂದಾಜು ಮಾಡಲಾಗಿದೆ. ಈ ಎರಡು ತೆರಿಗೆಗಳು ನಿಖರವಾಗಿ ಅಷ್ಟು ಆದಾಯವನ್ನು (ಜಿಡಿಪಿಯ 7% ಅಥವಾ 14.67 ಲಕ್ಷ ಕೋಟಿ ರೂ) ತರುತ್ತವೆ.

ಭಾರತದಲ್ಲಿ ಕಲ್ಯಾಣ ರಾಜ್ಯದ ಸ್ಥಾಪನೆಗೆ ಕೇವಲ ಈ ಎರಡು ತೆರಿಗೆಗಳು ಸಾಕಾಗುತ್ತವೆ. ನಮ್ಮ ದೇಶದ ಬಹುಪಾಲು ಜನರ ದಾರಿದ್ರ್ಯದ ಶೋಚನೀಯ ಸ್ಥಿತಿಯನ್ನು ತೊಡೆದು ಹಾಕಲು ನಮ್ಮ ದೇಶದಲ್ಲಿ ಹಣವಿಲ್ಲ ಎಂದು ಯಾರೂ ಹೇಳದಿರಲಿ.

ಯುರೋಪಿನಲ್ಲಿ ಯಾಕೆ ಜಗತ್ತಿನಲ್ಲೇ ಧರ್ಮ ಮತ್ತು ಪ್ರಭುತ್ವವನ್ನು ಪ್ರತ್ಯೇಕಿಸುವುದರಲ್ಲಿ ಅತ್ಯಂತ ಯಶಸ್ವಿ ಎಂದು ಪರಿಗಣಿತವಾಗಿದ್ದ, ಫ್ರಾನ್ಸ್ ನ ಪ್ರಭುತ್ವ ಮತ್ತು ಆಳುವ ವಲಯಗಳು ಇಸ್ಲಾಮಿಕ ಭೀತಿ–ದ್ವೇಷಕ್ಕೆ ಆಹಾರ ಒದಗಿಸಿ ಪ್ರೋತ್ಸಾಹ ನೀಡುವ ವ್ಯಾಮೋಹಕ್ಕೆ ಒಳಗಾಗಿವೆ. ಚರ್ಚುಗಳು, ಪತ್ರಿಕೆಗಳು ಮತ್ತು ಇತರೆ ಸಾರ್ವಜನಿಕ ಸಂಸ್ಥೆಗಳಿಗೆ ಸಾಮಾಜಿಕ ಒಗ್ಗಟ್ಟು ಬೆಳೆಸಲು ಮತ್ತು ನಾಗರಿಕ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಮತ್ತು ಪೌರತ್ವದ ಜವಾಬ್ದಾರಿಗಳ ಪ್ರಜ್ಞೆಯನ್ನು ಕಾಪಾಡಲು ಸಹಾಯ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುತ್ವದ ವಿಶೇಷ ಜವಾಬ್ದಾರಿಯಾಗಿದೆ, ಆದರೆ, ಪ್ರಾನ್ಸ್ ನಲ್ಲಿ ಈ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಫ್ರೆಂಚ್ ಪ್ರಭುತ್ವ ವಿಫಲವಾಗಿದೆ. ತಮ್ಮ ರಾಜಕೀಯ ವೈಫಲ್ಯಗಳಿಂದ ತಮ್ಮ ರಾಜಕೀಯ ಅಸ್ತಿತ್ವದ ಸವಾಲು ಎದುರಿಸುತ್ತಿರುವ ರಾಜಕಾರಣಿಗಳು ಜಗತ್ತಿನ ಎಲ್ಲೆಡೆ ಮಾಡುವಂತೆ ಅಧ್ಯಕ್ಷ ಮ್ಯಾಕ್ರಾನ್ ಸಹ ಜನರ ಗಮನ ಬೇರಡೆಗೆ ಸೆಳೆಯುವ ಉಗ್ರ ಬಲಪಂಥದ ಆಟದ ಪಟ್ಟುಗಳ ಮೊರೆ ಹೋಗಿದ್ದಾರೆ. ಆದರೆ ಮೂಲ ಸಮಸ್ಯೆ ಬೇರೆಯೇ ಆಗಿದೆ.

ಫ್ರಾನ್ಸ್: ಮ್ಯಾಕ್ರಾನ್ ಇಸ್ಲಾಂ–ಭೀತಿಯ ಭೂತ ಬಳಸುತ್ತಿದ್ದಾರೆಯೆ?





ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಅಕ್ಟೋಬರ್ 29 ರಂದು ಫ್ರಾನ್ಸ್ ನ ನೈಸ್ ನಗರದಲ್ಲಿ ಒಂದು ಚರ್ಚ್ ಬಳಿ ಚಾಕುವಿನಿಂದ ತಿವಿದು ಮೂರು ಜನರನ್ನು ಕೊಲ್ಲಲಾಯಿತು. ಇದಕ್ಕಿಂತ ಎರಡು ವಾರಗಳ ಮೊದಲು 'ಚಾರ್ಲ್ಸ್ ಹೆಬೆಡೊ' ಪತ್ರಿಕೆ ಸೆಪ್ಟೆಂಬರ್ ನಲ್ಲಿ ಮತ್ತೆ ಪ್ರಕಟಿಸಿದ ಪ್ರವಾದಿ ಮಹಮ್ಮದ್ ಕಾರ್ಟೂನುಗಳನ್ನು ಕ್ಲಾಸಿನಲ್ಲಿ ತೋರಿಸಿದ ಶಿಕ್ಷಕನ ತಲೆ ಕಡಿದು ಹತ್ಯೆ ಮಾಡಲಾಗಿತ್ತು. ಸೆಪ್ಟೆಂಬರ್ 25 ರಂದು ಆ ಪತ್ರಿಕೆಯ ಹಿಂದಿನ ಕಚೇರಿಯ ಬಳಿ ಇಬ್ಬರ ಮೇಲೆ ದಾಳಿ ನಡೆದಿತ್ತು. ಅಕ್ಟೋಬರ್ 2 ರಂದು ಫ್ರಾನ್ಸ್ ಅಧ್ಯಕ್ಷ ಮಾಕ್ರಾನ್ ದೇಶವನ್ನುದ್ದೇಶಿಸಿ ಮಾತನಾಡಿ "ಇಸ್ಲಾಂ ಜಗತ್ತಿನಾದ್ಯಂತ ಬಿಕ್ಕಟ್ಟಿನಲ್ಲಿದ್ದು" ಬೆಳೆಯುತ್ತಿರುವ "ಇಸ್ಲಾಮಿಕ್ ಉಗ್ರವಾದ"ದ ವಿರುದ್ಧ "ಫ್ರೆಂಚ್ ಧರ್ಮ ನಿರಪೇಕ್ಷತೆಯ ಮೌಲ್ಯಗಳನ್ನು" ಕಾಪಾಡಲು ತಾವು ಕಟು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದರು.

ಉಗ್ರವಾದಿ ದಾಳಿಗೆ ಪ್ರಚೋದನೆ ನೀಡಿದ ಕಾರ್ಟೂನುಗಳು

2005ರಲ್ಲಿ ಮೊದಲ ಬಾರಿಗೆ ಪ್ರವಾದಿ ಮಹಮ್ಮದ್ ಅವರನ್ನು ಅವಹೇಳನ ಮಾಡುತ್ತವೆ ಎಂದು ಹೇಳಲಾದ ಕಾರ್ಟೂನುಗಳು ಡೆನ್ಮಾರ್ಕಿನ ಪತ್ರಿಕೆಯಲ್ಲಿ ಪ್ರಕಟವಾಗಿದ್ದವು. ಅದನ್ನು ಚಾರ್ಲ್ಸ್ ಹೆಬೆಡೊ' ಎಂಬ ಫ್ರೆಂಚ್ ಪತ್ರಿಕೆ ಸೇರಿದಂತೆ ಹಲವು ಯುರೋಪಿನ ಪತ್ರಿಕೆಗಳು ಪ್ರಕಟಿಸಿದ್ದವು. ಕೆಲವು ಪತ್ರಿಕೆಗಳು ತಮ್ಮದೇ ಆದ ಪ್ರವಾದಿ ಮಹಮ್ಮದ್ ಕಾರ್ಟೂನುಗಳನ್ನು ಪ್ರಕಟಿಸಿದ್ದವು. ಇವು ಫ್ರಾನ್ಸ್ ಸೇರಿದಂತೆ ಯುರೋಪಿನಲ್ಲಿ ಮಾತ್ರವಲ್ಲ ಜಗತ್ತಿನ ಹಲವು ಕಡೆ ವ್ಯಾಪಕ ವಿವಾದ ಮತ್ತು ಮುಸ್ಲಿಂ ದೇಶಗಳಲ್ಲಿ ಹಾಗೂ ಜನಸಾಮಾನ್ಯರಲ್ಲಿ ಆಕ್ರೋಶಕ್ಕೆ ಕಾರಣವಾಗಿತ್ತು.

2011ರಲ್ಲಿ ಮೊದಲ ಬಾರಿಗೆ 'ಚಾರ್ಲ್ಸ್ ಹೆಬೆಡೊ' ಪತ್ರಿಕೆಯ ಕಚೇರಿಯ ಮೇಲೆ ಮತ್ತು ಮುಂದೆಯೂ ಹಲವು ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳಿಂದ ಹಲವು ಹಿಂಸಾತ್ಮಕ ದಾಳಿಗಳಿಗೆ ನೆಪವಾಗಿತ್ತು. ಇದನ್ನು ಆಗಿನಿಂದ ಯುರೋಪಿನಲ್ಲಿ ಬೆಳೆಯುತ್ತಿರುವ ಇಸ್ಲಾಂ–ಭೀತಿ–ದ್ವೇಷಗಳ ಭೂತ ಬೆಳೆದಿತ್ತು ಮತ್ತು ಅದರ ಫಲವಾಗಿ ಬಿಳಿಯ ಪಾರಮ್ಯವಾದಿ ಜನಾಂಗವಾದಿ ಉಗ್ರ ಗುಂಪುಗಳಿಂದ ಮುಸ್ಲಿಮರ ಮೇಲೆ ಹಿಂಸಾತ್ಮಕ ದಾಳಿಗಳೂ ನಡೆದಿವೆ. ಆದರೂ ಈ ಸೆಪ್ಟೆಂಬರ್ ನಲ್ಲಿ 'ಚಾರ್ಲ್ಸ್ ಹೆಬೆಡೊ' ಪತ್ರಿಕೆ ಈ ಕಾರ್ಟೂನುಗಳನ್ನು ಪುನಃ ಪ್ರಕಟಿಸಿತ್ತು. ಅಕ್ಟೋಬರ್ 29 ರ ದಾಳಿ ಸೇರಿದಂತೆ ಇತ್ತೀಚಿನ ಮೂರು ದಾಳಿಗಳನ್ನು ಭಯೋತ್ಪಾದಕ ದಾಳಿಯೆಂದು ಪ್ರೆಂಚ್ ಪೋಲಿಸ್ ತನಿಖಾಧಿಕಾರಿಗಳು ತಿಳಿಸಿದ್ದಾರೆ. ಇದನ್ನು ವಿಶ್ವದಾದ್ಯಂತ ಅನೇಕ ದೇಶಗಳ ಆಡಳಿತಗಳು ಉಗ್ರವಾಗಿ ಖಂಡಿಸಿವೆ. ಆದರೆ, ಈ ತಿಂಗಳಲ್ಲೇ "ಐಫೆಲ್ ಟವರ್" ಬಳಿ ಮುಸುಕು ಧರಿಸಿದ ಇಬ್ಬರು ಮುಸ್ಲಿಂ ಮಹಿಳೆಯರನ್ನು ಹಲ್ಲೆಕೋರರು ಇರಿದರೆ, ಅದು ಪ್ರಾನ್ಸ್‌ನಲ್ಲಿ ಸುದ್ದಿಯಾಗಲಿಲ್ಲ. ಅದನ್ನು ಭಯೋತ್ಪಾದಕ ದಾಳಿಯೆಂದು ಖಂಡಿಸಲಾಗಲಿಲ್ಲ.

ಈ ಹಿನ್ನೆಲೆಯಲ್ಲಿ ಇತ್ತೀಚಿನ ದಾಳಿಯ ನಂತರ ಪ್ರಾನ್ಸ್ ನ ಅದ್ಯಕ್ಷ ಮ್ಯಾಕ್ರಾನ್ ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣವು ಗಮನ ಸೆಳೆದಿದೆ. ಪ್ರಾನ್ಸ್ ನಲ್ಲಿ ಚರ್ಚ್‌ಗಳನ್ನು ಪ್ರಭುತ್ವದಿಂದ, ಅಧಿಕೃತವಾಗಿ ಬೇರ್ಪಡಿಸುವ 1905 ರ ಕಾನೂನನ್ನು ಬಲಪಡಿಸಲು ಸರ್ಕಾರವು ಡಿಸೆಂಬರ್ನಲ್ಲಿ ಮಸೂದೆಯನ್ನು ಮಂಡಿಸುವುದಾಗಿ ಅವರು ಘೋಷಿಸಿದರು. ಹೊಸ ಕ್ರಮಗಳ ಮೂಲ ಉದ್ದೇಶಗಳು, ಫ್ರಾನ್ಸ್ನಲ್ಲಿ ಬೆಳೆಯುತ್ತಿರುವ 'ಇಸ್ಲಾಮಿಕ್ ಉಗ್ರವಾದದ' ಸಮಸ್ಯೆಯನ್ನು ಪರಿಹರಿಸುವ ಮತ್ತು "ಒಟ್ಟಿಗೆ ಬದುಕುವ ನಮ್ಮ ಸಾಮರ್ಥ್ಯವನ್ನು ಸಜ್ಜುಗೊಳಿಸುವ "ಗುರಿಯನ್ನು ಹೊಂದಿವೆ ಎಂದು ತಿಳಿಸಿದರು. ಅವರು ಮಾತನಾಡುತ್ತಾ ಈ ಸೆಪ್ಟೆಂಬರ್ ನಲ್ಲಿ 'ಚಾರ್ಲ್ಸ್ ಹೆಬೆಡೊ' ಪತ್ರಿಕೆ ಈ ಕಾರ್ಟೂನುಗಳನ್ನು ಪುನಃ ಪ್ರಕಟಿಸಿದ್ದನ್ನು ಬೆಂಬಲಿಸಿದರು.

'ಇಸ್ಲಾಮಿಕ್ ಉಗ್ರವಾದದ'ದ ವಿರುದ್ಧ ಮ್ಯಾಕ್ರಾನ್ ಕ್ರಮಗಳು

ಮ್ಯಾಕ್ರಾನ್ ರ ಹೊಸ ಕಾನೂನು ಜನರು ತಮ್ಮ ಆಯ್ಕೆಯ ಯಾವುದೇ ನಂಬಿಕೆಯನ್ನು ಆಚರಿಸಲು ಸೇರಲು ಅವಕಾಶ ನೀಡುತ್ತದೆ. ಆದರೆ ಧಾರ್ಮಿಕ ಗುರುತುಗಳ ಬಾಹ್ಯ ಪ್ರದರ್ಶನಗಳನ್ನು ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಸೇವೆಯಲ್ಲಿ ನಿಷೇಧಿಸುತ್ತದೆ. ಅಂದ ಹಾಗೆ, ಫ್ರೆಂಚ್ ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಸೇವೆಗಳಲ್ಲಿ, ಕೆಲಸದ ಸ್ಥಳದಲ್ಲಿ ಹಿಜಾಬ್ ಧರಿಸುವುದನ್ನು ಈಗಾಗಲೇ ನಿಷೇಧಿಸಲಾಗಿದೆ ಎಂಬ ಅಂಶವನ್ನು ಗಮನಿಸಬೇಕು.

ಮಸೀದಿ ಹಣಕಾಸಿನ ಮೇಲ್ವಿಚಾರಣೆಯಲ್ಲಿ 'ಸುಧಾರಿಸುವ' (ಸರಕಾರದ ಮಧ್ಯಪ್ರವೇಶಕ್ಕೆ ಹಲವು ಬದಲಾವಣೆಗಳನ್ನು ತರುವ) ಮೂಲಕ ಫ್ರಾನ್ಸ್‌ನಲ್ಲಿ ಇಸ್ಲಾಂ ಧರ್ಮವನ್ನು ವಿದೇಶಿ ಪ್ರಭಾವಗಳಿಂದ ಮುಕ್ತಗೊಳಿಸಲು ಪ್ರಯತ್ನಿಸುತ್ತಿರುವುದಾಗಿ ಮ್ಯಾಕ್ರಾನ್ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ತಮ್ಮ ಧಾರ್ಮಿಕ ಸಮುದಾಯಗಳಿಗೆ ಪ್ರತ್ಯೇಕವಾಗಿ ಸೇವೆ ಸಲ್ಲಿಸುತ್ತಿರುವ ಶಾಲೆಗಳು ಮತ್ತು ಸಂಘಗಳ ಬಗ್ಗೆ ಸೂಕ್ಷ್ಮ ಪರಿಶೀಲನೆ ನಡೆಸಲಾಗುವುದು. ಮನೆ ಶಿಕ್ಷಣದ ಮೇಲೆ ತೀವ್ರ ಮಿತಿಗಳನ್ನು ಹೇರಲಾಗುವುದು ಎಂದು ಘೋಷಿಸಿದರು. ಇದರ ಅರ್ಥ, ಫ್ರಾನ್ಸ್ ತನ್ನ ಮುಸ್ಲಿಂ ಅಲ್ಪಸಂಖ್ಯಾತರೊಂದಿಗಿನ ಸಂಬಂಧವನ್ನು ಪುನರ್ನಿರ್ವಚಿಸಿ ಆಮೂಲಾಗ್ರವಾಗಿ ಬದಲಾಯಿಸುತ್ತಿದೆ ಎಂಬುದಾಗಿದೆ. ಯುರೋಪಿನಲ್ಲಿಯೇ ಮುಸ್ಲಿಮರ ಸಂಖ್ಯೆ ಫ್ರಾನ್ಸ್‌ನಲ್ಲಿ ಹೆಚ್ಚಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕು.

ಮ್ಯಾಕ್ರಾನ್ ರ ಹೇಳಿಕೆಗಳು ಮುಸ್ಲಿಂ ಸಮುದಾಯದಲ್ಲಿ ಆಕ್ರೋಶವನ್ನು ಉಂಟು ಮಾಡಿವೆ. ಪ್ರಮುಖ ಫ್ರೆಂಚ್ ಮುಸ್ಲಿಂ ಕಾರ್ಯಕರ್ತರೊಬ್ಬರು ಮ್ಯಾಕ್ರಾನ್ ರು ತಮ್ಮ ಒಂದು ಗಂಟೆಯ ಭಾಷಣದಲ್ಲಿ "ಮುಸ್ಲಿಮರನ್ನು ಪರೋಕ್ಷವಾಗಿ ಬೆದರಿಸಿದರು" ಎಂದು ಟ್ವೀಟ್ ಮಾಡಿದ್ದಾರೆ. ಮ್ಯಾಕ್ರಾನ್ ಬಲಪಂಥೀಯ ಮತ್ತು ಎಡಪಂಥೀಯ ಮುಸ್ಲಿಂ ವಿರೋಧಿಗಳಿಗೆ ಧೈರ್ಯ ತುಂಬಿದರು ಮತ್ತು ಜಾಗತಿಕ ಸಾಂಕ್ರಾಮಿಕ ರೋಗದ ಹೊರತಾಗಿಯೂ ಮನೆ ಶಿಕ್ಷಣದ ಮೇಲೆ ತೀವ್ರ ಮಿತಿಗಳನ್ನು ಹೇರುವ ಮೂಲಕ ಮುಸ್ಲಿಂ ವಿದ್ಯಾರ್ಥಿಗಳ ಭವಿಷ್ಯಕ್ಕೆ ಬೆದರಿಕೆ ಹಾಕಿದರು ಎಂದು ಅವರು ಹೇಳಿದ್ದಾರೆ.

ಮ್ಯಾಕ್ರಾನ್ ಅವರ ಈ ಘೋಷಣೆ ಜಾಗತಿಕವಾಗಿ ತೀವ್ರ ಆಕ್ರೋಶ ಉಂಟು ಮಾಡಿವೆ. ಟುನಿಶಿಯಾ ದಿಂದ ಮಲೇಷ್ಯಾದ ವರೆಗೆ ಮುಸ್ಲಿಂ ಜನ ಅವರ ಹೇಳಿಕೆ ಮತ್ತು ಕ್ರಮಗಳ ವಿರುದ್ಧ ಪ್ರತಿಭಟಿಸಿದ್ದಾರೆ. ಫ್ರೆಂಚ್ ವಸ್ತುಗಳನ್ನು ಬಹಿಷ್ಕರಿಸುವ ಬೆದರಿಕೆ ಹಾಕಲಾಗಿದೆ. ಟರ್ಕಿ, ಮಲೇಷ್ಯಾ ಮುಂತಾದ ದೇಶಗಳ ಸರಕಾರಗಳು ಮುಖ್ಯಸ್ಥರು ಇದನ್ನು ಕಟುವಾಗಿ ಟೀಕಿಸಿದ್ದಾರೆ. ಮುಸ್ಲಿಂ ಜನಸಾಮಾನ್ಯರ ಆಕ್ರೋಶ ನೈಜವಾಗಿದ್ದರೂ, ಈ ನಾಯಕರು, ಮ್ಯಾಕ್ರಾನ್ ಮತ್ತು ಇಸ್ಲಾಮಿಕ್ ಉಗ್ರಗಾಮಿಗಳಿಗೆ ಇದು ಅವರ ರಾಜಕೀಯದಾಟದ ದಾಳವಾಗಿದೆ.

ಫ್ರೆಂಚ್ ಸಮಾಜದಲ್ಲಿ ಇಸ್ಲಾಮ್–ಭೀತಿ ಮತ್ತು ದ್ವೇಷಗಳ ಭೂತ ತೀವ್ರವಾಗಿ ಬೆಳೆಯುತ್ತಿದೆ. ಭಯೋತ್ಪಾದಕ ಕೃತ್ಯಗಳೂ ಹೆಚ್ಚುತ್ತಿವೆ. ನಾಗರಿಕ ಸಮಾಜದಲ್ಲೂ ತೆಳ್ಳನೆಯ ಮುಸುಕು ಮುಚ್ಚಿದ ಮುಸ್ಲಿಂ ವಿರೋಧಿ ಹೇಳಿಕೆಗಳು, ಆಪಾದನೆಗಳು, ಕುಟುಕುವ ಮಾತುಗಳು ಹೆಚ್ಚುತ್ತಿವೆ. ಈಗ ಫ್ರೆಂಚ್ ಪ್ರಧಾನಿ ಮತ್ತು ಹಿರಿಯ ಫ್ರೆಂಚ್ ಮಂತ್ರಿಗಳೂ ಇದರಲ್ಲಿ ಭಾಗಿಯಾಗುತ್ತಿದ್ದಾರೆ. ಇದರ ಫಲವಾಗಿಯೋ ಏನೋ ಎಂಬಂತೆ ಹಿಂಸಾತ್ಮಕ ದಾಳಿಗಳೂ ಹೆಚ್ಚುತ್ತಿವೆ.

2017 ರಲ್ಲಿ, 'ಪ್ಯೂ ರಿಸರ್ಚ್ ಸೆಂಟರ್'ನ ಗ್ಲೋಬಲ್ ಆಟಿಟ್ಯೂಡ್ಸ್ ಸಮೀಕ್ಷೆ' ಯ ಪ್ರಕಾರ ಇಸ್ಲಾಂ ಧರ್ಮವು ಫ್ರಾನ್ಸ್‌ನ ಎರಡನೇ ಅತಿ ದೊಡ್ಡ ಧರ್ಮವಾಗಿದೆ. ಕ್ರಿಶ್ಚಿಯನ್ನರು ಸರಿ ಸುಮಾರು 38 ಮಿಲಿಯನ್ ಮತ್ತು ಮುಸ್ಲಿಮರು 5.5 ಮಿಲಿಯನ್ ಇದ್ದಾರೆ. ಸುಮರು 21 ಮಿಲಿಯನ್ ಫ್ರೆಂಚ್ ಜನರಿಗೆ ಯಾವುದೇ ಧರ್ಮದೊಂದಿಗೆ ಸಂಬಂಧವಿಲ್ಲ ಎಂದು ಈ ಸಮೀಕ್ಷೆ ಪ್ರಕಟಿಸಿದೆ.

ಯುರೋಪಿನಲ್ಲಿ ಯಾಕೆ ಜಗತ್ತಿನಲ್ಲೇ ಧರ್ಮ ಮತ್ತು ಪ್ರಭುತ್ವವನ್ನು ಪ್ರತ್ಯೇಕಿಸುವುದರಲ್ಲಿ ಅತ್ಯಂತ ಯಶಸ್ವಿ ಎಂದು ಪರಿಗಣಿತವಾಗಿದ್ದ, ಫ್ರಾನ್ಸ್ ನ ಪ್ರಭುತ್ವ ಮತ್ತು ಆಳುವ ವಲಯಗಳು ಇಸ್ಲಾಮಿಕ ಭೀತಿ–ದ್ವೇಷಕ್ಕೆ ಆಹಾರ ಒದಗಿಸಿ ಪ್ರೋತ್ಸಾಹ ನೀಡುವ ವ್ಯಾಮೋಹಕ್ಕೆ ಒಳಗಾಗಿವೆ. ಚರ್ಚುಗಳು, ಸ್ಥಳೀಯ ಪತ್ರಿಕೆಗಳು ಮತ್ತು ಇತರೆ ಸಾರ್ವಜನಿಕ ಸಂಸ್ಥೆಗಳಿಗೆ ಸಾಮಾಜಿಕ ಒಗ್ಗಟ್ಟು ಬೆಳೆಸಲು ಮತ್ತು ನಾಗರಿಕ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಮತ್ತು ಪೌರತ್ವದ ಜವಾಬ್ದಾರಿಗಳ ಪ್ರಜ್ಞೆಯನ್ನು ಕಾಪಾಡಲು ಸಹಾಯ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುತ್ವದ ವಿಶೇಷ ಜವಾಬ್ದಾರಿಯಾಗಿದೆ, ಆದರೆ, ಪ್ರಾನ್ಸ್‌ನಲ್ಲಿ ಈ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಫ್ರೆಂಚ್ ಪ್ರಭುತ್ವ ವಿಫಲವಾಗಿದೆ.

ಅಸಮಾನ ಬೆಳವಣಿಗೆ ಮತ್ತು ಸಾಮಾಜಿಕ ಅಸಮಾನತೆಯಿಂದಾಗಿ ಸಾಮಾಜಿಕ ಉದ್ವಿಗ್ನತೆಗಳು ಉಲ್ಬಣಗೊಳ್ಳುತ್ತಿವೆ. ಉಗ್ರ ಆಲೋಚನೆಗಳಿಗೆ ಸಂಘಟನೆಗಳಿಗೆ ಕಾರ್ಯಾಚರಣೆಗಳಿಗೆ ಇಂಟರ್ನೆಟ್ ಗಮನಾರ್ಹವಾಗಿ ಕೊಡುಗೆ ನೀಡುತ್ತಿದೆ. ಬಹುಮುಖ್ಯವಾಗಿ, ಇತ್ತೀಚಿನ ದಶಕಗಳಲ್ಲಿ, 'ಜಾತ್ಯತೀತತೆಯ ರಾಷ್ಟ್ರೀಯ ಸಿದ್ಧಾಂತ' ವನ್ನು ಒಟ್ಟಾರೆಯಾಗಿ ದುರ್ಬಲಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಫ್ರಾನ್ಸ್ನ ರಾಜಕೀಯ ಮತ್ತು ಬೌದ್ಧಿಕ ಸಂಪ್ರದಾಯಗಳು ದುರ್ಬಲಗೊಂಡಿರುವುದು ಎದ್ದು ಕಾಣುತ್ತಿದೆ. ಮ್ಯಾಕ್ರಾನ್ ಇದನ್ನು ಬಲಪಡಿಸುವ ಬದಲು ಅದರ ರಾಜಕೀಯ ಪ್ರಯೋಜನ ಪಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರ ಇತ್ತೀಚಿನ ವರ್ತನೆಯಿಂದ ಕಂಡು ಬರುತ್ತದೆ.

ಮ್ಯಾಕ್ರಾನ್ ಯಾಕೆ ಹೀಗೆ ವರ್ತಿಸುತ್ತಿದ್ದಾರೆ?

ಮ್ಯಾಕ್ರಾನ್ ಯಾಕೆ ಹೀಗೆ ವರ್ತಿಸುತ್ತಿದ್ದಾರೆ ಎಂದು ವಿಶ್ಲೇಷಿಸಿದರೆ ಕಂಡು ಬರುವುದು ಇದು, ಮ್ಯಾಕ್ರಾನ್ ಇಂದು ಹಲವು ಜನವಿಭಾಗಗಳ ಪ್ರತಿಭಟನೆಗಳ ಮುತ್ತಿಗೆಯಲ್ಲಿ ಸಿಕ್ಕಿಕೊಂಡಿರುವ ಒಬ್ಬ ರಾಜಕಾರಣಿ. ಅವರ ಮತದಾರರು ಅವರನ್ನು ತ್ಯಜಿಸುತ್ತಿದ್ದಾರೆ. ಮ್ಯಾಕ್ರಾನ್ 2017 ರಲ್ಲಿ, ತಾನು ವಿಶೇಷವಾಗಿ ನೀಡಿದ್ದ ಆರ್ಥಿಕತೆ ಸುಧಾರಿಸುವ ಭರವಸೆಯನ್ನು ಈಡೇರಿಸಲು ವಿಫಲರಾಗಿದ್ದಾರೆ. ಇದರಿಂದಾಗಿಯೇ ಅತಿರೇಕದ ಬೀದಿ ಪ್ರತಿಭಟನೆಗಳು ಮತ್ತು ಸಾರ್ವಜನಿಕ ವಲಯದ ಪ್ರಮುಖ ಮುಷ್ಕರ ಗಳ ಮೂಲಕ ಪ್ರೆಂಚ್ ಕಾರ್ಮಿಕರು ಮತ್ತು ಸಾಮಾನ್ಯ ಜನರು ತಮ್ಮ ಅಸಮಾಧಾನ ವನ್ನು ತೀವ್ರವಾಗಿ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಗಿಲೆಟ್ಸ್ ಜೌನೆಸ್ (ಅಥವಾ ಹಳದಿ ನಡುವಂಗಿಗಳ) ಪ್ರತಿಭಟನೆಗಳು ದುಡಿಯುವ ಜನರಲ್ಲಿ ಮೂಡಿರುವ ಪರಕೀಯತೆಯ ಆಳವನ್ನು ಎತ್ತಿ ತೋರಿಸುತ್ತವೆ. ಈ ಪ್ರತಿಭಟನೆಗಳನ್ನು ಹತ್ತಿಕ್ಕಲು ಮ್ಯಾಕ್ರಾನ್ ಆಡಳಿತ ಕಡು ಬಲಪ್ರಯೋಗ ಮಾಡಿತು. ಅದು ಇವರ ಜನಪ್ರಿಯತೆಯನ್ಮು ಕುಗ್ಗಿಸಿತು.

ಇದರೊಂದಿಗೆ, ಪಿಂಚಣಿ ಸುಧಾರಣೆಗಳು, ಇಂಧನ ಬೆಲೆ ಏರಿಕೆ, ಪೊಲೀಸ್ ಹಿಂಸೆ ಮತ್ತು ನಿರುದ್ಯೋಗದ ವಿರುದ್ಧ ಕಳೆದ ವರ್ಷದಲ್ಲಿ ಪ್ರತಿಭಟನೆಗಳ ಪ್ರದರ್ಶನಗಳು ಪ್ರಮುಖವಾಗಿ ಭುಗಿಲೆದ್ದವು. ಪ್ರಾನ್ಸ್ ನ ಬೀದಿ ಬೀದಿಗಳಲ್ಲಿ ಮತ್ತು ಬಹುತೇಕ ಎಲ್ಲಾ ನಗರಗಳಲ್ಲೂ ಪ್ರತಿಭಟನೆಗಳು ನಡೆದವು. ಪ್ರೆಂಚ್ ಇತಿಹಾಸದಲ್ಲೇ ಸುದೀರ್ಘವಾದ ಸಾರ್ವಜನಿಕ ಸಾರಿಗೆ ಮುಷ್ಕರಗಳು ವರ್ಷವಿಡೀ ನಡೆದಿವೆ. ಇದು ದೇಶವನ್ನು ಆರ್ಥಿಕವಾಗಿ ದುರ್ಬಲಗೊಳಿಸಿದೆ..

ಈ ಚಳುವಳಿಗಳು, ಮ್ಯಾಕ್ರಾನ್ ರು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದಾಗ 2017 ರಲ್ಲಿ ಇದ್ದ ಸುಮಾರು 60 ಪ್ರತಿಶತದಷ್ಟು ಜನ ಬೆಂಬಲದ ರೇಟಿಂಗ್ಗಳನ್ನು ಅರ್ಧಕ್ಕೆ ಇಳಿಸಿದೆ. ಕಳೆದ ಜೂನ್ನಲ್ಲಿ ನಡೆದ ಪುರಸಭೆ ಚುನಾವಣೆಯಲ್ಲಿ ಇವರ ಪಕ್ಷವು ಹೀನಾಯ ಸೋಲನ್ನು ಅನುಭವಿಸಿತು. ಇದರಿಂದಾಗಿ, ಮುಂಬರುವ ಏಪ್ರಿಲ್ 2022 ರಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆ ಹತ್ತಿರವಾಗುತ್ತಿದ್ದಂತೆ ಮ್ಯಾಕ್ರನ್ ಉದ್ವಿಗ್ನರಾಗುತ್ತಿದ್ದಾರೆ.

ಒಂದು ಕಡೆ ಎಡಪಂಥ ಮತ್ತು ಇನ್ನೊಂದು ಕಡೆ ಉಗ್ರ ಬಲಪಂಥೀಯರ ಬೆಂಬಲ ಹೆಚ್ಚುತ್ತಿರುವುದನ್ನು ತಡೆಯಲು ಇಸ್ಲಾಮಿಕ್–ಭೀತಿ ದ್ವೇಷಗಳ ಭೂತವನ್ನು ಬಳಸಲು ಅವರು ಮುಂದಾಗಿದ್ದಾರೆ. ಇದು ಮ್ಯಾಕ್ರಾನ್ ತಮ್ಮ ರಾಜಕೀಯ ನೆಲೆಯನ್ನು ಮತ್ತೆ ಗಳಿಸುವ ಹತಾಶ ಪ್ರಯತ್ನವಾಗಿದೆ. ಇದರಲ್ಲಿ ಅವರಿಗೆ ಫ್ರೆಂಚ್ ಆಳುವ ವಲಯಗಳಿಂದ ಮತ್ತು ನಡುಪಂಥೀಯರಿಂದ ಬೆಂಬಲ ವ್ಯಕ್ತವಾಗುತ್ತಿದೆ. ಪ್ರಮುಖ ಮಾಧ್ಯಮ ಪಂಡಿತರು ಮತ್ತು ರಾಜಕಾರಣಿಗಳು ಇತ್ತೀಚೆಗೆ "ಫ್ರೆಂಚ್ ಮೌಲ್ಯಗಳು" ಅಪಾಯದಲ್ಲಿವೆ. ಇದಕ್ಕಾಗಿ ಸಾಮಾನ್ಯ ಜನರನ್ನು ಹೋರಾಟಕ್ಕಾಗಿ ಸಜ್ಜುಗೊಳಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಮ್ಯಾಕ್ರಾನ್ ಹೊಸ ಪ್ರಸ್ತಾವನೆಗಳನ್ನು ಬೆಂಬಲಿಸಬೇಕು ಎನ್ನುತ್ತಿದ್ದಾರೆ. ಒಬ್ಬ ರಾಜಕಾರಣಿ "ಮುಸ್ಲಿಂ ವಲಸಿಗರಿಗೆ ಪೌರತ್ವವನ್ನು ರದ್ದುಪಡಿಸುವುದು, ಕಡ್ಡಾಯವಾಗಿ ಫ್ರೆಂಚ್ ಮೊದಲ ಹೆಸರುಗಳನ್ನು ಅಳವಡಿಸಿಕೊಳ್ಳಲು ಒತ್ತಾಯಪಡಿಸುವುದು, ಮತ್ತು ಮರಣದಂಡನೆಯನ್ನು 'ಪುನಃ ಸ್ಥಾಪಿಸುವುದು" ಇತ್ಯಾದಿ ಕ್ರಮಗಳನ್ನೂ ಸೂಚಿಸಿದ್ದಾರೆ.

'ಪ್ರೆಂಚ್ ಸಮಾಜದಲ್ಲಿ ಮುಸ್ಲಿಮರನ್ನು ಕಳಂಕಿತರನ್ನಾಗಿ ಮಾಡಲಾಗುತ್ತಿದೆ' ಎಂದಿರುವ ಮ್ಯಾಕ್ರಾನ್ ರ ಪ್ರಮುಖ ರಾಜಕೀಯ ಎದುರಾಳಿ, ಸಮಾಜವಾದಿ ನಾಯಕ ಜೀನ್–

ಅಬ್ ಕೀ ಬಾರ್ ಬೈಡನ್ ಸರ್ಕಾರ್
ಮೋದಿ ಸರ್ಕಾರ್‌ಗೆ ನುಂಗಲಾರದ ತುತ್ತು !

ಮೋದಿ ಅವಧಿಯಲ್ಲಿ ಟ್ರಂಪ್ ಅವರನ್ನು ಸಂಪ್ರೀತಗೊಳಿಸಲು ವಿಶೇಷ ಗಮನ ಕೊಡಲಾಯಿತು. ಇದು ಭಾರತದ ರಾಜತಾಂತ್ರಿಕ ಅಥವಾ ರಾಷ್ಟ್ರೀಯ ಹಿತಾಸಕ್ತಿಯ ಅಗತ್ಯವಾಗಿರಲಿಲ್ಲ. ಈ ವಿಶೇಷ ಸಂಬಂಧಕ್ಕೆ ಕಾರಣ ಅವರ ಸೈದ್ಧಾಂತಿಕ ಒಲವು. ಹೊಸ ಅಧ್ಯಕ್ಷೀಯ ಆಡಳಿತ ಅಮೆರಿಕದಲ್ಲಿ ಆರಂಭವಾಗುತ್ತಿದ್ದು, ಸ್ವತಂತ್ರ ವಿದೇಶಾಂಗ ನೀತಿ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯನ್ನು ಎತ್ತಿ ಹಿಡಿಯಲು ಇದು ಸರಿಯಾದ ಸಮಯ. ಅಮೆರಿಕದ ಅಡಿಯಾಳು ಸ್ಥಿತಿಯಿಂದ ಭಾರತ ಹೊರಬರಲು ಇದು ಸಕಾಲ. ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳಾಗುವ ಹಪಾಹಪಿ ಹಿಂದುತ್ವ ರಾಷ್ಟ್ರವಾದದ ಅಂಗವಾಗಿರುವಾಗ ಇದನ್ನು ಮಾಡುವುದು ಅವರಿಗೆ ಸಾಧ್ಯವೇ?

ಅಮೆರಿಕದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಜೋ ಬೈಡನ್ ಅವರ ಗೆಲುವು ಪ್ರಧಾನಿ ಮೋದಿ ಮತ್ತು ಅವರ ಸರಕಾರಕ್ಕೆ ನುಂಗಲಾರದ ತುತ್ತಾಗಿದೆ. ಯಾಕೆಂದರೆ ಅವರು ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿಯೊಬ್ಬರನ್ನು ಬಹಿರಂಗವಾಗಿ ಬೆಂಬಲಿಸಿದ ಮೊದಲ ಭಾರತೀಯ ಪ್ರಧಾನಿ. ಸೆಪ್ಟೆಂಬರ್ 2019ರಲ್ಲಿ ಹೂಸ್ಟನ್ ನಲ್ಲಿ "ಅಬ್ ಕೀ ಬಾರ್ ಟ್ರಂಪ್ ಸರ್ಕಾರ್" ಎಂದು ಘೋಷಿಸಿದ ನಡೆದ 'ಹೌಡಿ ಮೋದಿ' ರ‍್ಯಾಲಿ ಮತ್ತು ಅಹ್ಮದಾಬಾದ್ ನಲ್ಲಿ ಫೆಬ್ರುವರಿ 2020ರಲ್ಲಿ ಟ್ರಂಪ್ ಬೆಂಬಲಾರ್ಥ ನಡೆಸಿದ 'ನಮಸ್ತೆ ಟ್ರಂಪ್' ರ‍್ಯಾಲಿ ಮೂಲಕ ಈ ಬೆಂಬಲವನ್ನು ಅವರು ಸೂಚಿಸಿದ್ದರು.

ಡೆಮೊಕ್ರಾಟ್ ಮತ್ತು ರಿಪಬ್ಲಿಕನ್ ಪಕ್ಷಗಳ ನಡುವೆ ನಡೆಯುವ ರಾಜಕೀಯ ಸ್ಪರ್ಧೆಯಲ್ಲಿ ಭಾರತ ಸರಕಾರ ತಟಸ್ಥವಾಗಿರುವುದು ಹಿಂದಿನಿಂದಲೂ ಪಾಲಿಸಿಕೊಂಡು ಬಂದ ಸಂಪ್ರದಾಯವಾಗಿತ್ತು. ಏಕೆಂದರೆ ಕಳೆದ ಮೂರು ದಶಕಗಳಿಂದ ಭಾರತ–ಅಮೆರಿಕಗಳ ನಡುವೆ ಸಾಧಿಸಲಾದ ವ್ಯೂಹಾತ್ಮಕ ಸಂಬಂಧಕ್ಕೆ ಈ ಎರಡೂ ಪಕ್ಷಗಳ ಬೆಂಬಲವಿತ್ತು. ಮಾತ್ರವಲ್ಲ, ಅಧ್ಯಕ್ಷ ಡೆಮೊಕ್ರಾಟ್ ಇರಲಿ ಅಥವಾ ರಿಪಬ್ಲಿಕನ್ ಇರಲಿ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಪರವಾದ ನೀತಿಗಳನ್ನೇ ಅನುಸರಿಸುವುದು. ಯುಪಿಎ ಸರಕಾರದ ಅವಧಿಯಲ್ಲಿ ಬುಶ್ ಅವಧಿಯಲ್ಲಿ ವ್ಯೂಹಾತ್ಮಕ ಸಂಬಂಧ ಗಟ್ಟಿಗೊಂಡು ಒಬಾಮ ಅವಧಿಯಲ್ಲೂ ಅದು ಮುಂದುವರೆಯಿತು.

ಆದರೆ ಮೋದಿ ಅವಧಿಯಲ್ಲಿ ಟ್ರಂಪ್ ಅವರನ್ನು ಸಂಪ್ರೀತಗೊಳಿಸಲು ವಿಶೇಷ ಗಮನ ಕೊಡಲಾಯಿತು. ಭಾರತದ ರಾಜತಾಂತ್ರಿಕ ಅಥವಾ ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಇದೇನೂ ಅಗತ್ಯವಾಗಿರಲಿಲ್ಲ. ಈ ವಿಶೇಷ ಸಂಬಂಧಕ್ಕೆ ಕಾರಣ ಅವರ ಸೈದ್ಧಾಂತಿಕ ಒಲವು. ಟ್ರಂಪ್ ಮತ್ತು ಅವರ ಆಡಳಿತ ನಡೆಸುತ್ತಿದ್ದ ಉಗ್ರ ಬಲಪಂಥೀಯ ವಲಯಗಳ ಜತೆ ಬಿಜೆಪಿ–ಆರೆಸ್ಸೆಸ್ ಗೆ ಸೈದ್ಧಾಂತಿಕ ಸಾಂಗತ್ಯ ಕಂಡಿತ್ತು. ಟ್ರಂಪ್ ವಾದದ ಬಿಳಿಯರ ಪಾರಮ್ಯ–ಶ್ರೇಷ್ಠತೆ ಮತ್ತು ಜನಾಂಗವಾದಿ ಲೋಕದೃಷ್ಟಿ ಹಾಗೂ, ಇಸ್ಲಾಮ್–ಭೀತಿಯ ಭೂತದ ಮತ್ತು ಚೀನಾ–ವಿರೋಧಗಳ ಮಂತ್ರಪಠಣ ಅವರಿಗೆ ಬಹಳ ಆಪ್ಯಾಯಮಾನವಾಗಿತ್ತು. ಬಿಳಿಯರ ರಾಷ್ಟ್ರೀಯತೆಯಲ್ಲಿ ಅವರಿಗೆ ಹಿಂದುತ್ವ ರಾಷ್ಟ್ರವಾದದ ಮಾರ್ದನಿ ಕೇಳಿಸುತ್ತಿತ್ತು.

ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ ಹರ್ಷ ವರ್ಧನ ಶೃಂಗಾಲ ಅವರ ವರ್ತನೆಯಲ್ಲಿ ಈ ಸೈದ್ಧಾಂತಿಕ ಪ್ರೇಮಪ್ರಕರಣ ಬಹಳ ಸ್ಪಷ್ಟವಾಗಿ ಕಂಡಿತ್ತು. ಶೃಂಗಾಲ ಭಾರತದ ರಾಯಭಾರಿಯಾಗಿದ್ದಾಗ ಸ್ಟೀಫನ್ ಬ್ಯಾನನ್ ಎಂಬ ಬಿಳಿಯರ ಪಾರಮ್ಯವಾದಿ ಮತ್ತು ಮುಸ್ಲಿಂ–ದ್ವೇಷಿಯನ್ನು ಭೇಟಿ ಮಾಡಿದ್ದರು. 'ದಂತಕತೆಯಾಗಿರುವ ಸಿದ್ಧಾಂತಿ ಮತ್ತು ಹಿಂದೂ ಪುಣ್ಯಗ್ರಂಥ ಭಗವದ್ಗೀತೆಯ ಹಿಂಬಾಲಕ ಧರ್ಮಯೋಧನನ್ನೂ ಭೇಟಿ ಮಾಡಿ ಸಂತೋಷವಾಯಿತು" ಎಂದು ಟ್ವೀಟ್ ಮಾಡಿದ್ದರು. ಸ್ಟೀಫನ್ ಬ್ಯಾನನ್ ಉಗ್ರ ಬಲಪಂಥೀಯ ವಿಚಾರಗಳು ಎಷ್ಟು ಅನಪೇಕ್ಷಣೀಯವಾಗಿದ್ದವೆಂದರೆ, ಟ್ರಂಪ್ ಅವರ ಉಗ್ರ ಬಲಪಂಥೀಯ ತಂಡ ಸಹ ಅದನ್ನು ಸಹಿಸದೆ ಶ್ವೇತಭವನದ ಕಚೇರಿಯ ಭಾಗವಾಗಿದ್ದ ಅವರನ್ನು ತೆಗೆದು ಹಾಕಿತ್ತು. ಆ ಮೇಲೆ ಸ್ವಲ್ಪ ಸಮಯದಲ್ಲೇ ಅವರನ್ನು ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಿಸಲಾಯಿತು.

ವಿದೇಶಾಂಗ ಸಚಿವ ಜೈಶಂಕರ್ ಅಮೆರಿಕದ ವಿದೇಶಾಂಗ ವ್ಯವಹಾರಗಳ ಪಾರ್ಲಿಮೆಂಟರಿ ಸಮಿತಿಯ ನಾಯಕತ್ವದ ತಂಡದ ಭೇಟಿ ಮಾಡಲು ನಿರಾಕರಿಸಿದ್ದು, ಮೋದಿ ಸರಕಾರದ ಟ್ರಂಪ್ ಆಡಳಿತದ ಪರವಾದ ಪಕ್ಷಪಾತದ ಇನ್ನೊಂದು ಪ್ರಕರಣವಾಗಿತ್ತು. ಡಿಸೆಂಬರ್ 2019ರಲ್ಲಿ ಭಾರತ ಸರಕಾರ ಜಮ್ಮು–ಕಾಶ್ಮೀರದಲ್ಲಿ ಹೊರಿಸಿರುವ ಸಂವಹನ ನಿರ್ಬಂಧಗಳು ಮತ್ತು ರಾಜಕೀಯ ಕೈದಿಗಳ ಬಂಧನಗಳನ್ನು ಹಿಂತೆಯಬೇಕು ಹಾಗೂ ರಾಜ್ಯದಲ್ಲಿ ಪತ್ರಿಕಾ ಸ್ವಾತಂತ್ರ್ಯ ಕಾಪಾಡಬೇಕು ಎಂಬ ಉಭಯ–ಪಕ್ಷಗಳ ಸದಸ್ಯರು ಬೆಂಬಲಿಸಿದ ನಿರ್ಣಯವನ್ನು ಮಂಡಿಸಿದ ಡೆಮೊಕ್ರಾಟಿಕ್ ಪಾರ್ಲಿಮೆಂಟ್ ಸದಸ್ಯೆ ಪ್ರಮೀಳಾ ಜಯಪಾಲ್ ತಂಡದ ಭಾಗವಾಗಿದ್ದರು ಎಂದು ಇದಕ್ಕೆ ಕೊಡಲಾದ ಕಾರಣ.

ಸಂಪ್ರದಾಯ ಮುರಿದ ಈ ಕ್ರಮಗಳಿಂದಾಗಿ ಈಗ ಮೋದಿ ಸರಕಾರ 'ಯೂ–ಟರ್ನ್' ಮಾಡಿ ಬೈಡನ್ ಸಂಕಾರವನ್ನು ಸ್ವಾಗತಿಸದೆ ಬೇರೆ ದಾರಿಯಿಲ್ಲ. ಜಮ್ಮು–ಕಾಶ್ಮೀರದಲ್ಲಿ ಭಾರತ ಸರಕಾರದ ಕ್ರಮಗಳನ್ನು ಕಟುವಾಗಿ ಟೀಕಿಸಿದ್ದ ಕಮಲಾ ಹ್ಯಾರೀಸ್ ಅವರನ್ನು ಹಾಡಿ ಹೊಗಳಬೇಕಾಗಿ ಬಂದಿದೆ. ಮೋದಿ ಸರಕಾರದ ಟ್ರಂಪ್ ಪರ ಅನಗತ್ಯ ಪಕ್ಷಪಾತವನ್ನು ಬೆಂಬಲಿಸಿದ್ದ ವ್ಯೂಹಾತ್ಮಕ ನೀತಿ ಪರಿಣತರು ಮತ್ತು ರಾಜಕೀಯ ವೀಕ್ಷಕರು ಬೈಡನ್ ಆಡಳಿತ ಮೂರು ದಶಕಗಳಿಂದ ಸ್ಥಾಪಿತವಾದ ವ್ಯೂಹಾತ್ಮಕ ಸಂಭಂಧಗಳನ್ನು ಮುಂದುವರೆಸುತ್ತದೆ ಎಂದು ಹೇಳುತ್ತಿದ್ದಾರೆ. ಅದು ಸ್ವಯಂವಿದಿತ.

ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ಟ್ರಂಪ್ ಆಡಳಿತದ ಜತೆ ಇಷ್ಟು ಪಕ್ಷಪಾತ ತೋರಿಯೂ – ಹವಾಮಾನ ಒಪ್ಪಂದ ಮುಂತಾದ ಅಂತರ್‍ರಾಷ್ಟ್ರೀಯ ಒಪ್ಪಂದಗಳು, ಇರಾನ್ ಜತೆ ತೈಲ ಮತ್ತಿತರ ವ್ಯಾಪಾರ, ಭಾರತೀಯ ಐಟಿ ಉದ್ಯಮದ ಅಗತ್ಯವಾದ ವೀಸಾ ನಿಯಮಗಳು – ಇತ್ಯಾದಿಗಳಲ್ಲಿ ಭಾರತದ ಹಿತಾಸಕ್ತಿಗೆ ವಿರುದ್ಧವಾಗಿ ಸಾಮ್ರಾಜ್ಯಶಾಹಿ ಗೂಳಿಯಂತೆ ವರ್ತಿಸುತ್ತಿದ್ದ ಮತ್ತು ಅದರ ಜಾಗತಿಕ ಮತ್ತು ಏಶ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಯಜಮಾನಿಕೆ ಸ್ಥಾಪಿಸಲು ಭಾರತವನ್ನು ಕಾಲಾಳುವಿನಂತೆ ಬಳಸಿದ್ದರ ಕಹಿ ಅನುಭವದಿಂದ ಭಾರತದ ಆಳುವ ವಲಯ ಏನಾದರೂ ಪಾಠ ಕಲಿಯಬಹುದೇ ಎಂಬುದು ನಿಜವಾದ ಪ್ರಶ್ನೆ.

ಹೊಸ ಅಧ್ಯಕ್ಷೀಯ ಆಡಳಿತ ಅಮೆರಿಕದಲ್ಲಿ ಆರಂಭವಾಗುತ್ತಿದ್ದು, ಸ್ವತಂತ್ರ ವಿದೇಶಾಂಗ ನೀತಿ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯನ್ನು ಎತ್ತಿ ಹಿಡಿಯಲು ಇದು ಸರಿಯಾದ ಸಮಯ. ಅಮೆರಿಕದ ಅಡಿಯಾಳು ಸ್ಥಿತಿಯಿಂದ ಭಾರತ ಹೊರಬರಲು ಇದು ಸಕಾಲ. ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳಾಗುವ ಹಪಾಹಪಿ ಹಿಂದುತ್ವ ರಾಷ್ಟ್ರವಾದದ ಅಂಗವಾಗಿರುವಾಗ ಇದನ್ನು ಮಾಡುವುದು ಅವರಿಗೆ ಸಾಧ್ಯವೇ?



ಅಬ್ ಕೀ ಬಾರ್...
ವ್ಯಂಗ್ಯಚಿತ್ರ: ಅಲೋಕ್ ನಿರಂತರ್/ಫೇಸ್‌ಬುಕ್

ಲುಕ್ ಅವರ ಮೇಲೆ 'ಇಸ್ಲಾಮಿಕ್ ಉಗ್ರವಾದಕ್ಕೆ ಬೆಂಬಲ ಕೊಡುತ್ತಿದ್ದಾರೆ' ಎಂಬ ಆಪಾದನೆ ಹೊರಿಸಲು ಅಭಿಯಾನ ಪ್ರಾರಂಭವಾಗಿದೆ. ಫ್ರೆಂಚ್ ಆಳುವ ವಲಯಗಳು ತಮ್ಮ ರಕ್ಷಣೆಗೆ ಸೃಷ್ಟಿಸಿರುವ ಇಸ್ಲಾಮಿಕ–ಭೀತಿ ದ್ವೇಷಗಳ ಅಲೆಯ ಮೇಲೆ ಮ್ಯಾಕ್ರಾನ್ ಚಲಿಸುತ್ತಿದ್ದಾರೆ. ತಮ್ಮ ರಾಜಕೀಯ ವೈಫಲ್ಯಗಳಿಂದ ತಮ್ಮ ರಾಜಕೀಯ ಅಸ್ತಿತ್ವದ ಸವಾಲು ಎದುರಿಸುತ್ತಿರುವ ರಾಜಕಾರಣಿಗಳು ಜಗತ್ತಿನ ಎಲ್ಲೆಡೆ ಮಾಡುವಂತೆ ಮ್ಯಾಕ್ರಾನ್ ಸಹ ಜನರ ಗಮನ ಬೇರಡೆಗೆ ಸೆಳೆಯುವ ಉಗ್ರ ಬಲಪಂಥದ ಆಟದ ಪಟ್ಟುಗಳ ಮೊರೆ ಹೋಗಿದ್ದಾರೆ. ಆದರೆ ಮೂಲ ಸಮಸ್ಯೆ ಬೇರೆಯೇ ಆಗಿದೆ.

"ಹಿಂಸಾತ್ಮಕ ಉಗ್ರವಾದಕ್ಕೆ ಧರ್ಮವು ಒಂದು ಪ್ರಾಥಮಿಕ ಪ್ರೇರಕ" ವಾಗಿದೆ ಎಂದು ಸೂಚಿಸಲು ಯಾವುದೇ ಪ್ರಾಯೋಗಿಕ ಪುರಾವೆಗಳು ಫ್ರಾನ್ಸ್ ನಲ್ಲಿ ಸಿಕ್ಕಿಲ್ಲ. ಉದ್ಯೋಗ ಮತ್ತು ವಸತಿ ತಾರತಮ್ಯ, ಪೊಲೀಸ್ ದೌರ್ಜನ್ಯ ಮತ್ತು ಬಡತನ, ದೈನಂದಿನ ವರ್ಣಭೇದ ನೀತಿ ಇವುಗಳು ಸೃಷ್ಟಿಸಿರುವ ಪರಕೀಯತೆ ಮತ್ತು ತೀವ್ರ ಸಾಮಾಜಿಕ ಸಮಸ್ಯೆಗಳ ಫಲ ಇದು. ಮುಸ್ಲಿಂ ಸಮುದಾಯವು ಫ್ರೆಂಚ್ ಸಮಾಜದೊಂದಿಗೆ "ಸಂಯೋಜನೆ" ಹೊಂದಲು ವಿಫಲವಾಗಿದೆ ಎಂದು ಆರೋಪ ಸಹ ನಿಜವಲ್ಲ. ಈ ಮೂಲಕ ಮುಸ್ಲಿಮರ ಜೀವನದ ವಿಧಾನಕ್ಕೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಂತಹ ಮೂಲಭೂತ ಹಕ್ಕುಗಳಿಗೆ ಬೆದರಿಕೆಯೊಡ್ಡುವುದು ಪರಿಹಾರವಲ್ಲ. ಎಂದು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಹು–ಧರ್ಮೀಯ ಬಹು–ಸಾಂಸ್ಕೃತಿಕ ಸಮಾಜವಾಗಿರುವ ಫ್ರಾನ್ಸ್ ಸೆಕ್ಯುಲರ್ ಪ್ರಜಾಪ್ರಭುತ್ವವಾಗಿ ಮುಂದುವರೆಯಲು ಹರಸಾಹಸ ಪಡುತ್ತಿದೆ. ಆದರೆ ಫ್ರೆಂಚ್ ಪ್ರಭುತ್ವವು ಸುಲಭದ ಅಡ್ಡದಾರಿ ಹುಡುಕಿಕೊಳ್ಳಲು ಪ್ರಯತ್ನಿಸುತ್ತಿದೆ. ದೇಶದ ಬಹು–ಸಂಖ್ಯಾತ ಜನರನ್ನು, ಮುಸ್ಲಿಂ ವಿಭಾಗದಿಂದ ಪ್ರತ್ಯೇಕಿಸಿ ಅವರನ್ನು ಹೊರಗಿನವರು ಎಂದು ಪರಿಗಣಿಸಲು ಪ್ರಯತ್ನಿಸುತ್ತಿದೆ. ಫ್ರೆಂಚ್ ಪ್ರಭುತ್ವವನ್ನು ನಡೆಸುತ್ತಿರುವ ಬೂರ್ಜ್ವಾ ವರ್ಗದ ಪ್ರತಿನಿಧಿಯಾಗಿ ಮ್ಯಾಕ್ರಾನ್ ತಮ್ಮ ರಾಜಕೀಯ ಅಸ್ತಿತ್ವಕ್ಕೂ ಅಗತ್ಯವಾಗಿರುವ ಈ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ■

ಸಫ್ದರ್ ನಂತೆ ಆಳರಸರ ಮುಂದೆ ಸತ್ಯ ಹೇಳಬಲ್ಲೆನೆ....

ಪುಟ 16 ರಿಂದ

ದಾಳಿಯಲ್ಲಿ ಒಬ್ಬ ಕಾರ್ಮಿಕ (ರಾಮ್ ಬಹಾದ್ದೂರ್ ಎಂಬ ನೇಪಾಳಿ ವಲಸೆ ಕಾರ್ಮಿಕ) ಮತ್ತು ಕಲಾವಿದ (ಸಫ್ದರ್) ಹುತಾತ್ಮರಾದರು ಎಂಬುದು ಅರ್ಥಗರ್ಭಿತ ಸಂಕೇತವೆಂದು ಸುಧನ್ವ ವಿವರಿಸಿದರು.

ಒಟ್ಟಿಗೆ ಪ್ರಕಟಗೊಂಡ ಮೂಲ ಇಂಗ್ಲಿಷ್ ಮತ್ತು ಹಿಂದಿಯ ಅನುವಾದದ ನಂತರ ಮೊದಲ ಅನುವಾದ ಕನ್ನಡದಲ್ಲಿ ಪ್ರಕಟವಾಗುತ್ತಿರುವುದು ಮತ್ತು ಅದರ ಅನುವಾದವನ್ನು 70ರ ದಶಕದಲ್ಲಿ ಪ್ರಬಲ ಪ್ರಗತಿಪರ ರಂಗಚಳುವಳಿಯನ್ನು ಆರಂಭಿಸಿದ್ದ ಸಮುದಾಯದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಮತ್ತು ಸಫ್ದರ್ ಗೆಳೆಯರೂ ಆಗಿದ್ದ ಎಂ.ಜಿ.ವೆಂಕಟೇಶ್ ಮಾಡಿರುವುದು ನನಗೆ ಸಂತೋಷ ತಂದಿದೆ ಮತ್ತು ಅದು ಸೂಕ್ತವೂ ಆಗಿದೆ. ಏಕೆಂದರೆ ಸಫ್ದರ್ ನೋಡಿದ್ದ ಸಮುದಾಯದ ಬೀದಿನಾಟಕ 'ಬೆಲ್ಚಿ'ಯನ್ನು ಬಹುವಾಗಿ ಮೆಚ್ಚಿಕೊಂಡಿದ್ದ, ಎಂದು ಕನ್ನಡ ಅನುವಾದದ ಕುರಿತು ಸುಧನ್ವ ಸಂತೋಷ ವ್ಯಕ್ತ ಪಡಿಸಿದರು. ಮಾಲಾಶ್ರೀ ಹಶ್ಮಿ ಅವರು ಉಪಸ್ಥಿತರಿದ್ದರು.

'ಅಧಿಕಾರಸ್ಥರ ಕೊವಿದ್' ಗೆ ಮದ್ದು ಅರೆಯುವವರ ಧರ್ಮಗ್ರಂಥವಿದು': ಬೊಳುವಾರು

ಸಫ್ದರ್ ಅವರ ಜೀವನ ಮತ್ತು ಆದರ್ಶಗಳು ಕಾರ್ಮಿಕರ ಕಾನೂನುಗಳನ್ನು ಕಾರ್ಮಿಕ ವಿರೋಧಿಯಾಗಿ ಬದಲಾಯಿಸುತ್ತಿರುವಾಗ, ಕಲಾವಿದ–ಬುದ್ಧಿಜೀವಿಗಳ ಬೇಟೆ ಕೊಲೆಗಳು ನಡೆಯುತ್ತಿರುವ ಇಂದು ಹಿಂದೆಂದಿಗಿಂತಲೂ ಪ್ರಸ್ತುತವಾಗಿದೆಯೆಂದು ಅನುವಾದಕ ಎಂ..ಜಿ.ವೆಂಕಟೇಶ ಅವರು ಹೇಳಿದರು. 1989ರಲ್ಲಿ ಸಫ್ದರ್ ಅವರ ಸಾವಿನ ನಂತರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತಾ ಸರ್ವಾಧಿಕಾರ ಶಕ್ತಿಗಳು ಇನ್ನು ಮೇಲೆ "ತುರ್ತು ಪರಿಸ್ಥಿತಿ ಹೇರುವುದಿಲ್ಲ. ಅದರ ವಿರೋಧಿಗಳನ್ನು ಜೈಲಿಗೆ ಅಟ್ಟುವುದಿಲ್ಲ. ಗೂಂಡಾಗಳನ್ನು ಬಿಟ್ಟು ಕೊಲ್ಲಿಸುತ್ತದೆ" ಎಂದು ಪ್ರೊ. ಜಿ.ಪಿ.ದೇಶಪಾಂಡೆ ಹೇಳಿದ್ದನ್ನು ನೆನಪಿಸಿಕೊಂಡ ಅವರು ಈ ಮಾತುಗಳನ್ನು ಇವತ್ತೇ ಹೇಳಿದ ಹಾಗಿದೆ ಎಂದರು.

ಸಿನಿಮಾ ರಂಗಭೂಮಿ ಕಲಾವಿದ ಅಚ್ಯುತ ಕುಮಾರ್ ಮಾತನಾಡುತ್ತಾ ಹಶ್ಮಿ ಅವರ ರಂಗ ಚಟುವಟಿಕೆಗಳು, ನಡವಳಿಕೆಗಳು ನಮ್ಮನ್ನು ಸದಾ ಕಾಡುತ್ತವೆ. 1980ರ ದಶಕದಿಂದಲೇ ಆಳುವ ಸರಕಾರಗಳು ಕಲಾವಿದರ ದನಿ ಅಡಗಿಸುವ ಪ್ರಯತ್ನ ಮಾಡುತ್ತಿವೆ. ನಾವೇ ಆಯ್ಕೆ ಮಾಡಿದ ಸರಕಾರಗಳು ನಮ್ಮ ದನಿಯನ್ನು ಅಡಗಿಸುವ ಕೆಲಸ ಮಾಡುತ್ತಿವೆ ಎಂದರು. ರಂಗ ಕಲಾವಿದೆ ಗಿರಿಜಾ ಪಿ ಸಿದ್ದಿ ಪುಸ್ತಕದ ಒಂದು ಪ್ರಮುಖ ಭಾಗವನ್ನು ಪರಿಣಾಮಕಾರಿಯಾಗಿ ಓದಿದರು.


ನಾವು ಇಂದು ಎರಡು ವಿಧವಾದ ಕೊವಿದ್ ಎದುರಿಸುತ್ತಿದ್ದೇವೆ. ಒಂದು ಜನರ ಶ್ವಾಸಕೋಶದ ಮೇಲೆ ದಾಳಿ ಮಾಡಿ ಉಸಿರು ತೆಗೆಯುವ ಕೊವಿದ್. ಅದಕ್ಕೆ ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿ ವ್ಯಾಕ್ಸೀನ್ ಕಂಡು ಹಿಡಿದಾರು. ಇನ್ನೊಂದು ನಮ್ಮ ಸಂವಿಧಾನದ ಕತ್ತನ್ನು ಒತ್ತಿ ಹಿಡಿದಿರುವ ಅಧಿಕಾರಸ್ಥರ ಕೊವಿದ್. ಇದಕ್ಕೆ ಮದ್ದು ಅರೆಯಲು ನಡುಬೀದಿಯಲ್ಲಿ "ಸತ್ಯವನ್ನೇ ಹೇಳುತ್ತೇನೆ, ಸತ್ಯವಲ್ಲದೆ ಇನ್ನೇನನ್ನೂ ಹೇಳುವುದಿಲ್ಲ' ಎಂದು ಗಟ್ಟಿದನಿಯಲ್ಲಿ ಹೇಳಬಲ್ಲ ಯುವಜನರೇ ಬೇಕು. ಗಾಂಧೀಜಿಯವರ ಕನಸಿನ 'ರಾಮರಾಜ್ಯ'ವನ್ನು ಕಟ್ಟಬಯಸುವ ಅವರಿಗೆ ಈ 'ಹಲ್ಲಾ ಬೋಲ್' ಎಂಬ ಪುಸ್ತಕ ಒಂದು ಭಗವದ್ಗೀತೆಯೇ ಆಗಬಹುದು ಎಂದು ಮಾರ್ಮಿಕ ಸಮಾರೋಪ ನುಡಿಗಳನ್ನಾಡಿದವರು ಸಮುದಾಯ ಕರ್ನಾಟಕದ ಗೌರವಾಧ್ಯಕ್ಷ ಮತ್ತು ಹಿರಿಯ ಲೇಖಕ ಬೊಳುವಾರು ಮಹಮ್ಮದ್ ಕುಂಞ.

ಸಮುದಾಯ ಕರ್ನಾಟಕದ ಕೆ.ಎಸ್.ವಿಮಲ ಅವರು ಈ ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಿದರು. ಕಾರ್ಯಕ್ರಮದಲ್ಲಿ ಋತುಮಾನ ಜತೆ ಸಹಯೋಗದಲ್ಲಿ ತಯಾರಿಸಿದ ಮತ್ತು ಅವರ ಆಪ್ ನಲ್ಲಿ ಲಭ್ಯವಿರುವ 'ಹಲ್ಲಾ ಬೋಲ್; ಇ–ಪುಸ್ತಕ ಅವತರಣಿಕೆಯನ್ನೂ ಬಿಡುಗಡೆ ಮಾಡಲಾಯಿತು. ಮಾಧ್ಯಮ ಸಹಯೋಗ ನೀಡಿದ್ದ ಜನಶಕ್ತಿ ಮೀಡಿಯಾ ತನ್ನ ಫೇಸ್ ಬುಕ್ ಪುಟದಲ್ಲಿ ಈ ಕಾರ್ಯಕ್ರಮವನ್ನು ಲೈವ್ ಪ್ರಸಾರ ಮಾಡಿತು. ■

JANASHAKTHI KANNADA VARA PATRIKE November 16-22, 2020 Price: Rs. 10/- Date of Publication: 13 November 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



"ಸಫ್ದರ್ ಸಾವು ಮತ್ತು ಬದುಕಿನ ಕುರಿತು 'ಹಲ್ಲಾ ಬೋಲ್' ಪುಸ್ತಕವನ್ನು ಓದುತ್ತಿದ್ದಾಗ ನಾನು ಸರದಿಯಲ್ಲಿ ಹಲವು ಭಾವಗಳ ಮೂಲಕ ಹಾದು ಹೋದೆ – ಮಾಹಿತಿ ಪಡೆದೆ, ತಮಾಷೆಯೆನಿಸಿತು, ಕಸಿವಿಸಿಗೊಂಡೆ, ಭಾವುಕನಾದೆ ಮತ್ತು ಆಕ್ರೋಶಭರಿತನಾದೆ, ಅವರ ಜೀವನದಿಂದ ಒಬ್ಬ ಕಲಾವಿದನ ಬದುಕು ಸಮಾಜಕ್ಕೆ ಪ್ರಯೋಜನಕಾರಿ ಮತ್ತು ಪರಿಣಾಮಕಾರಿ ಆಗಬಲ್ಲುದು. ಅವರ ತಕ್ಷಣದ ಪ್ರಭಾವ, ಪರಿಣಾಮಗಳು ಇಲ್ಲದಿದ್ದರೂ, ಕಲಾವಿದರು, ಬುದ್ಧಿಜೀವಿಗಳು ಮತ್ತು ರಾಜಕೀಯ–ಸಾಮಾಜಿಕ ಕಾರ್ಯಕರ್ತರಿಗೆ ಸರ್ವಾಧಿಕಾರಿ ಮತ್ತು ಫ್ಯಾಸಿಸ್ಟ್ ಶಕ್ತಿಗಳು ಯಾಕೆ ಇಷ್ಟು ಹೆದರುತ್ತವೆ ಎಂದು ತಿಳಿದುಕೊಂಡೆ."



ಸಫ್ದರ್ ನಂತೆ ಆಳರಸರ ಮುಂದೆ ಸತ್ಯ ಹೇಳಬಲ್ಲೆನೆ?: ನಾಸಿರುದ್ದೀನ್ ಶಾ



ವಸಂತರಾಜ ಎನ್.ಕೆ.

ಸಫ್ದರ್ ಕೊಲೆಯಾದಾಗ ಅವನಂತೆಯೇ ಒಬ್ಬ ರಂಗ ಕಲಾವಿದನಾಗಿದ್ದ ನನಗೆ ಹಲವು ಪ್ರಶ್ನೆಗಳು ಎದುರಾದವು. ಸಫ್ದರ್ ನಂತೆ ತಾನು ನಂಬಿದ ಮೌಲ್ಯ–ಸಿದ್ಧಾಂತಗಳಿಗೆ ಸಾಯಲು ಸಹ ಸಿದ್ಧನಾಗುವ ಧೈರ್ಯ ನನಗಿದೆಯೆ? ನನ್ನ ಜೀವ ಅಪಾಯದಲ್ಲಿದೆ ಅಂತ ಗೊತ್ತಿದ್ದೂ ಆಳರಸರ ಮುಂದೆ ಸತ್ಯ ಹೇಳಬಲ್ಲೆನೆ? ನನ್ನ ಕೆಲಸದ ಫಲ ನನ್ನ ಜೀವನಕಾಲದಲ್ಲಿ ಕಾಣಲು ಸಾಧ್ಯವಿಲ್ಲದಿದ್ದರೂ ನಾನು ಮಾಡಬೇಕೆಂದಿರುವ ಕೆಲಸ ಮಾಡಬಲ್ಲೆನೆ? ಈ ಪ್ರಶ್ನೆಗಳಿಗೆ ಆಗ ನನಗೆ ಉತ್ತರ ಅಸ್ಪಷ್ಟವಾಗಿತ್ತು. ಆದರೆ ಇಂದಿನ ಗಂಭೀರ ಪರಿಸ್ಥಿತಿಯಲ್ಲಿ ಉತ್ತರ ಸ್ಪಷ್ಟವಾಗಿದೆ. ಈ ಎಲ್ಲಾ ಪ್ರಶ್ನೆಗಳಿಗೆ ದೂರದ ವರೆಗೂ ಮಾರ್ದನಿಸುವಂತೆ ಗಟ್ಟಿಯಾದ ದನಿಯಲ್ಲಿ ಸ್ಪಷ್ಟವಾಗಿ 'ಹೌದು' ಎಂಬುದು ನಮ್ಮೆಲ್ಲರ ಉತ್ತರವಾಗಬೇಕು – ಹೀಗೆಂದವರು ಭಾರತದ ಪ್ರಸಿದ್ಧ ರಂಗ ಮತ್ತು ಸಿನಿಮಾ ಕಲಾವಿದ ನಾಸೀರುದ್ದೀನ್ ಶಾ.

ಅವರು ಅಕ್ಟೋಬರ್ 30 ರಂದು ವೆಬ್ ನಲ್ಲಿ ಸಫ್ದರ್ ಹಶ್ಮಿ ಸಾವು ಮತ್ತು ಬದುಕಿನ ಕುರಿತ 'ಹಲ್ಲಾ ಬೋಲ್' ನ ಕನ್ನಡ ಅನುವಾದ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು. ಈ ಪುಸ್ತಕದ ಮೂಲ ಲೇಖಕ ಸಫ್ದರ್ ಆರಂಭಿಸಿದ್ದ 'ಜನಮ್' ಬೀದಿನಾಟಕದ ತಂಡವನ್ನು ಇಂದಿಗೂ ಮುನ್ನಡೆಸುತ್ತಿರುವ ಸುಧನ್ವ ದೇಶಪಾಂಡೆ. ಅವರ ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿರುವವರು ಕರ್ನಾಟಕದ ಹಿರಿಯ ರಂಗಕರ್ಮಿ ಮತ್ತು ಪ್ರಮುಖ ಸಾಂಸ್ಕೃತಿಕ ಸಂಘಟನೆಯಾದ ಸಮುದಾಯದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಎಂ.ಜಿ.ವೆಂಕಟೇಶ್. ಈ ವೆಬ್ ಪುಸ್ತಕ ಬಿಡುಗಡೆಯನ್ನು ಪುಸ್ತಕದ ಪ್ರಕಾಶಕರಾದ ಕ್ರಿಯಾ ಮಾಧ್ಯಮ ಮತ್ತು ಸಮುದಾಯ ಕರ್ನಾಟಕ ಸಂಘಟಿಸಿತ್ತು.

ಕಲಾವಿದರಿಗೆ ಫ್ಯಾಸಿಸ್ಟ್ ಶಕ್ತಿಗಳು ಯಾಕಿಷ್ಟು ಹೆದರುತ್ತವೆ?

ಇಂದು ನಮಗೆ ಆಯ್ಕೆಯಿರುವುದು ಹುಸಿದೇಶಪ್ರೇಮದ ನಗಾರಿ ಬಾರಿಸುವುದು ಅಥವಾ ದೇಶದ್ರೋಹಿ ಎಂದು ಕರೆಸಿಕೊಳ್ಳುವುದರ ನಡುವೆ. ಸರಕಾರವನ್ನು ಪ್ರಶ್ನಿಸುವುದು ದೇಶಪ್ರೇಮದ ಕೊರತೆ, ಆಳರಸರೊಂದಿಗೆ ಸಣ್ಣ ಭಿನ್ನಮತ ಸಹ ದೇಶದ್ರೋಹ, ನಮ್ಮ ಪ್ರೀತಿಯ ದೇಶದ ಬಗೆಗಿನ ಕಾಳಜಿ ವಿಚ್ಛಿದ್ರಕಾರಕ ಮತ್ತು ದ್ವೇಷ – ಎಂದು ಪರಿಗಣಿಸಲಾಗುವ; ಇತಿಹಾಸವನ್ನು ಸುಳ್ಳುಗಳಿಂದ ವಿಕೃತಗೊಳಿಸುವುದಲ್ಲದೆ ಪುರಾಣವಾಗಿಸಿರುವ ಗಂಭೀರ ಸ್ಥಿತಿಯಲ್ಲಿ ನಾವು ಇದ್ದೇವೆ, ಇಂತಹ ಪರಿಸ್ಥಿತಿಯಲ್ಲಿ ಇದು ಮೌನವಾಗಿರುವ ಕಾಲವಲ್ಲ ಎಂದು ಉರ್ದು ಕವಿ ಸಾಹಿರ್ ಲುಧಿಯಾನವಿ ಅವರ 'ಅಗರ್ ಆಜ್ ಭಿ ಹಮ್ ಖಾಮೋಶ್ ರಹೆ..' ಎಂಬ ಕವಿತೆಯನ್ನು ಉದ್ಧರಿಸುತ್ತಾ ಅವರು ಹೇಳಿದರು.

ಸಫ್ದರ್ ಸಾವು ಮತ್ತು ಬದುಕಿನ ಕುರಿತು 'ಹಲ್ಲಾ ಬೋಲ್' ಪುಸ್ತಕವನ್ನು ಓದುತ್ತಿದ್ದಾಗ ನಾನು ಸರದಿಯಲ್ಲಿ ಹಲವು ಭಾವಗಳ ಮೂಲಕ ಹಾದು ಹೋದೆ – ಮಾಹಿತಿ ಪಡೆದೆ, ತಮಾಷೆಯೆನಿಸಿತು, ಕಸಿವಿಸಿಗೊಂಡೆ, ಭಾವುಕನಾದೆ ಮತ್ತು ಆಕ್ರೋಶಭರಿತನಾದೆ, ಅವರ ಜೀವನದಿಂದ ಒಬ್ಬ ಕಲಾವಿದನ ಬದುಕು ಸಮಾಜಕ್ಕೆ ಪ್ರಯೋಜನಕಾರಿ ಮತ್ತು ಪರಿಣಾಮಕಾರಿ ಆಗಬಲ್ಲುದು. ಅವರ ತಕ್ಷಣದ ಪ್ರಭಾವ, ಪರಿಣಾಮಗಳು ಇಲ್ಲದಿದ್ದರೂ, ಕಲಾವಿದರು, ಬುದ್ಧಿಜೀವಿಗಳು ಮತ್ತು ರಾಜಕೀಯ–ಸಾಮಾಜಿಕ ಕಾರ್ಯಕರ್ತರಿಗೆ ಸರ್ವಾಧಿಕಾರಿ ಮತ್ತು ಫ್ಯಾಸಿಸ್ಟ್ ಶಕ್ತಿಗಳು ಯಾಕೆ ಇಷ್ಟು ಹೆದರುತ್ತವೆ ಎಂದು ತಿಳಿದುಕೊಂಡೆ. ಯಾಕೆಂದರೆ ಅವರ ಪರಾಭವ ಮತ್ತು ಪರಿಣಾಮ ದೂರಗಾಮಿ ಹಾಗೂ ಆಳವಾಗಿರುತ್ತದೆ. ಅದಕ್ಕಾಗಿಯೇ, ಇಂದು ಬುದ್ಧಿಜೀವಿಗಳನ್ನು ಬೇಟೆಯಾಡಲಾಗುತ್ತಿದೆ. ಕಲಾವಿದರ ಸರದಿ ಸದ್ಯದಲ್ಲೇ ಬರಲಿದೆ. ಈ ನಿಟ್ಟಿನಲ್ಲಿ ಈಗ ಜೈಲಿನಲ್ಲಿರುವ ಬುದ್ಧಿಜೀವಿಗಳಾದ ಸುಧಾ ಭಾರದ್ವಾಜ್, ವರವರ ರಾವ್, ಸ್ಟಾನ್ಲಿ ಸ್ವಾಮಿ, ಡಾ. ತೇಲ್ತುಂಬ್ಡೆ ಅವರ ಜತೆ 'ನಾವಿದ್ದೇವೆ' ಎಂದು ಹೇಳಬೇಕಾಗಿದೆ ಎಂದು ಉರ್ದು ಕವಿ ಫೈಜ್ ಜೈಲಿನಲ್ಲಿ ಬರೆದ ಒಂದು ಕವಿತೆಯನ್ನು ಉದ್ಧರಿಸುತ್ತಾ ಅವರು ಹೇಳಿದರು.

'ಕಾರ್ಮಿಕರು ಮತ್ತು ಕಲಾವಿದರು ಸಹಚರರಾಗುತ್ತಿರುವುದು ಅಪಾಯಕಾರಿ'

ಈ ಪುಸ್ತಕವನ್ನು ಎಡಚಳುವಳಿಯಲ್ಲಿ ಮತ್ತು ರಂಗಭೂಮಿಯಲ್ಲಿ ಸಕ್ರಿಯರಾಗಿರುವುದರಿಂದ ಅಥವಾ ಅವರ ಸಮಕಾಲೀನರಾಗಿದ್ದರಿಂದ ಸಫ್ದರ್ ಜೀವನ್ ಕುರಿತು ಈಗಾಗಲೇ ತಿಳಿದುಕೊಂಡವರಿಗಾಗಿ ನಾನು ಬರೆದಿದ್ದಲ್ಲ. ಅವರ ಮರಣದ ನಂತರ ಹುಟ್ಟಿದ ಅವರ ಬಗ್ಗೆ ಕೇಳೇ ಇರದ ಅಥವಾ ಅವರ ಬಗ್ಗ ಅಲ್ಪ ಸ್ವಲ್ಪ ಕೇಳಿರುವ ಆದರೇ ಹೆಚ್ಚೇನೂ ಗೊತ್ತಿರದ ಆಸಕ್ತ ಯುವಜನತೆಗಾಗಿ ಬರೆದಿದ್ದು. ಹೀಗೆಂದವರು ಶಾ ಅವರಿಗಿಂತ ಮೊದಲು ತಮ್ಮ ಪುಸ್ತಕದ ಕುರಿತು ಮಾತನಾಡಿದ ಮೂಲ ಲೇಖಕ ಸುಧನ್ವ ದೇಶಪಾಂಡೆ. ಈ ನಿಟ್ಟಿನಲ್ಲಿ ಸಫ್ದರ್ ತಮ್ಮ ಏರುಯೌವನದಲ್ಲಿ ಹುತಾತ್ಮರಾಗಿ ಯುವಜನರ ಶಾಶ್ವತ ಹೀರೋ ಆದ ಚೇ, ಭಗತ್ ಸಿಂಗ್ ಅವರನ್ನು ಹೋಲುತ್ತಾರೆ. ಅವರನ್ನು ಬಹುವಾಗಿ ಮೆಚ್ಚಿಕೊಳ್ಳುವವರಿಗೂ ಅವರು ಹುತಾತ್ಮರಾದ ಕುರಿತು ಗೊತ್ತಿದ್ದಷ್ಟು, ಅವರ ಜೀವನ ಸಾಧನೆ ಅಥವಾ ಅವರು ಹುತಾತ್ಮರಾಗುವ ಪರಿಸ್ಥಿತಿ ಹೇಗೆ ಉಂಟಾಯಿತು ಎನ್ನುವುದರ ಕುರಿತು ಸಹ ಗೊತ್ತಿರುವುದಿಲ್ಲ ಎಂದು ಸುಧನ್ವ ಹೇಳಿದರು.

ಇದು ಹುತಾತ್ಮನಾದ ಬರಿಯ ಒಬ್ಬ ವ್ಯಕ್ತಿಯ ಜೀವನದ ಕಥನ ಮಾತ್ರವಲ್ಲ, ಅವನು ಕಟ್ಟಿಕೊಂಡ ಬೀದಿನಾಟಕ ತಂಡ ಜನಮ್, ಅವನು ಭಾಗವಾಗಿದ್ದ ರಾಜಕೀಯ ಚಳುವಳಿ, ಕಾರ್ಮಿಕ ಚಳುವಳಿ, ಸಾಂಸ್ಕೃತಿಕ ಪರಿಸರ, ಆ ಕಾಲದ ವಿದ್ಯಮಾನಗಳು ಇವೆಲ್ಲದರ ಕಥನ. ಆಳುವ ವರ್ಗ ಮತ್ತು ಪಕ್ಷ ಸಫ್ದರ್ ಎಂಬ ವ್ಯಕ್ತಿ ಅಪಾಯಕಾರಿ ಎಂದು ಅವನನ್ನು ಗುರಿಯಾಗಿಟ್ಟು ಮಾರಣಾಂತಿಕ ದಾಳಿ ಮಾಡಲಿಲ್ಲ. ಬದಲಾಗಿ ಕಾರ್ಮಿಕ ಪ್ರತಿನಿಧಿ ಸ್ಪರ್ಧಿಸಿದ್ದ ಚುನಾವಣೆಯ ಪ್ರಚಾರದ ಭಾಗವಾಗಿದ್ದ ಈ ನಾಟಕ ಪ್ರದರ್ಶನ ತಡೆಯುವುದು ಅವರ ಉದ್ದೇಶವಾಗಿತ್ತು. ಚುನಾವಣೆಯಲ್ಲಿ ನಿರ್ದಿಷ್ಟವಾಗಿ ಮತ್ತು ಸಾಮಾನ್ಯವಾಗಿ ದೈನಂದಿನ ಹೋರಾಟದಲ್ಲಿ ಹಾಗೂ ರಾಜಕಾರಣದಲ್ಲಿ ಕಾರ್ಮಿಕರು ಮತ್ತು ಕಲಾವಿದರ ತಂಡ ಸಹಚರರಾಗುತ್ತಿರುವುದು ಅವರಿಗೆ ಖಂಡಿತ ಅಪಾಯಕಾರಿಯಾಗಿ ಕಂಡಿತ್ತು. ಆ

ಪುಟ 15 ನೋಡಿ

ವ್ಯಕ್ತಿಯೋರ್ವನ ಸಾವು, ಸಿದ್ಧಾಂತವೊಂದರ ಬೆಳಕು ಒಟ್ಟಿಗೇ ಬೆಸೆಯುವ 'ಹಲ್ಲಾ ಬೋಲ್'

ಹಲ್ಲಾ ಬೋಲ್ ವ್ಯಕ್ತಿಯೋರ್ವನ ಸಾವು, ಸಿದ್ಧಾಂತವೊಂದರ ಬೆಳಕು ಎರಡನ್ನೂ ಒಟ್ಟಿಗೇ ಬೆಸೆಯುವ, ಇತಿಹಾಸವನ್ನು ಭವಿಷ್ಯತ್ತಿನ ಅಗತ್ಯಕ್ಕಾಗಿ ವರ್ತಮಾನದ ಪರಿಭಾಷೆಯಲ್ಲಿ ಆಪ್ತವಾಗಿ ಕಟ್ಟಿಕೊಡುವ ಅಪರೂಪದ ಪುಸ್ತಕವೊಂದು ಕನ್ನಡಕ್ಕೆ ಲಭಿಸಿದೆ.

ಲೇಖಕರಾದ ಸುಧನ್ವ ದೇಶಪಾಂಡೆ ಹಶ್ಮಿಯ ನೆನಪಿನ ಜಾಡಿನಗುಂಟ ಪಯಣಿಸುತ್ತಲೇ ಕಲಾಮೀಮಾಂಸೆಯ ಹಲವು ಪದರುಗಳನ್ನು ಸರಳರೇಖಾತ್ಮಕವಲ್ಲದ ರೀತಿಯಲ್ಲಿ, ಕಾಲದ ಎಲ್ಲ ಸಂಕೀರ್ಣತೆಗಳೂ ಪ್ರತಿಫಲಿಸುವಂತೆ ತುಂಬ ಬ್ರಿಲಿಯಂಟ್ ಆಗಿ ಮಂಡಿಸಿದ ಕಥನವಿದು. ಬೀದಿನಾಟಕ, ನಾಟಕಗಳ ಕುರಿತ ಹಲವು ಅಪಕಲ್ಪನೆಗಳನ್ನು ಹೋಗಲಾಡಿಸುತ್ತಲೇ ಕಾಲದ ಅಗತ್ಯಕ್ಕೆ ಅದನ್ನು ಮರುರೂಪಿಸುವ ಹಲವು ಸಾಧ್ಯತೆಗಳನ್ನು ಕಾಣಿಸುತ್ತದೆ. ಈ ಪುಸ್ತಕ.

ತುಂಬ ಕ್ಲಿಷ್ಟಕರವಾದ ಇಲ್ಲಿಯ ವಸ್ತು ಮಂಡನಾಕ್ರಮವನ್ನು ಸಾಕಷ್ಟು ಸಮರ್ಥವಾಗಿ ಕನ್ನಡಕ್ಕೆ ತಂದ ಎಂ.ಜಿ.ವೆಂಕಟೇಶರಿಗೆ, ಕ್ರಿಯಾಪ್ರಕಾಶನಕ್ಕೆ ನಾನು ಋಣಿ. ಬೀದಿಯಲ್ಲಿಯ ಹಠಾತ್ ತಿರುವುಗಳಷ್ಟೇ ಅನಿರೀಕ್ಷಿತವಾದ ಇಲ್ಲಿಯ ಮಂಡನಾ ಕ್ರಮವನ್ನು ವೆಂಕಟೇಶ್ ಬಹು ಪ್ರಯಾಸದಿಂದಲೇ ಕನ್ನಡಿಸಿದ್ದಾರೆ. ಕನ್ನಡದಲ್ಲೇ ಇಹ ಪರ ಕಾಣಬೇಕಾದ ಅನಿವಾರ್ಯತೆ ಇರುವ ನನ್ನಂತವರಿಗೆ ಇದೊಂದು ಕೊಡುಗೆ. ಬೀದಿ ಎಂಬ ರಂಗವ್ಯಾಕರಣವನ್ನು ಅರಿತುಕೊಳ್ಳಲು ತೀರ ಅಗತ್ಯವಾದ ಇಲ್ಲಿಯ ಪಾಠಗಳನ್ನು ರಂಗಾಭ್ಯಾಸಿಗಳು, ರಂಗಶಾಲೆಗಳೂ ತಮ್ಮರಂಗಾಭ್ಯಾಸಕ್ಕೆ ಅಗತ್ಯ ಆಕರವನ್ನಾಗಿ ಬಳಸಿಕೊಳ್ಳಲಿ ಎಂಬ ಹಾರೈಕೆ.

– ಶ್ರೀಪಾದ ಭಟ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**